ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 13 ಗುರುವಾರ 2024

ಸಂಪುಟ: 45 | ಸಂಚಿಕೆ: 58 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 242869
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ದರ್ಶನ್ ಗ್ಯಾಂಗ್‌ನಿಂದ ಅಭಿಮಾನಿ ಹತ್ಯೆ ಪ್ರಕರಣ

ತನಿಖೆಗೆ ಪೊಲೀಸರು ಮುಕ್ತ

●ಗೃಹ ಸಚಿವ ಡಾ.ಪರಮೇಶ್ವರ್ ಸ್ಪಷ್ಟನೆ ●ಸಿಬಿಐ ಇಲ್ಲ ಬೇರೆ ತನಿಖೆಯ ಅಗತ್ಯವಿಲ್ಲ ●ಕಾನೂನು ನಟ ದರ್ಶನ್‌ಗೂ; ಡಾ.ಪರಮೇಶ್ವರ್‌ಗೂ ಒಂದೇ ●ನಿಯಮದ ಚೌಕಟ್ಟಲ್ಲಿ ಪೊಲೀಸರ ಅಂತರ ಜಿಲ್ಲಾ ವರ್ಗಾವಣೆ ಪ್ರಕ್ರಿಯೆ



ಬೆಂಗಳೂರು, ಜೂ.12 (ಕೆಎಂಶಿ)– ಕೊಲೆ ಆರೋಪ ಎದುರಿಸುತ್ತಿರುವ ನಟ ದರ್ಶನ್ ರಕ್ಷಣೆಗೆ ಯಾವ ರಾಜಕಾರಣಿಯೂ ಪ್ರಯತ್ನ ಮಾಡಿಲ್ಲ. ಸರ್ಕಾರದಿಂದ ನಾವ್ಯಾರೂ ಮಧ್ಯ ಪ್ರವೇಶಿಸುವುದಿಲ್ಲ. ಮುಕ್ತವಾಗಿ ತನಿಖೆ ನಡೆಸಲು ಪೊಲೀಸರಿಗೆ ಅವಕಾಶವಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನಿನಲ್ಲಿ ಏನೆಲ್ಲ ಕ್ರಮ ತೆಗೆದುಕೊಳ್ಳಲು ಅವಕಾಶವಿದೆಯೋ ಅದನ್ನು ಪೊಲೀಸರು ಮಾಡುತ್ತಾರೆ. ಎಲ್ಲರಿಗೂ ಕಾನೂನು ಒಂದೇ, ನಟ ದರ್ಶನ್‌ಗೂ ಒಂದೇ ಕಾನೂನು, ಡಾ. ಪರಮೇಶ್ವರ್‌ಗೂ ಒಂದೇ ಕಾನೂನು. ಯಾರು ಸಹ ಕಾನೂನು ಕೈಗೆತ್ತಿಕೊಳ್ಳಬಾರದು ಎಂದರು.

ರೇಣುಕಾಸ್ವಾಮಿ ಸಾಮಾಜಿಕ ಜಾಲತಾಣದಲ್ಲಿ ನಟ ದರ್ಶನ್ ಅವರ ಆಪ್ತೆ ಬಗ್ಗೆ ಕೆಟ್ಟದಾಗಿ ಕಾಮೆಂಟ್ ಮಾಡಿದ್ದ ಎನ್ನಲಾಗಿದೆ, ಈ ಬಗ್ಗೆ ದರ್ಶನ್ ದೂರು ಕೊಡಬಹುದಾಗಿತ್ತು. ಪೊಲೀಸರು ಕೂಡಲೆ ಕ್ರಮ ತೆಗೆದುಕೊಳ್ಳುತ್ತಿದ್ದರು. ಅದನ್ನು ಬಿಟ್ಟು ರೇಣುಕಾಸ್ವಾಮಿಯನ್ನು ಕರೆದುಕೊಂಡು ಬಂದು ಹೊಡೆದು ಸಾಯಿಸಿದ್ದಾರೆ ಎಂಬ ಮಾಹಿತಿ ಇದೆ. ದೂರು ಕೊಟ್ಟಿದ್ದರೆ ಇದೆಲ್ಲವನ್ನು ●6ನೇ ಪುಟಕ್ಕೆ

ನಟ ದರ್ಶನ್ ಸೇರಿ ಎಲ್ಲಾ ಆರೋಪಿಗಳ ಕರೆದೊಯ್ದು

ಪಟ್ಟಣಗೆರೆ ಶೆಡ್‌ನಲ್ಲಿ ಸ್ಥಳ ಮಹಜರು





ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಕನ್ನಡದ ನಟ ದರ್ಶನ್, ಪವಿತ್ರಾಗೌಡ ಸೇರಿದಂತೆ ಎಲ್ಲಾ 13 ಆರೋಪಿಗಳನ್ನು ಪಟ್ಟಣಗೆರೆಯ ಶೆಡ್‌ಗೆ ಕರೆದೊಯ್ದು ಪೊಲೀಸರು ಸ್ಥಳ ಮಹಜರು ನಡೆಸಿದ್ದಾರೆ.

ಚಿತ್ರದುರ್ಗದಿಂದ ಅಪಹರಿಸಿಕೊಂಡು ಬಂದಿದ್ದ ರೇಣುಕಾಸ್ವಾಮಿಯನ್ನು ಇದೇ ಶೆಡ್‌ಗೆ ಕರೆದೊಯ್ದು ಚಿತ್ರಹಿಂಸೆ ನೀಡಿ ಹತ್ಯೆ ಮಾಡಿದ್ದರು. ಹೀಗಾಗಿ ಅಲ್ಲಿ ಸಾಕ್ಷ್ಯಗಳನ್ನು ಸಂಗ್ರಹಿಸಲು ಎಫ್‌ಎಸ್‌ಎಲ್ ತಂಡ ಹಾಗೂ ಪೊಲೀಸರು ಮುಂದಾಗಿದ್ದಾರೆ.

ದರ್ಶನ್ ಅಭಿಮಾನಿ ರೇಣುಕಾಸ್ವಾಮಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ದರ್ಶನ್, ಪವಿತ್ರಾಗೌಡ, ನಿಖಿಲ್, ವಿನಯ್, ಕಾರ್ತಿಕ್ ಮತ್ತು ರಾಘವೇಂದ್ರ ಸೇರಿದಂತೆ 13 ಆರೋಪಿಗಳನ್ನು ಮಂಗಳವಾರ ಬಂಧಿಸಲಾಗಿದ್ದು ನಿನ್ನೆ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್ ಆರೋಪಿಗಳನ್ನು 6 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಪಟ್ಟಣಗೆರೆಯ ಶೆಡ್‌ನಲ್ಲಿ ಹತ್ಯೆ ಮಾಡಿದ ಬಳಿಕ ಆರೋಪಿಗಳ ಪೈಕಿ ನಾಲ್ವರು ಶವವನ್ನು ಸುಮನಹಳ್ಳಿಯ ಬಳಿ ರಾಜಕಾಲುವೆಗೆ ಎಸೆದು ಪರಾರಿಯಾಗಿದ್ದರು. ಈ ಹಿನ್ನೆಲೆಯಲ್ಲಿ ಪಟ್ಟಣಗೆರೆ ಶೆಡ್ ಸ್ಥಳ ಮಹಜರಿಗೂ ಮುನ್ನ ಆರೋಪಿಗಳನ್ನು ಶವ ಎಸೆದ ಜಾಗದಲ್ಲಿ ಸ್ಥಳ ಮಹಜರು ನಡೆಸಿದ್ದರು. ಚಿತ್ರದುರ್ಗದ ಜಿಲ್ಲಾ ಕೇಂದ್ರ ಪಟ್ಟಣದ ನಿವಾಸಿ ರೇಣುಕಾಸ್ವಾಮಿ ಅವರು ದರ್ಶನ್ ಅವರ ಆಪ್ತ ಸ್ನೇಹಿತೆ ಪವಿತ್ರಾಗೌಡಗೆ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ದರ್ಶನ್ ಮತ್ತು ವಿಜಯಲಕ್ಷ್ಮಿ ದಾಂಪತ್ಯದಲ್ಲಿ ಬಿರುಕು ಮೂಡಿಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಪೊಲೀಸ್ ಮೂಲಗಳ ಪ್ರಕಾರ, ಅವರು 'ಅಸಭ್ಯ ಭಾಷೆ' ಬಳಸಿದ್ದಾರೆ ಮತ್ತು ಆಕ್ಷೇಪಾರ್ಹ ಸಂದೇಶಗಳನ್ನು ಪೋಸ್ಟ್ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಕೇಂದ್ರ ಸಚಿವರಾಗಿ ಕುಮಾರಸ್ವಾಮಿ ಕಾರ್ಯಭಾರ

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿ ಜಿಟಿಡಿ ಸಾಧ್ಯತೆ

ಜೆಡಿಎಸ್ ರಾಜ್ಯಾಧ್ಯಕ್ಷಗಾದಿಗೆ ಕಾಶೆಂಪೂರ್, ಸುರೇಶ್ ಬಾಬು ಇಲ್ಲವೆ ಶರಣಗೌಡ ಕಂದಕೂರ್





ಕಾಶೆಂಪೂರ



ಸುರೇಶ್ ಬಾಬು



ಶರಣಗೌಡ

ಬೆಂಗಳೂರು, ಜೂ.12(ಕೆಎಂಶಿ)– ಕೇಂದ್ರ ಸಂಪುಟದಲ್ಲಿನ ಕಾರ್ಯಭಾರದ ಹಿನ್ನೆಲೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಅವರು ಜೆಡಿಎಸ್ ರಾಜ್ಯಾಧ್ಯಕ್ಷ ಸ್ಥಾನ ತೆರವುಗೊಳಿಸಲು ನಿರ್ಧರಿಸಿದ್ದಾರೆ.

ಅಷ್ಟೇ ಅಲ್ಲ, ಮಂಡ್ಯದಿಂದ ಲೋಕಸಭೆಗೆ ಆಯ್ಕೆಗೊಂಡಿರುವುದರಿಂದ ಅವರು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೂ ಇನ್ನು ಎರಡು ದಿನಗಳೊಳಗಾಗಿ ರಾಜೀನಾಮೆ ನೀಡಬೇಕಾಗಿದೆ.

ಶಾಸಕ ಸ್ಥಾನ ತೆರವಾದ ಬೆನ್ನಲ್ಲೇ ವಿಧಾನ ಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕತ್ವವೂ ತೆರವಾಗಲಿದ್ದು ಆ ಸ್ಥಾನಕ್ಕೆ ಶಾಸಕರ ಸಭೆ ಕರೆದು ನಾಯಕನ ಆಯ್ಕೆ ಮಾಡಬೇಕಿದೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರಾಗಿ ಹಿರಿಯ ಸದಸ್ಯ ಜಿ.ಟಿ.ದೇವೇಗೌಡರನ್ನು ನೇಮಿಸುವ ಬಗ್ಗೆ ಚರ್ಚೆ ನಡೆದಿದೆ, ಆದರೆ, ಅವರು ಈಗಾಗಲೇ ಪಕ್ಷದ ಕೋರ್ ಕಮಿಟಿ ಅಧ್ಯಕ್ಷರಾಗಿದ್ದಾರೆ.

ದೇವೇಗೌಡರನ್ನು ಹೊರತುಪಡಿಸಿದರೆ ಎಚ್.ಡಿ.ರೇವಣ್ಣ ಅವರೇ ಹಿರಿಯ ಸದಸ್ಯರು, ಆದರೆ, ಪ್ರಸಕ್ತ ಸನ್ನಿವೇಶದಲ್ಲಿ ಅವರಿಗೆ ಯಾವುದೇ ಅಧಿಕಾರವನ್ನು ಪಕ್ಷ ನೀಡುವ ಸಾಧ್ಯತೆ ಇಲ್ಲ. ●6ನೇ ಪುಟಕ್ಕೆ

ಹೆಚ್‌ಎಸ್‌ಆರ್‌ಪಿ ಅಳವಡಿಸದ ವಾಹನಗಳ ವಿರುದ್ಧ ಜು.4ರವರೆಗೆ ಯಾವುದೇ ಕ್ರಮ ಇಲ್ಲ



ಬೆಂಗಳೂರು, ಜೂ.12–ರಾಜ್ಯದಲ್ಲಿ ಹೆಚ್‌ಎಸ್‌ಆರ್‌ಪಿ (ಅತೀ ಸುರಕ್ಷಿತ ನೋಂದಣಿ ಫಲಕ) ಅಳವಡಿಸದ ವಾಹನ ಮಾಲೀಕರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಂತೆ ಮೇ 21ರಂದು ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಜುಲೈ 4ರವರೆಗೆ ವಿಸ್ತರಿಸಿದೆ. ಇದರಿಂದ ವಾಹನ ಮಾಲೀಕರು ನಿಟ್ಟುಸಿರು ಬಿಡುವಂತಾಗಿದೆ.

ಹೆಚ್‌ಎಸ್‌ಆರ್‌ಪಿ ಅಳವಡಿಕೆಗೆ ವಿಧಿಸಲಾಗಿರುವ ಗಡುವನ್ನು ಮೇ 31ರವರೆಗೆ ವಿಸ್ತರಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಹೆಚ್‌ಎಸ್‌ಆರ್‌ಪಿ ತಯಾರಿಕಾ ಕಂಪನಿಯಾದ ಬಿಎನ್‌ಡಿ ಎನರ್ಜಿ ಲಿಮಿಟೆಡ್ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ಕಳೆದ ವಿಚಾರಣೆ ವೇಳೆ ಹೆಚ್‌ಎಸ್‌ಆರ್‌ಪಿ ಅಳವಡಿಕೆಗೆ ನೀಡಿದ್ದ ●6ನೇ ಪುಟಕ್ಕೆ

ಅಪ್ರಾಪ್ತ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಆರೋಪ

ಯಡಿಯೂರಪ್ಪಗೆ ಸಿಐಡಿ ನೋಟಿಸ್



ಬೆಂಗಳೂರು: ತಮ್ಮ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ತನಿಖಾ ತಂಡದ ಮುಂದೆ ಹಾಜರಾಗುವಂತೆ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರಿಗೆ ಅಪರಾಧ ತನಿಖಾ ಇಲಾಖೆ (ಸಿಐಡಿ) ನೋಟಿಸ್ ಜಾರಿ ಮಾಡಿದೆ ಎಂದು ಬುಧವಾರ ಪೊಲೀಸ್ ಮೂಲಗಳು ತಿಳಿಸಿವೆ. ಯಡಿಯೂರಪ್ಪ ಅವರು ಸದ್ಯ ದೆಹಲಿಯಲ್ಲಿದ್ದು, ಅವರು ವಾಪಸ್ಸಾದ ನಂತರವೇ ತನಿಖಾ ತಂಡದ ಮುಂದೆ ಹಾಜರಾಗುವ ಸಾಧ್ಯತೆ ಇದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ. ಪೊಲೀಸರ ಪ್ರಕಾರ, ಯಡಿಯೂರಪ್ಪ ವಿರುದ್ಧ 17 ವರ್ಷದ ಅಪ್ರಾಪ್ತೆಯ ತಾಯಿ ನೀಡಿರುವ ದೂರಿನ ಆಧಾರದ ಮೇಲೆ ಲೈಂಗಿಕ ಅಪರಾಧದಿಂದ ಮಕ್ಕಳ ರಕ್ಷಣೆ (ಪೋಕ್ಸೊ) ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 354 ಎ (ಲೈಂಗಿಕ ಕಿರುಕುಳ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ವರ್ಷದ ಫೆಬ್ರವರಿ 2ರಂದು ಯಡಿಯೂರಪ್ಪ ನಿವಾಸಕ್ಕೆ ತೆರಳಿದ್ದ ವೇಳೆ ಅವರು ತನ್ನ ಮಗಳ ●6ನೇ ಪುಟಕ್ಕೆ

ಮೈಸೂರಲ್ಲಿ ಸರ್ಕಾರಿ ಗೌರವದೊಂದಿಗೆ

ಪಂಡಿತ್ ರಾಜೀವ್ ತಾರಾನಾಥ್ ಅಂತ್ಯಕ್ರಿಯೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ, ಡಿಸಿ ಡಾ.ಕೆ.ವಿ.ರಾಜೇಂದ್ರ, ಸಾಹಿತಿಗಳು, ಸಂಗೀತ ವಿದ್ವಾಂಸರು, ಶಿಷ್ಯಂದಿರು, ಒಡನಾಡಿಗಳಿಂದ ಸಂಗೀತ ಸಾಧಕನ ಪಾರ್ಥಿವ ಶರೀರದ ಅಂತಿಮ ದರ್ಶನ–ನಮನ



ಮೈಸೂರಿನ ಕುವೆಂಪುನಗರದ ನಿವಾಸದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ.ಚಂದ್ರಶೇಖರ ಕಂಬಾರ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ತಾರಾನಾಥ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.



ಪಂ. ರಾಜೀವ್ ತಾರಾನಾಥ್

ಮೈಸೂರು, ಜೂ. 11(ಆರ್‌ಕೆ)– ಮಂಗಳವಾರ ನಿಧನರಾದ ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರ ಅಂತ್ಯಕ್ರಿಯೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಬುಧವಾರ ಮಧ್ಯಾಹ್ನ ನೆರವೇರಿತು.

ಮಧ್ಯಾಹ್ನ 1.45ರಿಂದ 2 ಗಂಟೆ ವೇಳೆಗೆ ಸಿಎಆರ್ ಪೊಲೀಸರು ಗೌರವ ವಂದನೆ ಸಲ್ಲಿಸಿದ ಬಳಿಕ ರಾಜೀವ್ ತಾರಾನಾಥ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ಅವರ ಒಡನಾಡಿಗಳು, ಜಿಲ್ಲಾಡಳಿತದ ಅಧಿಕಾರಿಗಳು, ಸಂಗೀತ ವಿದ್ವಾಂಸರು, ಪ್ರಾಧ್ಯಾಪಕರು, ಹಿರಿಯ ಪತ್ರಕರ್ತರು, ಶಿಷ್ಯವೃಂದದವರ ಸಮ್ಮುಖದಲ್ಲಿ ನೆರವೇರಿಸಲಾಯಿತು. ಅದಕ್ಕೂ ಮೊದಲು ಮೈಸೂರಿನ ಕುವೆಂಪುನಗರದ ಪಂಚಮಂತ್ರ ರಸ್ತೆಯ ಜ್ಞಾನಗಂಗಾ ಶಾಲೆ ಬಳಿ ಇರುವ ಅವರ ನಿವಾಸದಲ್ಲಿ ಬುಧವಾರ ●6ನೇ ಪುಟಕ್ಕೆ

ಮೈಸೂರು ಮಿತ್ರ ಗುರುವಾರ 13 ಜೂನ್ 2024

ಟಿ20 ವಿಶ್ವಕಪ್ ಅಮೆರಿಕ ಮಣಿಸಿದ ಭಾರತ

ಭರ್ಜರಿಯಾಗಿ ಸೂಪರ್ 8 ಹಂತಕ್ಕೆ ಲಗ್ಗೆ



ನ್ಯೂಯಾರ್ಕ್: ಅರ್ಶದೀಪ್ ಸಿಂಗ್ ಮಾರಕ ಬೌಲಿಂಗ್ ಹಾಗೂ ಸೂರ್ಯ ಕುಮಾರ್ ಯಾದವ್ ಮತ್ತು ಶಿವಂ ದುಬೆ ಅವರ ಸಮಯೋಚಿತ ಜತೆಯಾಟದ ನೆರವಿನಿಂದ ಆತಿಥೇಯ ಯುಎಸ್ಎ ತಂಡದ ಎದುರು 7 ವಿಕೆಟ್ ಭರ್ಜರಿ ಗೆಲುವು ಸಾಧಿಸಿದೆ. ಈ ಮೂಲಕ 2024ರ ಐಸಿಸಿ ಟಿ20 ವಿಶ್ವಕಪ್ ಟೂರ್ನಿಯ 'ಎ' ಗುಂಪಿನಲ್ಲಿ ಮೊದಲ ತಂಡವಾಗಿ ಸೂಪರ್ 8 ಹಂತಕ್ಕೆ ಲಗ್ಗೆಯಿಡುವಲ್ಲಿ ಯಶಸ್ವಿಯಾಗಿದೆ. ಟೂರ್ನಿಯಲ್ಲಿ ಭಾರತ ಹ್ಯಾಟ್ರಿಕ್ ಗೆಲುವು ಸಾಧಿಸಿದರೆ, ಆತಿಥೇಯ ಯುಎಸ್ಎ ತಂಡವು ಟೂರ್ನಿಯಲ್ಲಿ ಮೊದಲ ಸೋಲಿನ ಕಹಿ ಅನುಭವಿಸಿದೆ.

ಇಲ್ಲಿನ ನಾಸೌ ಕೌಂಟಿ ಅಂತಾರಾಷ್ಟ್ರೀಯ ಮೈದಾನದಲ್ಲಿ ಗೆಲ್ಲಲು 111 ರನ್‌ಗಳ ಸಾಧಾರಣ ಗುರಿ ಬೆನ್ನತ್ತಿದ ಭಾರತ, ಮೊದಲ ಓವರ್‌ನಲ್ಲೇ ವಿರಾಟ್ ಕೊಹ್ಲಿ ವಿಕೆಟ್ ಕಳೆದುಕೊಂಡಿತು. ಮುಂಬೈ ಮೂಲದ ವೇಗಿ ಸೌರಭ್ ನೇತ್ರಾವಲ್ಕರ್ ಬೌಲಿಂಗ್‌ನಲ್ಲಿ ಕೊಹ್ಲಿ ಶೂನ್ಯ ಸುತ್ತಿ ವಿಕೆಟ್ ಕೀಪರ್‌ಗೆ ಕ್ಯಾಚಿತ್ತು ಪೆವಿಲಿಯನ್ ಸೇರಿದರು. ಇನ್ನು ನಾಯಕ ರೋಹಿತ್ ಶರ್ಮಾ ಕೂಡಾ ಕೇವಲ 3 ರನ್ ಗಳಿಸಿ ನೇತ್ರಾವಲ್ಕರ್‌ಗೆ ಎರಡನೇ ಬಲಿಯಾದರು. ಟೀಂ ಇಂಡಿಯಾ 10 ರನ್ ಗಳಿಸುವಷ್ಟರಲ್ಲಿ ಆರಂಭಿಕರಿಬ್ಬರು ಪೆವಿಲಿಯನ್ ಸೇರಿದರು. ಇನ್ನು ವಿಕೆಟ್ ಕೀಪರ್ ಬ್ಯಾಟರ್ ರಿಷಭ್ ಪಂತ್ 18 ರನ್ ಗಳಿಸಿ ಅಲಿ ಖಾನ್‌ಗೆ ವಿಕೆಟ್ ಒಪ್ಪಿಸಿದರು.

ದುಬೆ-ಸೂರ್ಯ ಗೆಲುವಿನ ಜತೆಯಾಟ: ಕೇವಲ 39 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡು ಕಂಗಾಲಾಗಿದ್ದ ಭಾರತ ತಂಡಕ್ಕೆ 4ನೇ ವಿಕೆಟ್‌ಗೆ ಸೂರ್ಯಕುಮಾರ್ ಯಾದವ್ ಹಾಗೂ ಶಿವಂ ದುಬೆ 65 ಎಸೆತಗಳನ್ನು ಎದುರಿಸಿ ಮುರಿಯದ 67 ರನ್‌ಗಳ ಜತೆಯಾಟವಾಡುವ ಮೂಲಕ ಇನ್ನೂ 10 ಎಸೆತ ಬಾಕಿ ಇರುವಂತೆಯೇ ತಂಡವನ್ನು ಗೆಲುವಿನ ದಡ ಸೇರಿಸಿದರು. ಸೂರ್ಯಕುಮಾರ್ ಯಾದವ್ 49 ಎಸೆತಗಳನ್ನು ಎದುರಿಸಿ ತಲಾ 2 ಬೌಂಡರಿ ಹಾಗೂ ಸಿಕ್ಸರ್ ನೆರವಿನಿಂದ ಅಜೇಯ 50 ರನ್ ಬಾರಿಸಿದರು. ಇದು ಟಿ20 ಕ್ರಿಕೆಟ್‌ನಲ್ಲಿ ಸೂರ್ಯ ಬಾರಿಸಿದ 50ನೇ ಅರ್ಧಶತಕ ಎನಿಸಿತು. ಇನ್ನು ಸೂರ್ಯಕುಮಾರ್ ಯಾದವ್‌ಗೆ ಉತ್ತಮ ಸಾಥ್ ನೀಡಿದ ಶಿವಂ ದುಬೆ 35 ಎಸೆತಗಳನ್ನು ಎದುರಿಸಿ ತಲಾ ಒಂದು ಬೌಂಡರಿ ಹಾಗೂ ಸಿಕ್ಸರ್ ಸಹಿತ ಅಜೇಯ 31 ರನ್ ಸಿಡಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಪರಿಸರ ಸಂರಕ್ಷಣೆಗೆ ಸಾರ್ವಜನಿಕರು ಸಹಕರಿಸಬೇಕು

ವಿಶ್ವಮಾನವ ಮೈಸೂರು ವಿವಿ ನೌಕರರ ವೇದಿಕೆಯು ಆಯೋಜಿಸಿದ್ದ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಡಿಸಿಎಫ್ ಸೀಮಾ ಸಲಹೆ

ಮೈಸೂರು, ಜೂ.12(ಎಂಟಿವೈ)– ಮುಂದಿನ ಪೀಳಿಗೆಗೆ ಉತ್ತಮ ಪರಿಸರ ಕೊಡುಗೆ ನೀಡುವ ನಿಟ್ಟಿನಲ್ಲಿ ಇಂದಿನಿಂದಲೇ ಪರಿಸರ ಸಂರಕ್ಷಣೆಯ ಮಹತ್ವದ ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಹುಣಸೂರು ಉಪವಿಭಾಗದ ಡಿಸಿಎಫ್ ಪಿ.ಎ.ಸೀಮಾ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಸಂಜೆ ಕಾಲೇಜು ಆವರಣದಲ್ಲಿ ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆಯು ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಗಿಡ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆ ಮಾಡುವ ಕಾರ್ಯ ಕೇವಲ ಅರಣ್ಯ ಇಲಾಖೆಯದ್ದಲ್ಲ. ಸಾರ್ವಜನಿಕರು, ಸಂಘ ಸಂಸ್ಥೆಗಳು ಅರಣ್ಯ ಇಲಾಖೆಯೊಂದಿಗೆ ಸದುದ್ದೇಶಕ್ಕೆ ಕೈಜೋಡಿಸಬೇಕು. ಇತ್ತೀಚಿನ ದಿನಗಳಲ್ಲಿ ಅರಣ್ಯ ಇಲಾಖೆಯೊಂದಿಗೆ ಸಾರ್ವಜನಿಕರು ಕೈಜೋಡಿಸುತ್ತಿರುವುದು ಶ್ಲಾಘನೀಯ ಎಂದರು.

ಗಾಂಧಿ ಭವನ ಹಾಗೂ ಪ್ರಾಚ್ಯವಿದ್ಯಾ ಸಂಶೋಧನಾಲಯದ ವಿಶ್ರಾಂತ ನಿರ್ದೇಶಕ ಪ್ರೊ.ಎಸ್.ಶಿವರಾಜಪ್ಪ ಮಾತನಾಡಿ, ಹಸಿರೇ ಉಸಿರು ಎಂಬ ಮಾತಿದೆ. ಪ್ರತಿಯೊಬ್ಬರೂ ಉಸಿರಾಡಲು ಶುದ್ಧ ಗಾಳಿ ಬೇಕು. ಇದಕ್ಕಾಗಿ ಮರಗಿಡಗಳನ್ನು ಬೆಳೆಸಬೇಕು. ಪರಿಸರ ಸಂರಕ್ಷಣೆಯ ವಿಷಯ ಇಂದು-ನಿನ್ನೆಯದ್ದಲ್ಲ. ಮೊದಲಿನಿಂದಲೂ ಪರಿಸರದ ವಿಷಯ ಪ್ರಸ್ತಾಪವಾಗಿದೆ. ಪರಿಸರ ಇದ್ದರೆ ನಾವು ಎಂಬುದನ್ನು ಪ್ರತಿಯೊಬ್ಬರೂ ಅರಿಯಬೇಕು ಎಂದರು.



ಮೈಸೂರು ವಿವಿ ಸಂಜೆ ಕಾಲೇಜು ಆವರಣದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ಬುಧವಾರ ಡಿಸಿಎಫ್ ಪಿ.ಎ. ಸೀಮಾ, ಆರ್‌ಎಫ್‌ಓ ರಶ್ಮಿ, ಅರಣ್ಯ ಇಲಾಖೆ ಪತ್ರಾಂಕಿತ ವ್ಯವಸ್ಥಾಪಕಿ ಬಿ.ಪ್ರಮೀಳಾ ಗಿಡ ನೆಟ್ಟು ನೀರೆರೆದರು.


ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಮಾತನಾಡಿ, ಹುಟ್ಟುಹಬ್ಬ ಮತ್ತಿತರ ಸಂದರ್ಭಗಳಲ್ಲಿ ಕೇಕ್ ಕತ್ತರಿಸುವುದರ ಜೊತೆಗೆ ಒಂದೊಂದು ಗಿಡ ನೆಡುವುದು ಉತ್ತಮ. ನಾನು ಮಾನಸಗಂಗೋತ್ರಿಯ ಸಿಸ್ಟ್‌ನಲ್ಲಿ ಕೆಲಸ ಮಾಡುವಾಗ ವಿದ್ಯಾರ್ಥಿಗಳ ಹುಟ್ಟುಹಬ್ಬದಂದು ಗಿಡ ನೆಡುವಂತೆ ಪ್ರೇರೇಪಿಸುತ್ತಿದ್ದೆ. ಪ್ರತಿಯೊಬ್ಬರು ಜನ್ಮದಿನ ಆಚರಿಸಿಕೊಳ್ಳುವಾಗ ಗಿಡವೊಂದನ್ನು ನೆಡುವ ಸಂಪ್ರದಾಯ ಬೆಳೆಸಿಕೊಳ್ಳುವುದು ಉತ್ತಮ. ಇದರಿಂದ ಸುತ್ತಮುತ್ತಲಿನ ಪರಿಸರ ಸಂರಕ್ಷಣೆ ಮಾಡುವುದರೊಂದಿಗೆ ಹಸಿರಿನ ವಾತಾವರಣ ಸೃಷ್ಟಿಸಬಹುದು. ಮೈಸೂರು ವಿಶ್ವವಿದ್ಯಾನಿಲಯದ ಕ್ಯಾಂಪಸ್ ಹಸಿರಾಗಿರಲು ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ಎಸ್.ಕೆ. ಮುಜಾವರ್ ಶ್ರಮ ಪ್ರಮುಖ ಪಾತ್ರವಹಿಸುತ್ತದೆ. ಗಿಡ ನೆಟ್ಟ ನಂತರ ಪೋಷಣೆಯೂ ಮುಖ್ಯ. ಆಕಸ್ಮಿಕವಾಗಿ ಗಿಡ ಹಾಳಾದರೆ ಅದೇ ಜಾಗದಲ್ಲಿ ಮತ್ತೊಂದು ಗಿಡ ನೆಡಲು ಮುಂದಾಗಬೇಕು. ಗಿಡ ನೆಟ್ಟವರ ಹೆಸರುಳ್ಳ ಫಲಕ ಹಾಕಿದಾಗ ಆ ಗಿಡಗಳ ಸಂರಕ್ಷಣೆ ಹಾಗೂ ಪೋಷಣೆಗೆ ನೆರವಾಗುತ್ತದೆ ಎಂದರು.

ಕೆ.ಆರ್.ನಗರದ ಆರ್‌ಎಫ್‌ಓ ಎಂ.ಆರ್. ರಶ್ಮಿ ಮಾತನಾಡಿ, ಗಿಡ ನೆಟ್ಟು ಭೂಮಿ ಉಳಿಸಿ ಎಂಬ ಧ್ಯೇಯದೊಂದಿಗೆ ಅರಣ್ಯ ಇಲಾಖೆ ಕೆಲಸ ಮಾಡುತ್ತಿದೆ. ನಮ್ಮ ಭೂಮಿ ಉಳಿಸಿಕೊಳ್ಳಲು ಹೆಚ್ಚಿನ ಪ್ರಮಾಣದ ಹಸಿರೀಕರಣ ಮಾಡುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಅರಣ್ಯ ಇಲಾಖೆ ಪತ್ರಾಂಕಿತ ವ್ಯವಸ್ಥಾಪಕಿ ಬಿ.ಪ್ರಮೀಳಾ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಿಸಿಆರ್‌ಬಿ ಇನ್ಸ್‌ಪೆಕ್ಟರ್ ರಾಮು ಕುಮಾರ್, ಮಹಾರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಚ್. ಸೋಮಶೇಖರಪ್ಪ, ಯುವರಾಜ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಕೆ.ಮಹೇಶ್, ಮಹಾರಾಜ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಎಸ್.ಮಹದೇವಮೂರ್ತಿ, ಮಾನಸಗಂಗೋತ್ರಿ ಸಮಾಜ ಕಾರ್ಯ ವಿಭಾಗದ ಪ್ರಾಧ್ಯಾಪಕಿ ಡಾ.ಹೆಚ್.ಪಿ.ಜ್ಯೋತಿ, ಮೈವಿವಿ ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ಎಸ್.ಕೆ.ಮುಜಾವರ್, ವಿಶ್ವಮಾನವ ವಿವಿ ನೌಕರರ ವೇದಿಕೆ ಅಧ್ಯಕ್ಷ ಆರ್.ವಾಸುದೇವ, ನಿರ್ದೇಶಕಿ ಚೆಲುವಾಂಬಿಕೆ, ಭಾಸ್ಕರ್, ವಿನೋದ್, ಯೋಗೇಶ್, ವಿವೇಕ್, ಗಣೇಶ್ ಇನ್ನಿತರರಿದ್ದರು.

> ಪರಿಸರ ಸಂರಕ್ಷಣೆ, ಗಿಡನೆಟ್ಟು ಪೋಷಿಸುವುದು ಕೇವಲ ಅರಣ್ಯ ಇಲಾಖೆಗೆ ಮಾತ್ರ ಸೀಮಿತವಾದ ಕೆಲಸವಲ್ಲ. ಪರಿಸರ ಸಂರಕ್ಷಣೆ ಮಾಡುವುದು ಎಲ್ಲರ ಜವಾಬ್ದಾರಿ. ಅರಣ್ಯ ಇಲಾಖೆಗೆ ಎಲ್ಲರೂ ಸಹಕಾರ ನೀಡಿದರೆ ಮಾತ್ರ ಉತ್ತಮ ಪರಿಸರ ನಿರ್ಮಾಣ ಸಾಧ್ಯ. ಗಿಡ-ಮರ ಬೆಳೆಸದಿದ್ದರೆ ಕಾಲ ಕಾಲಕ್ಕೆ ಮಳೆಯಾಗುವುದಿಲ್ಲ. ನಿಗದಿತ ಸಮಯದಲ್ಲಿ ಮಳೆಯಾಗದಿದ್ದಲ್ಲಿ ಬರಗಾಲ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಪರಿಸರದ ಸಮತೋಲನ ಕಾಪಾಡಿಕೊಂಡರೆ ಸಕಾಲದಲ್ಲಿ ಮಳೆ ಬೀಳುತ್ತದೆ. ಈ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆ ವಿಚಾರದಲ್ಲಿ ಪ್ರತಿಯೊಬ್ಬರು ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕಾಗಿದೆ. **–ಪಿ.ಎ.ಸೀಮಾ, ಡಿಸಿಎಫ್**

ಇಂದು ಪಂಡಿತ್ ರಾಜೀವ್ ತಾರಾನಾಥ್ ಸಂತಾಪ ಸಭೆ



ಮೈಸೂರು, ಜೂ. 12– ಮೈಸೂರಿನ ಕೆಎಂಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ನಮ್ಮನ್ನು ಅಗಲಿದ ಸಂಗೀತ ಮಾಂತ್ರಿಕ ಪಂಡಿತ್ ರಾಜೀವ್ ತಾರಾನಾಥ್ ಅವರ ಸಂತಾಪ ಸಭೆಯನ್ನು #1149 ವಿಷ್ಣುವರ್ಧನ ರಸ್ತೆ ಚಾಮರಾಜಪುರಂ ಕೆಎಂಪಿಕೆ ಟ್ರಸ್ಟ್ ಕಚೇರಿಯಲ್ಲಿ ನಾಳೆ (ಜೂ. 13) ಬೆಳಗ್ಗೆ 11 ಗಂಟೆಗೆ ಆಯೋಜಿಸಲಾಗಿದೆ.

ಸಭೆಯಲ್ಲಿ ಖ್ಯಾತ ತಬಲ ವಾದಕರಾದ ಪಂಡಿತ್ ಭೀಮಾಶಂಕರ್ ಬಿದನೂರು, ವಿದ್ವಾನ್ ರಮೇಶ್ ದನ್ನೂರು, ಸುಗಮ ಸಂಗೀತ ಗಾಯಕಿ ಡಾ.ಶ್ವೇತ ಮಡಪ್ಪಾಡಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಹಿರಿಯ ಸಂಗೀತ ಕಲಾ ಶಿಕ್ಷಕರಾದ ರಾಘವೇಂದ್ರ ಪ್ರಸಾದ್, ಅಜಯ್ ಶಾಸ್ತ್ರಿ, ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ಪೂನಾದಲ್ಲಿ ಜೋಯಾಲುಕ್ಕಾಸ್‌ನ ನೂತನ ಆಭರಣ ಮಳಿಗೆ ಆರಂಭ



ಜಗತ್ತಿನ ಅಚ್ಚುಮೆಚ್ಚಿನ ಜ್ಯುವೆಲ್ಲರ್ ಜೋಯಾಲುಕ್ಕಾಸ್‌ನ ನೂತನ ಆಭರಣ ಮಳಿಗೆಯನ್ನು ಪೂನಾದ ಪಿಂಪ್ರಿಯಲ್ಲಿ ಆರಂಭಿಸಲಾಯಿತು. ಕೊಹಿನೂರ್ ಸಮೂಹದ ಸಿಎಂಡಿ ಕೃಷ್ಣಕುಮಾರ್ ಗೋಯಲ್, ಚಿತ್ರನಟಿ ಸೋನಾಲಿ ಕುಲಕರ್ಣಿ ಅನಾವರಣ ಮಾಡಿದರು. ಕೊಹಿನೂರ್ ಸಮೂಹದ ಜಂಟಿ ವ್ಯವಸ್ಥಾಪಕ ನಿರ್ದೇಶಕ ವಿನೀತ್ ಗೋಯಲ್, ಜೋಯಾಲುಕ್ಕಾಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಥಾಮಸ್ ಮ್ಯಾಥ್ಯೂ, ಜೋಯಾಲುಕ್ಕಾಸ್‌ನ ಕಾರ್ಯಾಚರಣೆ ಮುಖ್ಯಾಧಿಕಾರಿ ಹೆನ್ರಿ ಜಾರ್ಜ್, ರಿಟೇಲ್ ಮ್ಯಾನೇಜರ್ ರಾಜೇಶ್ ಕೃಷ್ಣನ್, ಮಾರ್ಕೆಟಿಂಗ್ ಡಿಜಿಎಂ ಅನೀಶ್ ವರ್ಗೀಶ್, ಪ್ರಾಂತೀಯ ಮ್ಯಾನೇಜರ್ ಪಿ.ಎಸ್.ಸುನೀಲ್ ಇನ್ನಿತರರು ಉಪಸ್ಥಿತರಿದ್ದರು.


ದ್ವಿಚಕ್ರ ವಾಹನ ಡಿಕ್ಕಿ; ಮೃತಪಟ್ಟ ಕಾಡು ನರಿ

ಮೈಸೂರು,ಜೂ.12(ಪಿಎಂ)– ಮೈಸೂರು ತಾಲೂಕು ಜಯಪುರ ಹೋಬಳಿಯ ಮುಳ್ಳೂರು ಗ್ರಾಮದ ಸಮೀಪ ಮುಳ್ಳೂರು-ಬೀರಿಹುಂಡಿ ರಸ್ತೆಯಲ್ಲಿ ದ್ವಿಚಕ್ರ ವಾಹನ ಡಿಕ್ಕಿ ಹೊಡೆದ ಪರಿಣಾಮ ಕಾಡು ನರಿಯೊಂದು ಮೃತಪಟ್ಟ ಘಟನೆ ಮಂಗಳವಾರ ರಾತ್ರಿ ನಡೆದಿದೆ.

ಸ್ವಾಮಿಗೌಡ ಎಂಬುವರು ತಮ್ಮ ಟಿವಿಎಸ್ ಎಕ್ಸೆಲ್ ದ್ವಿಚಕ್ರ ವಾಹನವನ್ನು ವೇಗವಾಗಿ ಚಲಾಯಿಸಿದ್ದೇ ಈ ಅಪಘಾತ ಸಂಭವಿಸಲು ಕಾರಣವೆಂದು ಆರೋಪಿಸಿರುವ ಅರಣ್ಯ ಇಲಾಖೆಯು, ಸ್ವಾಮಿಗೌಡ ವಿರುದ್ಧ ಕಾನೂನು ಕ್ರಮ ಜರುಗಿಸಿದೆ. ಸದರಿ ರಸ್ತೆಯ ಚಾಮಯ್ಯನಕಟ್ಟೆ ಬಳಿ ಈ ಅಪಘಾತ ಸಂಭವಿಸಿದ್ದು, ದಿಚಕ್ರ ವಾಹನ ಡಿಕ್ಕಿ ಹೊಡೆದ ರಭಸಕ್ಕೆ ಕಾಡು ನರಿ ಸ್ಥಳದಲ್ಲೇ ಮೃತಪಟ್ಟಿದೆ. ಈ ಸಂಬಂಧ ಮೈಸೂರು ಪ್ರಾದೇಶಿಕ ಅರಣ್ಯ ವಲಯದಲ್ಲಿ ಪ್ರಕರಣ ದಾಖಲಾಗಿದೆ.

ನಿಧನ

ಬಿ.ನಾರಾಯಣ್ ಬೆಟ್ಟದಪುರ



ಮೈಸೂರು,ಜೂ.12–ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಬಿ.ನಾರಾಯಣ್ ಬೆಟ್ಟದಪುರ (73) ಇಂದು ಅಲ್ಪ ಕಾಲದ ಅಸ್ವಸ್ಥತೆಯಿಂದ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ, ಮೊಮ್ಮಗ ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ.

ಇವರು ವಿವಿಧ ಜಿಲ್ಲೆಗಳಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಬಿ.ಎನ್. ಎಂದೇ ಹೆಸರಾಗಿದ್ದವರು. ಹಿರಿಯ ಸಾಹಿತಿ ದೇವನೂರ ಮಹಾದೇವ ಅವರ ಜೊತೆಗೆ ಕನ್ನಡ ಎಂ.ಎ. ವ್ಯಾಸಂಗ ಮಾಡಿದ್ದರು. ಪ್ರೊ.ಶ್ರೀಧರ್ ರಾಜೇ ಅರಸ್ ನೇತೃತ್ವದಲ್ಲಿ ಮಹಾರಾಜ ಜೂನಿಯರ್ ಕಾಲೇಜಿನಲ್ಲಿ ಸರ್ಕಾರಿ ನೌಕರರಿಗೆ ಯೋಗ ತರಗತಿ ನಡೆಸುತ್ತಿದ್ದರು. ಅಲ್ಲದೆ, ಜ್ಞಾನಬುತ್ತಿ ಸಂಸ್ಥೆಯಲ್ಲಿ ಕನ್ನಡ ಎಂ.ಎ. ತರಗತಿ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು.

ಪ್ರೊ.ಸಿ.ಪಿ.ಸಿದ್ಧಾಶ್ರಮ, ಪ್ರೊ.ಗೋಪಾಲ್‌ಸಿಂಗ್, ನಿವೃತ್ತ ಪ್ರಾಂಶುಪಾಲ ಅನಂತು ಹಾಗೂ ವಿದ್ವಾಂಸರು, ಸ್ನೇಹಿತರು ಮೃತರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು. ಜ್ಞಾನಬುತ್ತಿ ಸಂಸ್ಥೆ ನಿಕಟವರ್ತಿಗಳಾಗಿದ್ದ ನಾರಾಯಣ ಬೆಟ್ಟದಪುರ ಅವರ ನಿಧನಕ್ಕೆ ಪ್ರೊ.ಎಂ.ಕೃಷ್ಣೇಗೌಡ, ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣ ತೀವ್ರ ಸಂತಾಪ ಸೂಚಿಸಿದ್ದಾರೆ. ಮೃತರ ಅಂತ್ಯಕ್ರಿಯೆ ಬೆಟ್ಟದಪುರದಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭೂಮಿಪುತ್ರ ಚಂದನ್‌ಗೌಡ ನೇತೃತ್ವದಲ್ಲಿ ರೈತ ಕಲ್ಯಾಣ ಸಂಘಕ್ಕೆ ಸೇರ್ಪಡೆ



ಹೆಚ್.ಡಿ.ಕೋಟೆ ತಾಲೂಕಿನಲ್ಲಿ ನಡೆದ ರೈತ ಕಲ್ಯಾಣ ಸಂಘದ ಕಾರ್ಯಕಾರಿಣಿ ಸಭೆಯಲ್ಲಿ ಹಲವಾರು ಮುಖಂಡರು ಸಂಘಕ್ಕೆ ಸೇರ್ಪಡೆಗೊಂಡರು. ಈ ಸಂದರ್ಭದಲ್ಲಿ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ, ಸಂಘದ ಗೌರವಾಧ್ಯಕ್ಷರು, ತಾಲೂಕಿನ ಪದಾಧಿಕಾರಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜೂ.16, ವಿಚಾರವಾದಿ ಪ್ರೊ.ಕೆ.ರಾಮದಾಸ್ ನೆನಪಿನಾರ್ಥ ಸಂವಾದ, ಪುಸ್ತಕ ಬಿಡುಗಡೆ

ಮೈಸೂರು, ಜೂ.12(ಜಿಎ)–ದೇಸಿ ರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಜೂ.16ರಂದು ವಿಚಾರವಾದಿ, ಪ್ರಗತಿಪರ ಚಿಂತಕ ಪ್ರೊ.ಕೆ.ರಾಮದಾಸ್ ನೆನಪಿನಲ್ಲಿ ಸಂವಾದ, ಪುಸ್ತಕ ಬಿಡುಗಡೆ ಹಾಗೂ ಲೇಖನ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಕೃಷ್ಣ ಜನಮನ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಂಗಾಯಣದ ಆವರಣದಲ್ಲಿರುವ ಶ್ರೀರಂಗ ವೇದಿಕೆಯಲ್ಲಿ ಅಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಕಾರ್ಯಕ್ರಮವನ್ನು ಹಿರಿಯ ಪತ್ರಕರ್ತ ಕೃಷ್ಣ ಪ್ರಸಾದ್ ಉದ್ಘಾಟಿಸುವರು. ತಾವು ಬರೆದಿರುವ ಅಂತರಜಾತಿ ವಿವಾಹ ಮತ್ತು ಸಾಮಾಜಿಕ ಸಮಾನತೆ ಪುಸ್ತಕವನ್ನು ಸಾಹಿತಿ ಸವಿತಾ ನಾಗಭೂಷಣ್ ಬಿಡುಗಡೆಗೊಳಿಸುವರು. ರಾಜಕಾರಣದ ನೈತಿಕ ನೆಲೆಗಟ್ಟು ಮತ್ತು ಪ್ರಸ್ತುತ ರಾಜಕಾರಣ ಲೇಖನದಲ್ಲಿ ವಿಜೇತರಾದವರಿಗೆ ಹಿರಿಯ ಪ್ರತಕರ್ತ ರವೀಂದ್ರ ಭಟ್ ಅವರು ಪ್ರಶಸ್ತಿ ಪ್ರದಾನ ಮಾಡುವರು ಎಂದರು.



ರಾಜಕಾರಣದ ನೈತಿಕ ನೆಲೆಗಟ್ಟು ಮತ್ತು ಪ್ರಸ್ತುತ ರಾಜಕಾರಣ ಸಂವಾದದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅಧ್ಯಕ್ಷತೆ ವಹಿಸುವರು. ಚಿಂತಕ ಶಿವಸುಂದರ್ ರಾಜಕಾರಣದ ನೈತಿಕ ನೆಲೆಗಟ್ಟು ಹಾಗೂ ಹಿರಿಯ ಪತ್ರಕರ್ತ ಬಿ.ಎಂ.ಹನೀಫ್ ರಾಜಕಾರಣ ಮತ್ತು ಪ್ರಗತಿಪರರು ವಿಷಯ ಕುರಿತು ವಿಚಾರ ಮಂಡನೆ ಮಾಡುವರು. ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಚಿಂತಕಿ ಡಾ.ಬಿ.ಎಸ್.ದಿನಮಣಿ ಉಪಸ್ಥಿತರಿರುವರು ಎಂದು ತಿಳಿಸಿದರು.

ಸಂಜೆ 4ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ವನ್ಯಜೀವಿ ತಜ್ಞ ಕೃಪಾಕರ ಮತ್ತು ಸೇನಾನಿ ಮಾತನಾಡುವರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಧ್ಯಕ್ಷತೆ ವಹಿಸುವರು. ವಿಚಾರವಾದಿ ಡಾ.ಎಚ್.ಆರ್.ಸ್ವಾಮಿ ಮುಖ್ಯ ಅತಿಥಿಯಾಗಿ ಭಾಗವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಬಿ.ಎಸ್. ದಿನಮಣಿ ಉಪಸ್ಥಿತರಿದ್ದರು.

ವಿಶ್ವ ಯೋಗ ದಿನಾಚರಣೆ ಅಂಗವಾಗಿ ಜೂ.23 ಅಂತರ ಶಾಲಾ ಚಿತ್ರಕಲಾ ಸ್ಪರ್ಧೆ

ಮೈಸೂರು, ಜೂ.12(ಜಿಎ)–ವಿಶ್ವ ಯೋಗ ದಿನಾಚರಣೆಯ ಅಂಗವಾಗಿ ಪರಮಹಂಸ ಯೋಗ ಮಹಾವಿದ್ಯಾಲಯದ ವತಿಯಿಂದ ಅಂತರ ಶಾಲಾ ಚಿತ್ರಕಲಾ ಸ್ಪರ್ಧೆಯನ್ನು ಜೂ.23ರಂದು ಬೆಳಗ್ಗೆ 10.30ಕ್ಕೆ ರಾಮಕೃಷ್ಣನಗರದಲ್ಲಿರುವ ಪರಮಹಂಸ ಯೋಗ ಮಹಾ ವಿದ್ಯಾಲಯದಲ್ಲಿ ಆಯೋಜಿಸಲಾಗಿದೆ.




ಯೋಗ ಮಹಾವಿದ್ಯಾಲಯದ ಅಧ್ಯಕ್ಷ ಶಿವಪ್ರಕಾಶ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಇಂಟರ್‌ನ್ಯಾಷನಲ್ ಯೋಗ ಸ್ಕೂಲ್ ಆಶ್ರಯದಲ್ಲಿ ನಡೆಯುತ್ತಿರುವ ಸ್ಪರ್ಧೆಯಲ್ಲಿ 1ರಿಂದ 7ನೇ ತರಗತಿವರೆಗಿನ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿದ್ದು, ವಿಜೇತರಾದ ವಿದ್ಯಾರ್ಥಿಗಳಿಗೆ ಪದಕ ಮತ್ತು ಪ್ರಮಾಣ ಪತ್ರ ನೀಡಲಾಗುತ್ತದೆ. ಇದರೊಂದಿಗೆ 6ರಿಂದ 15 ವರ್ಷದ ವಿದ್ಯಾರ್ಥಿಗಳಿಗಾಗಿ ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ 6ನೇ ಇಂದ್ರಿಯ ಜಾಗೃತಿಗೊಳಿಸುವ ಅಂತರ್ ದೃಷ್ಟಿ ವಿದ್ಯೆ 18ನೇ ಬ್ಯಾಚ್ ಉದ್ಘಾಟನೆ ಕಾರ್ಯಕ್ರಮವನ್ನು ಆಯೋಜಿಸಿದ್ದು,ಮಾಹಿತಿಗಾಗಿ 90355 06790 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ಯೋಗ ಪ್ರಕಾಶ್, ಸೋಮಶೇಖರ್, ಚಾಣಕ್ಯ ಮತ್ತಿತರರು ಉಪಸ್ಥಿತರಿದ್ದರು.

ಯದುವೀರ್ ಒಡೆಯರ್‌ಗೆ ಡಾ.ಕಲಾಂ ಜೀವನ ಧರ್ಮ ಪುಸ್ತಕ



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ ಕೃಷ್ಣ ದತ್ತ ಚಾಮರಾಜ ಒಡೆಯರ್ ಅವರನ್ನು ಕನ್ನಡದ ಹಿರಿಯ ಸಾಹಿತಿ ಜಯಪ್ರಕಾಶ್‌ರಾವ್ ಡಾ.ಕಲಾಂ ಅವರ ಬಗ್ಗೆ ಕನ್ನಡದಲ್ಲಿ ತಾವು ರಚಿಸಿದ ಆತ್ಮ ಚರಿತ್ರೆ 'ಅಗ್ನಿಯ ರೆಕ್ಕೆಗಳು' ಹಾಗೂ ಬಹು ಜನಪ್ರಿಯ ಕಲಾಂರ 'ಜೀವನ ಧರ್ಮ' ಪುಸ್ತಕಗಳನ್ನು ಇತ್ತೀಚೆಗೆ ಮೈಸೂರಿನಲ್ಲಿ ನೀಡಿ, ಅಭಿನಂದಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.06.2024 ಗುರುವಾರ, ಮಳೆ ನಕ್ಷತ್ರ: ಮೃಗಶಿರ, 08.06.2024 ರಿಂದ 21.06.2024 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ತೀವ್ರ ತಲೆನೋವು, ಮೈಗ್ರೇನ್ ತಲೆನೋವು, ಪಾರ್ಕಿನ್‌ಸನ್ಸ್ ಕಾಯಿಲೆಯ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಮಾರ್ಗದರ್ಶಿ–25, 25ನೇ ವಿದ್ಯಾರ್ಥಿ-ಅಧಿಕಾರಿ ನೇರ ಸಂವಾದ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಉಪಸ್ಥಿತರು : ಕರಾಮುವಿವಿ ಕುಲಸಚಿವರಾದ ಪ್ರೊ. ಕೆ.ಬಿ. ಪ್ರವೀಣ, ಡಾ. ಹೆಚ್. ವಿಶ್ವನಾಥ್, ಸ್ಥಳ: ಪರೀಕ್ಷಾ ಭವನ, ಕರಾಮುವಿವಿ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ
- **ಮೈಸೂರು ವಿಶ್ವವಿದ್ಯಾನಿಲಯ, ಭೂ ವಿಜ್ಞಾನ ಅಧ್ಯಯನ ವಿಭಾಗ :** ಭೂ ವೈಜ್ಞಾನಿಕ ಸಮಾಜ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ನಿವೃತ್ತ ಪ್ರಾಧ್ಯಾಪಕ ಪ್ರೊ. ಎ. ಬಾಲಸುಬ್ರಮಣಿಯನ್, ಅಧ್ಯಕ್ಷತೆ : ಭೂ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಡಿ. ನಾಗರಾಜು, ಸ್ಥಳ: ಎಂ.ಎನ್.ವಿ. ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.
- **ಕೆಎಂಪಿ ಕೆ ಚಾರಿಟೆಬಲ್ ಟ್ರಸ್ಟ್ :** ಸಂಗೀತ ಮಾಂತ್ರಿಕ ಪಂಡಿತ್ ರಾಜೀವ್ ತಾರಾನಾಥ್ ಅವರ ಸಂತಾಪ ಸಭೆ, ಉಪಸ್ಥಿತರು: ಖ್ಯಾತ ತಬಲ ವಾದಕ ಪಂಡಿತ್ ಭೀಮಾಶಂಕರ್ ಬಿದನೂರು, ವಿದ್ವಾನ್ ರಮೇಶ್ ದನ್ನೂರು, ಸುಗಮ ಸಂಗೀತ ಗಾಯಕಿ ಡಾ.ಶ್ವೇತ ಮಡಪ್ಪಾಡಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಮ್ ವಾಜಪೇಯಿ, ಹಿರಿಯ ಸಂಗೀತ ಕಲಾ ಶಿಕ್ಷಕರಾದ ರಾಘವೇಂದ್ರ ಪ್ರಸಾದ್, ಅಜಯ್ ಶಾಸ್ತ್ರಿ, ಸ್ಥಳ: #1149 ವಿಷ್ಣುವರ್ಧನ ರಸ್ತೆ, ಚಾಮರಾಜಪುರಂ ಕೆಎಮ್‌ಪಿಕೆ ಟ್ರಸ್ಟ್ ಕಚೇರಿ, ಬೆಳಗ್ಗೆ 11ಕ್ಕೆ.
- **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ರಾಜರ್ಷಿ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಅವರ 140ನೇ ಜಯಂತಿ ಆಚರಣೆ, ಸಾಧಕರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ : ಅರಸು ಜಾಗೃತಿ ಅಕಾಡೆಮಿ ಚಾರಿಟೆಬಲ್ ಟ್ರಸ್ಟ್ ಗೌರವ ಕಾರ್ಯದರ್ಶಿ ಚುಟುಕು ಯೋಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಉದ್ಘಾಟನೆ : ಬಿಜೆಪಿ ಹಿರಿಯ ಮುಖಂಡ ಗುರುಪಾದಸ್ವಾಮಿ, ಉಪಸ್ಥಿತರು : ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಶ್ರೀ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಡಾ. ಎಸ್. ಶಿವರಾಜಪ್ಪ, ಸಾಹಿತಿ ಬನ್ನೂರು ಕೆ. ರಾಜು, ಜಗನ್ಮಾತೆ ಅಕ್ಕಮಹಾದೇವಿ ಮಹಿಳಾ ಸೌಹಾರ್ದ ಸಂಘದ ಶ್ರೀಮತಿ ಸಿ.ಎಲ್. ಶರ್ಮಿಳ, ಪ್ರಶಸ್ತಿ ಪುರಸ್ಕೃತರು: ಡಾ. ಪಿ. ಶಾಂತರಾಜೇ ಅರಸ್, ಡಿ. ಶಿವಯ್ಯ, ಡಾ. ಲೀಲಾಪ್ರಕಾಶ್, ಡಾ. ಬಿ.ಪಿ. ಮೂರ್ತಿ, ಎಂ.ಬಿ. ಶಿವಕುಮಾರ್, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ
- **ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘ, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ :** ಕರ್ನಾಟಕದ ಮೊದಲ ಮಹಿಳಾ ಮಂತ್ರಿ ಹಾಗೂ ಉಕ್ಕಿನ ಮಹಿಳೆ ಶ್ರೀಮತಿ ಯಶೋಧರ ದಾಸಪ್ಪರವರ 120ನೇ ಜನ್ಮದಿನದ ಅಂಗವಾಗಿ ಅವರ ಕುರಿತು ಪುಸ್ತಕ ಬಿಡುಗಡೆ, ಪ್ರಶಸ್ತಿ ಪ್ರದಾನ ಹಾಗೂ ಬಹುಮಾನ ವಿತರಣಾ ಸಮಾರಂಭ, ಉದ್ಘಾಟನೆ : ವಿಧಾನಪರಿಷತ್ ಸದಸ್ಯ ಕೆ. ವಿವೇಕಾನಂದ, ಶ್ರೀಮತಿ ಯಶೋಧರ ದಾಸಪ್ಪ ಕುರಿತು ಪುಸ್ತಕ ಬಿಡುಗಡೆ : ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಶ್ರೀಮತಿ ಯಶೋಧರ ದಾಸಪ್ಪ ಸೇವಾ ಪ್ರಶಸ್ತಿ ಪುರಸ್ಕೃತರು : ಪರಿಸರ ಪ್ರೇಮಿ ಶ್ರೀಮತಿ ಡಾ. ಶ್ವೇತಾ ಸದಾನಂದ್, ಮುಖ್ಯ ಅತಿಥಿಗಳು : ಶ್ರೀಮತಿ ಸರೋಜಾ ತುಳಸೀದಾಸ್, ಡಾ. ಎ.ಎನ್. ಪ್ರಕಾಶ್‌ಗೌಡ, ಎಸ್. ಪ್ರಕಾಶ್‌ಬಾಬು, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ. ರವಿಕುಮಾರ್, ಅಧ್ಯಕ್ಷತೆ : ನೇಗಿಲಯೋಗಿ ಮಹಿಳೆಯರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷೆ ಶ್ರೀಮತಿ ಶೋಭಾ ರಮೇಶ್, ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಜಯನಗರ, ಸಂಜೆ 5.30ಕ್ಕೆ
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಂವಹನ ಸಮಾಚಾರ– ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.40 ಪದ ಸಂಸ್ಕೃತಿ, ಪ್ರಸ್ತುತಿ : ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, 6.50 ರೈತರಿಗೆ ಸಲಹೆ, 7.15 ಯೋಗೋತ್ಸವ : ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಪ್ರೊ. ಆರ್. ವಿಶ್ವಾಸ್ ವರನ್– ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಚಟ್-ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ. ಮೀನಾ, 1.20 ಭಾವಗೀತೆಗಳು–ಲಕ್ಷ್ಮೀ ನಾಗರಾಜ್, 4.00 ಜನಪದ ಸಂಗೀತ, 4.30 ರಸಮಂಜರಿ, 6.10 ಸಂವಹನ ಸಮಾಚಾರ–ಬಾನುಲಿ ಸರಣಿ. ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್‌ವಾಣಿ, ಪ್ರಾಯೋಜಕರು: ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಮುಂಗಾರಿಗೆ ದ್ವಿದಳ ಧಾನ್ಯಗಳ ಬೇಸಾಯ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ: ಮಂಡ್ಯದ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ. ಪಿ. ಮಹದೇವು. ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಯುವವಾಣಿ : ಹಲೋ ಯುವವಾಣಿ–ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ಸಾಮಾನ್ಯ ಜ್ಞಾನ ರಸಪ್ರಶ್ನೆ ಕಾರ್ಯಕ್ರಮ. ನಡೆಸಿಕೊಡುತ್ತಾರೆ: ನಿವೇದಿತಾ. ಹೆಚ್, 10.00 ನಾಟಕ : 'ಸ್ವಂತಕ್ಕೊಂದು ಸುಂದರ ಗೋರಿ', ರಚನೆ ಹಾಗೂ ನಿರ್ಮಾಣ : ಡಾ. ಎನ್. ರಘು, 10.30 ಸವಿನೆನಪು

ಅಪ್ರಾಪ್ತರಿಂದ ಆಗುವ ಅಪಘಾತಕ್ಕೆ ವಾಹನ ಮಾಲೀಕರೇ ಪರಿಹಾರ ನೀಡಬೇಕು, ವಿಮಾ ಕಂಪನಿಯಲ್ಲ



ಹೈಕೋರ್ಟ್ ಮಹತ್ವದ ತೀರ್ಪು

ಬೆಂಗಳೂರು: ಅಪ್ರಾಪ್ತ ವಯಸ್ಕರು ವಾಹನ ಚಲಾಯಿಸಿ ಅಪಘಾತ ಉಂಟು ಮಾಡಿದರೆ ವಾಹನ ಮಾಲೀಕರು ಪರಿಹಾರ ನೀಡಬೇಕೇ ಹೊರತು ವಿಮಾ ಕಂಪನಿ ಅಲ್ಲ ಎಂದು ಕರ್ನಾಟಕ ಹೈ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ವಿಮಾ ಕಂಪನಿಯ ಮೇಲಿನ ಹೊಣೆಗಾರಿಕೆಯನ್ನು ನಿಗದಿಪಡಿಸಿದ ಮೋಟಾರು ವಾಹನ ಅಪಘಾತ ನ್ಯಾಯಮಂಡಳಿ ತೀರ್ಪು ರದ್ದುಗೊಳಿಸಿದ, ನ್ಯಾಯಮೂರ್ತಿ ಹಂಚಾಟೆ ಸಂಜೀವ್‌ಕುಮಾರ್, ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿಯ ಅರ್ಜಿಯನ್ನು ಪುರಸ್ಕರಿಸಿದ್ದಾರೆ. ಸಂತ್ರಸ್ತರಿಗೆ ಪರಿಹಾರವನ್ನು ಪಾವತಿಸುವ ಹೊಣೆಗಾರಿಕೆಯಿಂದ ವಿಮಾ ಕಂಪನಿಯನ್ನು ನ್ಯಾಯಾಲಯ ಮುಕ್ತಗೊಳಿಸಿತು. ಇನ್ನು ವಾರ್ಷಿಕ 6% ಬಡ್ಡಿಯೊಂದಿಗೆ ಟ್ರಿಬ್ಯೂನಲ್ ನೀಡಿದ ಪರಿಹಾರವನ್ನು 2.56 ಲಕ್ಷದಿಂದ 4.44 ಲಕ್ಷಕ್ಕೆ ಹೆಚ್ಚಿಸಿದೆ.

ಅಪಘಾತಕ್ಕೀಡಾದ ವಾಹನದ ಮಾಲೀಕರಾದ ಮಹಮ್ಮದ್ ಮುಸ್ತಫಾ ಅವರು ಪರಿಹಾರವನ್ನು ಹಕ್ಕುದಾರರಿಗೆ ನೀಡಬೇಕು. ಅಪಘಾತದ ಸಮಯದಲ್ಲಿ ಸಾವನ್ನಪ್ಪಿದವರಿಗೆ 61 ವರ್ಷ ವಯಸ್ಸು, ಅವರು ಪತ್ನಿ ಮತ್ತು ಇಬ್ಬರು ಮಕ್ಕಳನ್ನು ಅಗಲಿರುವ ಕಾರಣ ಪರಿಹಾರವನ್ನು ಹೆಚ್ಚಿಸಲಾಗಿದೆ.

ಈ ಪ್ರಕರಣದಲ್ಲಿ 2014ರ ಆಗಸ್ಟ್ 11ರಂದು ತೀರ್ಪು ನೀಡಿದ್ದ ನ್ಯಾಯಾಧೀಕರಣ, ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ನೆಲೆಸಿರುವ ಮೃತರ ಕುಟುಂಬದ ಸದಸ್ಯರಾದ ಬೀಬಿ ನೈಸಾ ಮತ್ತು ಹಕ್ಕುದಾರರಿಗೆ ವಾರ್ಷಿಕ ಶೇ.8ರ ಬಡ್ಡಿ ಯೊಂದಿಗೆ 2.56 ಲಕ್ಷ ರೂ.ಗಳ ಪರಿಹಾರ ನೀಡುವಂತೆ ಆದೇಶ ನೀಡಿತ್ತು.

ಡಿಸೆಂಬರ್ 12, 2008 ರಂದು ಬೆಳಗ್ಗೆ 8.45 ರ ಸುಮಾರಿಗೆ, ಭಟ್ಕಳದ ರಂಗಿನಕಟ್ಟಾ ಎಂಬಲ್ಲಿ ರಾಷ್ಟ್ರೀಯ ಹೆದ್ದಾರಿ 17 ರಲ್ಲಿ ಅಪ್ರಾಪ್ತ ಚಲಾಯಿಸುತ್ತಿದ್ದ ಮೋಟಾರ್ ಸೈಕಲ್ ಹಸನ್ ಶಬ್ಬೀರ್‌ಗೆ ಡಿಕ್ಕಿ ಹೊಡೆದಿತ್ತು. ತೀವ್ರವಾಗಿ ಗಾಯಗೊಂಡ ಶಬ್ಬೀರ್ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದರು.

ಮೃತರ ಕುಟುಂಬಕ್ಕೆ 2.56 ಲಕ್ಷ ರೂಪಾಯಿ ಪರಿಹಾರ ನೀಡುವಂತೆ ನ್ಯಾಯಾಧೀಕರಣ ನೀಡಿದ ತೀರ್ಪನ್ನು ಅಪಘಾತವು ಆಗ 16 ವರ್ಷ ವಯಸ್ಸಿನ ಹುಡುಗನಿಂದ ಸಂಭವಿಸಿದೆ ಎಂಬ ಆಧಾರದ ಮೇಲೆ ವಿಮಾ ಕಂಪನಿಯು ಪ್ರಶ್ನಿಸಿತ್ತು. ಸವಾರನು ಅಪ್ರಾಪ್ತನಾಗಿದ್ದರಿಂದ, ಅವನು ಮಾನ್ಯವಾದ ಚಾಲನಾ ಪರವಾನಗಿಯನ್ನು ಹೊಂದಿಲ್ಲ. ಆದ್ದರಿಂದ ಪರಿಹಾರವನ್ನು ಪಾವತಿಸಲು ತಾನು ಜವಾಬ್ದಾರನಾಗಿರುವುದಿಲ್ಲ ಎಂದು ವಿಮಾ ಕಂಪನಿ ವಾದಿಸಿತು. ವಿಮಾ ಕಂಪನಿಯು ಪೊಲೀಸರು ಸಲ್ಲಿಸಿದ ಚಾರ್ಜ್‌ಶೀಟ್ ಗಮನಿಸಿ ಅಬ್ದುಲ್ ಹಕೀಂ ಗವಾಯಿ ಅವರ ಮಗ ಅಪ್ರಾಪ್ತ ಬಾಲಕ ಮೋಟಾರ್ ಸೈಕಲ್ ಓಡಿಸುತ್ತಿದ್ದನೆಂದು ಬಹಿರಂಗಪಡಿಸಿತು.

ಕೆಪಿಸಿಎಲ್‌ನ 622 ಹುದ್ದೆಯ ಅಂಕಪಟ್ಟಿ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಜೂ.12(ಕೆಎಂಶಿ)– ಕರ್ನಾಟಕ ವಿದ್ಯುತ್ ನಿಗಮದಲ್ಲಿನ (ಕೆಪಿಸಿಎಲ್) 622 ಖಾಲಿ ಹುದ್ದೆಗಳ ಭರ್ತಿಗೆ ಫೆಬ್ರವರಿ 18ರಂದು ನಡೆಸಲಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಅಂತಿಮ ಅಂಕಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಇಂದು ಪ್ರಕಟಿಸಿದೆ. ಆಕ್ಷೇಪಣೆಗಳ ಪರಿಶೀಲನೆ ನಂತರ, ಕಳೆದ ಬಾರಿಯಂತೆಯೇ ಈ ಬಾರಿಯೂ, ಪ್ರತಿ ತಪ್ಪು ಉತ್ತರಕ್ಕೆ 1/3ರಷ್ಟು ನಕಾರಾತ್ಮಕ ಅಂಕ ಕಡಿತಗೊಳಿಸಿ ಅಂತಿಮ ಅಂಕಪಟ್ಟಿ ಸಿದ್ಧಪಡಿಸುವಂತೆ ಕೆಪಿಸಿಎಲ್ ಸಂಸ್ಥೆ ಲಿಖಿತ ರೂಪದಲ್ಲಿ ಸೂಚಿಸಿತ್ತು.

ಆ ಪ್ರಕಾರ, ಹುದ್ದೆವಾರು ಪರೀಕ್ಷೆ ಬರೆದ ಅಭ್ಯರ್ಥಿಗಳ ಅಂತಿಮ ಅಂಕಪಟ್ಟಿ ಸಿದ್ಧಪಡಿಸಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅಂತಿಮ ಅಂಕಪಟ್ಟಿಯನ್ನು ಕೆಪಿಸಿಎಲ್ ಸಂಸ್ಥೆಗೆ ಹಸ್ತಾಂತರಿಸಲಾಗುವುದು, ನಿಯಮಾನುಸಾರ ಆಯ್ಕೆ ಪಟ್ಟಿ ಪ್ರಕಟಿಸಲು ಕೆಪಿಸಿಎಲ್ ಕ್ರಮ ವಹಿಸಲಿದೆ ಎಂದಿದ್ದಾರೆ. ಕೆಪಿಸಿಎಲ್‌ನ ಎಇ, ಜೆಇ (ವಿವಿಧ ವಿಭಾಗಗಳ), ಕೆಮಿಸ್ಟ್ ಮತ್ತು ಕೆಮಿಕಲ್ ಸೂಪರ್‌ವೈಸರ್ ಹುದ್ದೆಗಳ ನೇಮಕಾತಿಗೆ ಈ ಪರೀಕ್ಷೆ ನಡೆಸಲಾಗಿತ್ತು.

ಮೈಸೂರಿನ ರಸ್ತೆಯಲ್ಲೇ ಬಿಡಾರ ಹೂಡುವ ಬಿಡಾಡಿ ದನಗಳು

- ಸುಗಮ ಸಂಚಾರ ಸಾಧ್ಯವಾಗದೇ ವಾಹನ ಸವಾರರ ಪರದಾಟ
- ಹಾಲು ಹಿಂಡಿಕೊಂಡು ಈ ಮೂಕ ಪ್ರಾಣಿಗಳ ಬೀದಿಗೆ ಬಿಡೋದು ತರವೇ...!
- ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳದ ಮಹಾನಗರ ಪಾಲಿಕೆ



ಮೈಸೂರಿನ ಎಂಜಿ ರಸ್ತೆಯಲ್ಲಿ ಬುಧವಾರ ಬಿಡಾಡಿ ದನ, ಎಮ್ಮೆಗಳು ಹೀಗೆ ಓಡಾಡುತ್ತಿದ್ದರೆ ದ್ವಿಚಕ್ರ ವಾಹನ ಸವಾರರು ಇವುಗಳ ನಡುವೆ ನುಸುಳಿಕೊಂಡು ಸಾಗುತ್ತಿರುವುದು.

ಮೈಸೂರು, ಜೂ.12(ಪಿಎಂ)– ಮೈಸೂರು ನಗರದಲ್ಲಿ ಬಿಡಾಡಿ ದನಗಳು ರಸ್ತೆಯಲ್ಲೇ ಬಿಡಾರ ಹೂಡುವುದು ಸಾಮಾನ್ಯವಾಗುತ್ತಿದ್ದು, ಸುಗಮ ಸಂಚಾರ ಸಾಧ್ಯವಾಗದೇ ವಾಹನ ಸವಾರರು ಪರದಾಡುವಂತಹ ಸನ್ನಿವೇಶ ನಿರ್ಮಾಣವಾಗಿದೆ. ತಮ್ಮ ಮಾಲೀಕರ ತಪ್ಪಿನಿಂದಾಗಿ ರಸ್ತೆಯತ್ತ ಲಗ್ಗೆಯಿಡುವ ಈ ಮೂಕ ಪ್ರಾಣಿಗಳೂ ತಮ್ಮದಲ್ಲದ ತಪ್ಪಿಗೆ ಅವೂ ಸಾಕಷ್ಟು ಸಮಸ್ಯೆ ಅನುಭವಿಸುತ್ತಿವೆ.

ಮೈಸೂರಿನ ಕೇಂದ್ರೀಯ ಬಸ್ ನಿಲ್ದಾಣದ (ಸಬ್‌ಅರ್ಬನ್ ಬಸ್ ನಿಲ್ದಾಣ) ಬೆಂಗಳೂರು ನೀಲಗಿರಿ ರಸ್ತೆ, ಎಂಜಿ ರಸ್ತೆ, ಇರ್ವಿನ್ ರಸ್ತೆ, ಧನ್ವಂತರಿ ರಸ್ತೆ, ಯಾದವಗಿರಿಯ ವಿವೇಕಾನಂದ ರಸ್ತೆ, ವಾಲ್ಮೀಕಿ ರಸ್ತೆ ಸೇರಿದಂತೆ ನಗರದ ಬಹುತೇಕ ಭಾಗದ ವಿವಿಧ ರಸ್ತೆಗಳಲ್ಲಿ ಬಿಡಾಡಿ ದನಗಳ ಓಡಾಟ ದಿನದಿಂದ ದಿನಕ್ಕೆ ವ್ಯಾಪಕವಾಗುತ್ತಿದ್ದು, ಇದರ ನಿಯಂತ್ರಣಕ್ಕೆ ಮೈಸೂರು ಮಹಾನಗರ ಪಾಲಿಕೆ ಮಾತ್ರ ಗಂಭೀರ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಎಂಜಿ ರಸ್ತೆ ಮಾರುಕಟ್ಟೆಯಲ್ಲಿ ದೊರೆಯುವ ತರಕಾರಿ ತ್ಯಾಜ್ಯಗಳನ್ನು ಸೇವಿಸಲು ಇಲ್ಲಿಗೆ ನಿತ್ಯ ಬಿಡಾಡಿ ದನಗಳು ಲಗ್ಗೆ ಇಡುತ್ತಿವೆ. ಇದರಿಂದ ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು ಹೈರಾಣಾಗುತ್ತಿದ್ದಾರೆ. ಹಾರ್ನ್ ಮಾಡಿದರೂ



ದಾರಿ ಬಿಡದ ಬಿಡಾಡಿ ದನ ಕರುಗಳು ವಾಹನ ಸವಾರರಿಗೆ ತಲೆನೋವಾಗಿ ಪರಿಣಮಿಸಿವೆ. ನಗರದ ಎಲ್ಲೆಡೆ ಬಿಡಾಡಿ ದನಗಳ ಹಾವಳಿ ಹೆಚ್ಚಾಗುತ್ತಿದ್ದು, ಸಯ್ಯಾಜಿ ರಾವ್ ರಸ್ತೆ, ಅಶೋಕ ರಸ್ತೆ, ದೇವರಾಜ ಅರಸು ರಸ್ತೆ ಸೇರಿದಂತೆ ಮೈಸೂರು ನಗರದ ಹೃದಯ ಭಾಗದಲ್ಲೇ ಬಿಡಾಡಿ ದನಗಳು ಓಡಾಡುತ್ತಿರುವುದು ಸಾಮಾನ್ಯವಾಗಿದೆ. ಇದರಿಂದ ವಾಹನ ಸವಾರರು, ಪಾದಚಾರಿಗಳು ತೊಂದರೆ ಅನುಭವಿಸುವಂತಾಗಿದೆ.

ಇವುಗಳು ಬೀದಿಗೆ ಬರುವುದರಿಂದ ಕೇವಲ ಸಾರ್ವಜನಿಕರಿಗೆ ಮಾತ್ರ ತೊಂದರೆ ಆಗುತ್ತಿಲ್ಲ. ಜೊತೆಗೆ ಅವುಗ ಳಿಗೂ ಅನೇಕ ರೀತಿ ಸಮಸ್ಯೆಯಾಗುತ್ತಿದೆ. ಇದ್ದಕ್ಕಿದ್ದಂತೆ ಎದುರಿಗೆ ಬಂದು ನಿಲ್ಲುವ ದನ ಕರುಗಳಿಗೆ ವಾಹನಗಳು ಡಿಕ್ಕಿ ಹೊಡೆಯುವ ಸನ್ನಿವೇಶವೂ ಇದ್ದೂ ಎಷ್ಟೋ ಸಂದರ್ಭದಲ್ಲಿ ಇದೂ ಆಗಿಯೂ ಇದೆ. ಇದರಿಂದ ಅವುಗಳೂ ಗಾಯಗೊಂಡು ಅಂಗವೈಕಲ್ಯದಂತಹ ಸಮಸ್ಯೆಗೆ ಸಿಲುತ್ತಿವೆ.

ವಿವಿಧ ತರಕಾರಿ ಮಾರುಕಟ್ಟೆಗಳ ಬಳಿ ದನಗಳು ಜಮಾಯಿಸುವುದು ಸಾಮಾನ್ಯವಾಗಿದೆ. ಹಾಲು ಕರೆದುಕೊಳ್ಳುವ ಮಾಲೀಕರು ಬಳಿಕ ಅವುಗಳನ್ನು ರಸ್ತೆಗೆ ಬಿಟ್ಟು ನೆಮ್ಮದಿಯಿಂದ ಇರುವುದು ಮಾತ್ರ ದುರಂತ. ಹಣ್ಣಿನ ಮಾರುಕಟ್ಟೆ, ತರಕಾರಿ ಮಾರುಕಟ್ಟೆಗಳತ್ತ ಲಗ್ಗೆಯಿಡುವ ಹಸುಗಳು ಆಹಾರದ ಆಸೆಗಾಗಿ ಹಣ್ಣು ತರಕಾರಿಗೆ ಬಾಯಿ ಹಾಕಿ ಏಟು ತಿನ್ನುವ ಸನ್ನಿವೇಶ ಸಹ ಸಾಮಾನ್ಯವೇ ಆಗಿದೆ.

ಅಲ್ಲದೆ, ಯಾರ ನಿಯಂತ್ರಣವೂ ಇಲ್ಲದೇ ಎಲ್ಲಿ ಬೇಕೋ ಅಲ್ಲಿಗೆ ಲಗ್ಗೆ ಇಡುವ ಈ ದನ–ಕರುಗಳು ಹಾದಿ ಬೀದಿಯಲ್ಲಿ ಸಿಕ್ಕಿದ್ದನ್ನು ತಿನ್ನುತ್ತಿವೆ. ಆ ಮೂಲಕ ಅವುಗಳ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವೂ ಉಂಟಾಗುತ್ತಿದೆ. ಕಸದೊಂದಿಗೆ ಸಿಲುಕಿರುವ ಪ್ಲಾಸ್ಟಿಕ್ ಕೂಡ ಇವುಗಳಿಗೆ ಆಹಾರವಾಗುತ್ತಿರುವುದು ದುರಂತವೇ ಸರಿ. ಒಟ್ಟಾರೆ ವ್ಯವಸ್ಥೆಯ ಅರಿವಿಲ್ಲದ ಈ ಮೂಕ ಪ್ರಾಣಿಗಳು ತಮ್ಮದಲ್ಲದ ತಪ್ಪಿಗೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಇನ್ನು ಗೋ ಹತ್ಯೆ ನಿಷೇಧದ ಹಿನ್ನೆಲೆಯಲ್ಲಿ ಗಂಡು ಕರುಗಳು (ಹೋರಿ) ಪಾಲಕರಿಲ್ಲದೇ ಬೀದಿಪಾಲಾಗುತ್ತಿವೆ. ದಿಕ್ಕು ದೆಸೆ ಇಲ್ಲದೆ, ನಗರದಲ್ಲಿ ಸಂಚರಿಸಿ ಸಿಕ್ಕಿದ್ದನ್ನು ತಿಂದು ಕಾಲದೂಡುತ್ತಿವೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಮಹಾನಗರ ಪಾಲಿಕೆಯ ಪ್ರಭಾರ ಪಶು ವೈದ್ಯಾಧಿಕಾರಿ ಡಾ.ಹೆಚ್.ಎನ್.ಹರ್ಷ, ಬಿಡಾಡಿ ದನಗಳನ್ನು ಹಿಡಿದು ದಂಡ ಪಡೆದು ಪಾಲಕರಿಗೆ ಒಪ್ಪಿಸುವುದು ನಮ್ಮ ನಿರಂತರ ಪ್ರಕ್ರಿಯೆ. ನಮ್ಮಲ್ಲಿ ಸದ್ಯ ಕಾರ್ಯಾಚರಣೆಗೆ ಇರುವುದು ಒಂದೇ ವಾಹನ. ಹಾಗಾಗಿ ಪೂರ್ಣ ಪ್ರಮಾಣದಲ್ಲಿ ಬಿಡಾಡಿ ದನಗಳ ನಿಯಂತ್ರಣ ಸಾಧ್ಯವಾಗುತ್ತಿಲ್ಲ. ಕಾರ್ಯಾಚರಣೆಗೆ ಮೂರು ಹೊಸ ವಾಹನಗಳಿಗೆ ಈಗಾಗಲೇ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಒಂದೆಡೆ ಕಾರ್ಯಾಚರಣೆ ನಡೆಸಿ ಒಂದೆರಡು ಹಸುಗಳನ್ನು ಸೆರೆ ಹಿಡಿದು ಸುಯೇಜ್ ಫಾರಂನಲ್ಲಿರುವ ಪಾಲಿಕೆ ದೊಡ್ಡಿಯಲ್ಲಿ ಬಿಟ್ಟು ಬರುವುದರೊಳಗೆ ಮತ್ತೊಂದು ದೂರಿಗೆ ಸ್ಪಂದಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ. ಮೂರು ವಿಧಾನಸಭಾ ಕ್ಷೇತ್ರಗಳಿಗೆ ತಲಾ ಒಂದು ವಾಹನ ನೀಡಬೇಕೆಂದು ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ವಾಹನಗಳು ಬಂದ ಬಳಿಕ ಪೂರ್ಣ ಪ್ರಮಾಣದಲ್ಲಿ ಪರಿಣಾಮಕಾರಿ ಆಗಿ ಕಾರ್ಯಾಚರಣೆ ನಡೆಸಲು ಸಾಧ್ಯವಾಗಲಿದೆ ಎಂದರು.

ದೂರು ಬಂದರೆ ಅಥವಾ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಕಂಡು ಬಂದರೆ ಜಾನುವಾರುಗಳನ್ನು ಹಿಡಿದು ಸುಯೇಜ್ ಫಾರಂ ದೊಡ್ಡಿಗೆ ಬಿಡುತ್ತೇವೆ. ಮಾಲೀಕರು ಬಂದರೆ ಹಸುವೊಂದಕ್ಕೆ 500 ರೂ. ದಂಡ ಪಾವತಿಸಿಕೊಂಡು ಮತ್ತೆ ರಸ್ತೆಗೆ ಬಿಡಬಾರದೆಂದು ಎಚ್ಚರಿಕೆ ನೀಡಿ ಬಿಟ್ಟು ಕಳುಹಿಸುತ್ತೇವೆ. ಎರಡು ಮೂರು ದಿನಗಳಾದರೂ ವಾರಸುದಾರರು ಬಂದಿಲ್ಲವೆಂದರೆ ಪಿಂಜ್ರಾಪೋಲ್‌ಗೆ ಅಧಿಕೃತವಾಗಿ ಹಸ್ತಾಂತರ ಮಾಡುತ್ತೇವೆ. ಸಾಮಾನ್ಯವಾಗಿ ಸಂಜೆ ಹಾಲು ಕರೆಯುವ ವೇಳೆಗೆ ಮಾಲೀಕರು ಸುಯೇಜ್ ಫಾರಂ ದೊಡ್ಡಿಗೆ ಬಂದು ತಮ್ಮ ಹಸುಗಳನ್ನು ಕರೆದುಕೊಂಡು ಹೋಗುತ್ತಾರೆ. ಸಾರ್ವಜನಿಕರಿಂದ ದೂರು ಬಂದರೂ ಕ್ರಮ ವಹಿಸುತ್ತೇವೆ. ರಸ್ತೆಯಲ್ಲಿ ಸಂಚಾರಕ್ಕೆ ಅಡಚಣೆ ಉಂಟು ಮಾಡುತ್ತಿರುವುದು ಕಂಡು ಬಂದರೆ ಸ್ವಯಂ ಪ್ರೇರಿತವಾಗಿಯೂ ಕಾರ್ಯಾಚರಣೆಗೆ ಮುಂದಾಗುತ್ತೇವೆ ಎಂದು ಅವರು ವಿವರಿಸಿದರು.

ಕೌ ಶೆಡ್ ಪ್ರಸ್ತಾಪಕ್ಕೆ ಗೋಪಾಲಕರು ಒಪ್ಪಲಿಲ್ಲ...

ಮುಖ್ಯವಾಗಿ ಯಾವುದೇ ಸಮಸ್ಯೆಯಾದರೂ ಸಂಪೂರ್ಣ ನಿಯಂತ್ರಣಕ್ಕೆ ಅಧಿಕಾರಿಗಳು ಮನಸ್ಸು ಮಾಡಬೇಕು. ಸುಯೇಜ್ ಫಾರಂನಲ್ಲಿ 'ಕೌ ಶೆಡ್' ವ್ಯವಸ್ಥೆ ಕಲ್ಪಿಸಿ ನಗರದೊಳಗೆ ಯಾವುದೇ ಜಾನುವಾರ ಸಾಕಾಣೆಗೆ ಅವಕಾಶ ಇಲ್ಲದ ರೀತಿಯ ವ್ಯವಸ್ಥೆ ಮಾಡಬೇಕೆಂಬ ಪಾಲಿಕೆ ಪ್ರಸ್ತಾಪಕ್ಕೆ ಯಾವುದೇ ಗೋ ಪಾಲಕರು ಒಪ್ಪಲಿಲ್ಲ. ಒಂದು ವೇಳೆ ಇದು ಜಾರಿಗೊಂಡಿದ್ದರೆ, ಇಡೀ ಮೈಸೂರು ನಗರ ಬಿಡಾಡಿ ದನಗಳಿಂದ ಮುಕ್ತವಾಗುತ್ತಿತ್ತು. ಹಾಲು ಕರೆದುಕೊಂಡು ಬೀದಿಗೆ ಬಿಟ್ಟುಬಿಡುವ ಗೋಪಾಲಕರಿಗೆ ಅವುಗಳು ರಾತ್ರಿ ಯಾವ ಸ್ಥಳದಲ್ಲಿ ಇರುತ್ತವೆ ಎಂಬುದು ಗೊತ್ತಿರುತ್ತದೆ. ಅಲ್ಲಿಗೆ ಹೋಗಿ ಅವುಗಳನ್ನು ಕರೆದೊಯ್ಯುತ್ತಾರೆ. ಈ ಮನೋಭಾವ ಅವರು ಬಿಡಬೇಕು. ನಗರದ ಸ್ವಚ್ಛತೆ ಹಾಗೂ ಅಭಿವೃದ್ಧಿಗೆ ಎಲ್ಲರ ಸಹಕಾರ ಅಗತ್ಯ.

-ಬಿ.ವಿ.ಮಂಜುನಾಥ್, ಮಾಜಿ ಸದಸ್ಯರು, ಮೈಸೂರು ಮಹಾನಗರ ಪಾಲಿಕೆ.



ರೇಣುಕಾಸ್ವಾಮಿ ಕೊಲೆ ಪ್ರಕರಣ

ಚಿತ್ರದುರ್ಗದಲ್ಲಿ ದರ್ಶನ್ ವಿರುದ್ಧ ಬಾರೀ ಪ್ರತಿಭಟನೆ



ಬೆಂಗಳೂರು: ರೇಣುಕಾಸ್ವಾಮಿ ಅವರ ಬರ್ಬರ ಹತ್ಯೆ ಪ್ರಕರಣದಲ್ಲಿ ನಟ ದರ್ಶನ್ ಅವರಿಗೆ ಜೀವಾವಧಿ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ವಿವಿಧ ಸಂಘಟನೆಗಳು ಬುಧವಾರ ಚಿತ್ರದುರ್ಗದಲ್ಲಿ ಪ್ರತಿಭಟನೆ ನಡೆಸಿದವು.

ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ನೀಲಕಂಠೇಶ್ವರ ದೇವಸ್ಥಾನದಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿವರೆಗೆ ಸಾಗಿತು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಮಾಜಿ ಶಾಸಕ ಜಿ. ಹೆಚ್.ತಿಪ್ಪಾರೆಡ್ಡಿ, ದರ್ಶನ್ ತೆರೆಮೇಲೆ ಹೀರೋ ಆದರೆ ನಿಜ ಜೀವನದಲ್ಲಿ ಹೀರೋ ಅಲ್ಲ, ರೇಣುಕಾಸ್ವಾಮಿ ಅವರ ಪೋಷಕರ ನೋವನ್ನು ನಾವು ಕಡೆಗಣಿಸುವಂತಿಲ್ಲ.ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಇಂತಹ ಘಟನೆಗಳು ನಡೆಯುತ್ತಿವೆ ಎಂದು ಆರೋಪಿಸಿದರು.

ಆರೋಪಿ ನಂಬರ್ 1 ಆಗಬೇಕಾದ ದರ್ಶನ್ ಅವರನ್ನು ಆರೋಪಿ ನಂಬರ್ 2 ಮಾಡಲಾಗಿದೆ. ಇದು ಅವರನ್ನು ರಕ್ಷಿಸುವ ಪ್ರಯತ್ನವಾಗಿದೆ. ಗೃಹ ಸಚಿವ ಡಾ. ಜಿ. ಪರಮೇಶ್ವರ ಏನೂ ಆಗಿಲ್ಲ ಎಂಬಂತೆ ಮಾತನಾಡುತ್ತಾರೆ. ಸರ್ಕಾರ ಇಂತಹ ಘಟನೆ ಗಳನ್ನು ದುರ್ಬಲಗೊಳಿಸಬಹುದು. ದರ್ಶನ್ ಮತ್ತು ಪ್ರಕರಣದ ಇತರ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಬೇಕು, ಅವರನ್ನು ಜೈಲಿನಿಂದ ಬಿಡುಗಡೆ ಮಾಡಬಾರದು. ದರ್ಶನ್ ಹಾಗೂ ಇತರ ಆರೋಪಿಗಳನ್ನು ಬಿಡುಗಡೆ ಮಾಡಿದರೆ ದೊಡ್ಡ ಮಟ್ಟದ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ತನಿಖೆಯ ಮೇಲೆ ರಾಜಕಾರಣಿಗಳು ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ಮಾಜಿ ಶಾಸಕ ಬಸವರಾಜನ್ ಹೇಳಿದ್ದಾರೆ. ಸರ್ಕಾರ ಅವರ ಪರ ಇದೆಯಂತೆ. ದರ್ಶನ್ ಅವರು ಕಾಂಗ್ರೆಸ್ ಪರ ಪ್ರಚಾರ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಸರಕಾರ ಹಾಗೂ ರಾಜಕಾರಣಿಗಳು ಅವರ ಪರ ಒಲವು ತೋರುವ ಸಾಧ್ಯತೆಗಳಿದ್ದು, ಪ್ರಕರಣವನ್ನು ಕೇಂದ್ರ ತನಿಖಾ ದಳ ಸಿಬಿಐಗೆ ವಹಿಸುವುದು ಸೂಕ್ತ ಎಂದು ಒತ್ತಾಯಿಸಿದರು.

ದರ್ಶನ್‌ಗೆ ಕುರುಡು ಅಭಿಮಾನಿಗಳ ಪಡೆ ಇದೆ. ಈ ಘೋರ ಹತ್ಯೆಯ ನಂತರವೂ ಅವರ ಅಭಿಮಾನಿಗಳು ಬೆಂಬಲಿಸುತ್ತಿದ್ದಾರೆ. ಇದರಿಂದ ನಾವು ಏನು ಅರ್ಥಮಾಡಿಕೊಳ್ಳಬೇಕು? ಅಭಿಮಾನಿ ಗಳು ನಟನನ್ನು ಸರಿಪಡಿಸಬೇಕು, ಅವರ ಪ್ರತಿ ಕೃತ್ಯವನ್ನು ಬೆಂಬಲಿಸಬಾರದು. ಇಂತಹ ಕುರುಡು ಫಾಲೋಯಿಂಗ್ ಕೊಲೆಗೆ ಕಾರಣವಾಗಿದೆ. ಅವರನ್ನು ಬಂಧಿಸಿದ ಪೊಲೀಸರ ಕೆಲಸವನ್ನು ಶ್ಲಾಘಿಸಿದರು. ಪ್ರತಿಭಟನೆಯಲ್ಲಿ ಬಜರಂಗ ದಳ, ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಹಾಗೂ ಕನ್ನಡ ಪರ ಸಂಘಟನೆಗಳ ಕಾರ್ಯಕರ್ತರು ಭಾಗವಹಿಸಿದ್ದರು.

ದರ್ಶನ್‌ನನ್ನು ಚಿತ್ರರಂಗದಿಂದ ಬ್ಯಾನ್ ಮಾಡಿ

ಚಿತ್ರದುರ್ಗ: ನಟ ದರ್ಶನ್‌ನನ್ನು ಚಿತ್ರರಂಗದಿಂದ ಬ್ಯಾನ್ ಮಾಡಬೇಕು, ಆತನಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಿ ಎಂದು ಮೃತ ರೇಣುಕಾಸ್ವಾಮಿ ತಾಯಿ ರತ್ನಪ್ರಭಾ ಆಕ್ರೋಶ ಹೊರ ಹಾಕಿದ್ದಾರೆ. ತಮ್ಮ



ಪುತ್ರನನ್ನು ದರ್ಶನ್ ಹಾಗೂ ಅವರ ಆಪ್ತರು ಹತ್ಯೆ ಮಾಡಿರುವ ಹಿನ್ನೆಲೆಯಲ್ಲಿ ರತ್ನಪ್ರಭಾ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ದರ್ಶನ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.


ದೊಡ್ಡ ಮನುಷ್ಯನ ಗುಣ ದರ್ಶನ್‌ಗಿಲ್ಲ, ಸಿನಿಮಾ ಇಂಡಸ್ಟ್ರಿಯಿಂದಲೇ ಆತನನ್ನು ಬ್ಯಾನ್ ಮಾಡಬೇಕು. ದರ್ಶನ್ ಯಾವುದೇ ಸಿನಿಮಾಗಳನ್ನು ರಿಲೀಸ್ ಮಾಡಬಾರದು. ಡಿ ಬಾಸ್ ಎನ್ನುವ ಅಭಿಮಾನಿಗಳು ಇವನ ಹೇಯ ಕೃತ್ಯವನ್ನು ನೋಡಿ ಕಲಿಯಲಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದರ್ಶನ್ ಅಭಿಮಾನಿ ಎಂದು ರೇಣುಕಾ ಸ್ವಾಮಿ ತೋರಿಸಿಕೊಂಡಿಲ್ಲ. ಮೆಸೇಜ್ ಮಾಡಿದ ಕಾರಣಕ್ಕೆ ಅಪಹರಣ ಮಾಡಿ ಭೀಕರ ಕೊಲೆ ಮಾಡಿದ್ದಾರೆ. ಈ ಸಂಬಂಧ ಸರ್ಕಾರ ಸೂಕ್ತ ತನಿಖೆ ಮಾಡಿ ಕಠಿಣ ಕ್ರಮ ಕೈಗೊಳ್ಳಬೇಕು. ಸಿಬಿಐ ತನಿಖೆ ಮೂಲಕ ನಟ ದರ್ಶನ್ ಗ್ಯಾಂಗ್ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ರೇಣುಕಾಸ್ವಾಮಿ ಹತ್ಯೆ ಆರೋಪಿಗಳು 13 ಅಲ್ಲ 17 ಮಂದಿ; ಮಹಿಳೆ ಸೇರಿ ನಾಲ್ವರಿಗಾಗಿ ಹುಡುಕಾಟ

ಬೆಂಗಳೂರು, ಜೂ.12– ಬೆಂಗಳೂರಿನಲ್ಲಿ ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣ ಆರೋಪದ ಹಿನ್ನೆಲೆ ನಟ ದರ್ಶನ್, ಆತನ ಎರಡನೇ ಪತ್ನಿ ಪವಿತ್ರಾ ಗೌಡ ಸೇರಿ ಒಟ್ಟು 13 ಮಂದಿಯನ್ನು ಈವರೆಗೆ ಬಂಧಿಸಲಾಗಿದ್ದು, ಅವರೆಲ್ಲಾ 6 ದಿನಗಳ ಪೊಲೀಸ್ ಕಸ್ಟಡಿಯಲ್ಲಿದ್ದಾರೆ.

ಆದರೆ ಈಗ ಈ ಕೊಲೆ ಪ್ರಕರಣದಲ್ಲಿ 13 ಅಲ್ಲ 17 ಮಂದಿ ಆರೋಪಿಗಳಿದ್ದಾರೆ ಎಂಬುದು ಸ್ಪಷ್ಟವಾ ಗಿದೆ. ಪ್ರಕರಣದಲ್ಲಿ 4 ಮಂದಿ ತಲೆ ಮರೆಸಿಕೊಂಡಿದ್ದು, ಅವರಿಗಾಗಿ ತೀವ್ರ ಶೋಧ ನಡೆಯುತ್ತಿದೆ. ಈ ಭೀಭತ್ಸವಾದ ಕೊಲೆ ಪ್ರಕರಣದಲ್ಲಿ 33 ವರ್ಷದ ಪವಿತ್ರಾ ಗೌಡ ಮೊದಲ ಆರೋಪಿಯಾಗಿದ್ದರೆ, 47 ವರ್ಷದ ನಟ ದರ್ಶನ್ ಎರಡನೇ ಆರೋಪಿಯಾಗಿದ್ದಾರೆ. ಇದರಲ್ಲಿ ಎ6 ಆರೋಪಿಯಿಂದ ಹಿಡಿದು ಎ9 ರವರೆಗಿನ ಆರೋಪಿಗಳು ತಲೆ ಮರೆಸಿಕೊಂಡಿದ್ದಾರೆ. ಅಂದರೆ ಕ್ರಮವಾಗಿ ಜಗದೀಶ್ ಅಲಿಯಾಸ್ ಜಗ್ಗ, ಅನು, ರವಿ ಹಾಗೂ ರಾಜು ತಲೆಮರೆಸಿಕೊಂಡಿದ್ದಾರೆ. ಇದರಲ್ಲಿ ಅನು ಮಹಿಳಾ ಆರೋಪಿ ಎನ್ನಲಾಗುತ್ತಿದೆ. ಈ ಪ್ರಕರಣದಲ್ಲಿ ಪವಿತ್ರಾಗೌಡಗೆ ರೇಣುಕಾಸ್ವಾಮಿ ಮೆಸೇಜ್ ಮಾಡಿದಾಗ ಪವಿತ್ರಾ ಸ್ನೇಹಿತೆ ಅನು ಎಂಬಾಕೆ ರೇಣುಕಾಸ್ವಾಮಿಗೆ ಮೆಸೇಜ್ ಮಾಡಿ ಧಮ್ಕಿ ಹಾಕಿದ್ದಳು ಎಂದು ಹೇಳಲಾಗಿದೆ.



ರೇಣುಕಾಸ್ವಾಮಿ

ನಕ್ಕರೆ ಅದೇ ಸ್ವರ್ಗ

ಇಂಜಿನಿಯರ್ ಹಾಗೂ ಅವನ ಪುಟ್ಟ ಮಗಳು ಮಾತನಾಡುತ್ತ ಟಿಫಿನ್ ತಿಂತಾ ಇದ್ರು...

ಮಗಳು : ಪಪ್ಪಾ ಈ ರಜೆ ಮುಗಿಯುವಷ್ಟರಲ್ಲಿ ನನ್ನ ಜೊತೆ ಸ್ಕೂಲಿಗೆ ಹೋಗೋಕೆ ಒಬ್ಬ ತಮ್ಮ ಬೇಕು.

ಇಂಜಿನಿಯರ್ : ಪುಟ್ಟಿ ಈ ಕೆಲಸಕ್ಕೆ 9 ತಿಂಗಳು ಬೇಕು. 2 ತಿಂಗಳಲ್ಲಿ ಆಗಲ್ಲ.

ಮಗಳು : ಪಪ್ಪಾ ಹಂಗಾದ್ರೆ ಮೂರ್ನಾಲ್ಕು ಜನರಿಗೆ ಕಂಟ್ರಾಕ್ಟ್ ಕೊಟ್ಟು ಬಿಡು. ಬೇಗನೆ ಕೆಲ್ಸ ಮಾಡಲಿ...!!!

ಮೈಸೂರು ಮಿತ್ರ

ಗುರುವಾರ, 13 ಜೂನ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಎಷ್ಟೇ ಸಂಬಂಧಿಕರು, ಸ್ನೇಹಿತರು ಇದ್ದರೂ ಕೂಡ ಕೆಲವೊಂದು ಪರಿಸ್ಥಿತಿಯಲ್ಲಿ ನಾವು ಒಂಟಿ ಅನಿಸಿಬಿಡುತ್ತದೆ.– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಇತರರ ಕಣ್ಣಿನ ಕಸ ಕಾಣುವುದು, ತನ್ನ ಕಣ್ಣಿನ ಕಸ ಕಾಣುವುದಿಲ್ಲ.

ನಿಮ್ಮ ಪತ್ರಗಳು

■ ವಿಚ್ಛೇದನ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆ!

ಮಾನ್ಯರೆ,

ಇತ್ತೀಚೆಗೆ ವಿಚ್ಛೇದನ ಪ್ರಕರಣಗಳು ಹೆಚ್ಚುತ್ತಿವೆ. ಚಂದನ್ ಶೆಟ್ಟಿ ಹಾಗೂ ನಿವೇದಿತಾ ಗೌಡ ಅವರ ವಿಚ್ಛೇದನ ಪ್ರಕರಣ ಇನ್ನೂ ಹಸಿ ಹಸಿ ಆಗಿರುವಾಗಲೇ, ದೊಡ್ಮನೆಯಿಂದ ಯುವ ರಾಜ್‌ಕುಮಾರ್ ದಂಪತಿಗಳು ಕೂಡ ವಿಚ್ಛೇದನಕ್ಕೆ ಮುಂದಾಗಿರುವುದು ಆತಂಕಪಡುವ ಸಂಗತಿಯಾಗಿದೆ. ಇವರೆಲ್ಲ ಸೆಲೆಬ್ರಿಟಿಗಳು ಆಗಿರುವುದರಿಂದ ಈ ವಿಚಾರ ಹೆಚ್ಚು ಪ್ರಚಾರಗಳಾಗುತ್ತಿದೆ. ಆದರೆ ನಿತ್ಯ ಜನಸಾಮಾನ್ಯರ ಜೀವನದಲ್ಲಿ ಇಂತಹ ಹಲವಾರು ಘಟನೆಗಳು ನಡೆಯುತ್ತಲೇ ಇರುತ್ತವೆ. ಮೊದಲೆಲ್ಲ ದಂಪತಿಗಳು ಏನೇ ಸಮಸ್ಯೆ ಇದ್ದರೂ ಅದನ್ನು ಸಹಿಸಿಕೊಂಡು, ಸರಿಪಡಿಸಿ ಕೊಂಡು ಜೀವನ ಸಾಗಿಸುತ್ತಿದ್ದರು. ಆದರೆ ಈಗ ಪ್ರತಿಯೊಬ್ಬರೂ ಸ್ವತಂತ್ರರಾಗಿದ್ದಾರೆ. ಸಹಿಸಿಕೊಳ್ಳುವ ಮನಸ್ಥಿತಿ ಕೂಡ ಬದಲಾಗಿದೆ. ಸಂಬಂಧಗಳ ಮೌಲ್ಯ ಕೂಡ ಕಡಿಮೆಯಾಗಿದೆ. ಇತ್ತೀಚೆಗೆ ಸಣ್ಣ–ಪುಟ್ಟ ಸಂಗತಿಗಳಿಗೆಲ್ಲ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುವುದು ಸಾಮಾನ್ಯವಾಗಿ ಬಿಟ್ಟಿದೆ.

ಸಮಸ್ಯೆಗಳ ಕುರಿತು ದಂಪತಿಗಳಿಬ್ಬರೂ ಮುಕ್ತವಾಗಿ ಮಾತನಾಡದೇ, ಚರ್ಚಿಸದೇ ಇರುವುದು, ತಪ್ಪು ಒಪ್ಪಿಕೊಳ್ಳದೇ ಪ್ರತಿಯೊಂದಕ್ಕೂ ವಾದ ಮಾಡುವುದು ವಿಚ್ಛೇದನಗಳು ಹೆಚ್ಚಾಗಲು ಬಹುದೊಡ್ಡ ಕಾರಣವಾಗುತ್ತಿದೆ. ವಿಚ್ಛೇದನದ ಕಾರಣದಿಂದಾಗಿ ಪೋಷಕ–ಮಕ್ಕಳ ಸಂಬಂಧವು ತೊಂದರೆಗೊಳಗಾಗುವ ಅನೇಕ ನಿದರ್ಶನಗಳಿವೆ. ಹೆತ್ತವರ ವಿವಾಹದ ವಿಘಟನೆಯಿಂದ ಮಕ್ಕಳ ಮೇಲೆ ಹಾಗೂ ವೃದ್ಧಾಪ್ಯದ ಅಂಚಿನಲ್ಲಿರುವ ಪೋಷಕರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಮನುಷ್ಯ ಮನುಷ್ಯರ ನಡುವೆ ಬಿರುಕುಗಳು ಉಂಟಾಗಿ ಮಾನವೀಯ ಸಂಬಂಧಗಳು, ಬಾಂಧವ್ಯಗಳ ಕೊರತೆ ಹೆಚ್ಚಾಗುತ್ತಿದೆ. ವಿಚ್ಛೇದನವು ಪ್ರತಿದಿನ ಮಾನಸಿಕ, ದೈಹಿಕ ಹಾಗೂ ಭಾವನಾತ್ಮಕ ಒತ್ತಡಕ್ಕೆ ಸಿಲುಕಿಸುತ್ತದೆ. ಹೀಗಾಗಿ ಪ್ರತಿಯೊಬ್ಬ ದಂಪತಿಯು ಶಾಂತಿ ಹಾಗೂ ಸಹಾನುಭೂತಿಯ ಪ್ರತಿಕ್ರಿಯೆಯೊಂದಿಗೆ ಭಾವನಾತ್ಮಕವಾಗಿ ಬದುಕಲು ಆರಂಭಿಸುವುದು ಒಳ್ಳೆಯ ಬೆಳವಣಿಗೆ ಆಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

■ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಗಣನೀಯ ಇಳಿಕೆ

ಮಾನ್ಯರೆ,



ಹಿಂದಿನ ವರ್ಷಗಳಿಗೆ ಹೋಲಿಸಿದರೆ ಇತ್ತೀಚೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಗಣನೀಯವಾಗಿ ಇಳಿಕೆ ಕಂಡಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಪ್ರಸ್ತುತ ಹೈದರಾಬಾದ್ ಮತ್ತು ಚೆನ್ನೈಗಳಿಗೆ ಮಾತ್ರ ಎರಡು ದೈನಂದಿನ ವಿಮಾನಗಳ ಸಂಪರ್ಕ ವ್ಯವಸ್ಥೆ ಇರುವುದು. ಹೀಗಾಗಿ, ಬೆಂಗಳೂರು, ಗೋವಾ, ಕೊಚ್ಚಿನ್ ಹಾಗೂ ಇನ್ನಿತರೆ ಭಾಗಗಳಿಗೆ ತೆರಳುವ ಪ್ರಯಾಣಿಕರಿಗೆ ತುಂಬಾ ಅನಾನುಕೂಲವಾಗಿದೆ. ಮೈಸೂರಿನಿಂದ ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಪ್ರತೀ ದಿನ ಎರಡು ಗಂಟೆಗೊಮ್ಮೆ ಒಂದು ಫ್ಲೈ ಬಸ್ ವ್ಯವಸ್ಥೆ ಇದೆ. ಆದರೆ, ದಿನಕ್ಕೆ ಒಂದು ಬಾರಿಯೂ ವಿಮಾನ ವ್ಯವಸ್ಥೆ ಏಕಿಲ್ಲ ಎಂಬ ಪ್ರಶ್ನೆ ಮೂಡುತ್ತದೆ. ಕಾರಣಗಳು ಏನೇ ಇರಲಿ ಸಂಬಂಧಪಟ್ಟ ಜನಪ್ರತಿನಿಧಿಗಳು, ಅಧಿಕಾರಿಗಳು ಇನ್ನಾದರೂ ಎಚ್ಚೆತ್ತು, ಮೈಸೂರಿನಿಂದ ತುರ್ತು ಕಾರ್ಯ ನಿಮಿತ್ತ ಬೆಂಗಳೂರು, ಗೋವಾ, ಕೊಚ್ಚಿನ್ ಸೇರಿದಂತೆ ಇನ್ನಿತರ ಭಾಗಗಳಿಗೆ ತೆರಳುವ ಪ್ರಯಾಣಿಕರಿಗೆ ಅನುಕೂಲವಾಗುವಂತೆ ವಿಮಾನಯಾನ ವ್ಯವಸ್ಥೆ ಕಲ್ಪಿಸಬೇಕಿದೆ. ಇದರಿಂದ ಮೈಸೂರಿನ ಪ್ರವಾಸೋದ್ಯಮಕ್ಕೂ ಅನುಕೂಲವಾಗುತ್ತದೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

■ ಮೈಸೂರು ನಗರಪಾಲಿಕೆ ನಿರ್ಲಕ್ಷ್ಯ

ಮಾನ್ಯರೇ,



ಮೈಸೂರು ಮಹಾನಗರ ಪಾಲಿಕೆಯ ಕಸದ ವಾಹನವು ಬೆಳ್ಳಂಬೆಳಿಗ್ಗೆಯೇ ಜನರ ನೆಮ್ಮದಿ ಕೆಡುವ ಹಾಗೆ ಮೈಕ್ ಶಬ್ದದೊಂದಿಗೆ ಬರುತ್ತಿದೆ. ಇದು ಒಂದು ಕಡೆಯಾದರೆ ಮತ್ತೊಂದು ಕಡೆ ಕೆಲವು ಜನರು ತಮ್ಮಿಷ್ಟ ಬಂದಂತೆ ಸಿಕ್ಕ ಸಿಕ್ಕ ಕಡೆ ಕಸ ಹಾಕುತ್ತಾ ತಿರುಗಾಡಲು ಅಸಹ್ಯವಾಗುವಂತೆ ಮಾಡಿ ಅನಾಗರಿಕರ ರೀತಿ ನಡೆದುಕೊಳ್ಳುವುದು ನಡೆದಿದೆ. ಇದಲ್ಲದೆ ಅಳಿದುಳಿದ ಹಳಸಲು ಅನ್ನ, ಸಾರು ಮುಂತಾದವುಗಳನ್ನು ಪ್ಲಾಸ್ಟಿಕ್ ಕವರ್‌ಗಳಲ್ಲಿ ಹಾಕಿ ಎಸೆದು ಮೂಕ ಪ್ರಾಣಿಗಳ ಪ್ರಾಣಕ್ಕೂ ಕಂಟಕವಾಗುತ್ತಿರುವುದು ಕಂಡು ಬರುತ್ತಿದೆ. ಇದ್ಯಾವುದೂ ನಗರಪಾಲಿಕೆಯವರಿಗೆ ಕಾಣುತ್ತಿಲ್ಲವೇ? ಅಥವಾ 'ಸಾಯಲಿ ಬಿಡು' ನಮಗೇನು ಎಂಬ ನಿರ್ಲಕ್ಷ್ಯವೇ? ಇದನ್ನು ಸರಿಪಡಿಸುವವರಾರು? ಅಂದ ಹಾಗೆ ಇಲ್ಲಿರುವ ಚಿತ್ರ ಕುವೆಂಪುನಗರ ಬಸ್ ಡಿಪೋ ಪಕ್ಕದ್ದು.

–ರಾಜಶೇಖರ ಮೂರ್ತಿ, ಅರವಿಂದನಗರ, ಮೈಸೂರು.

■ ರಸ್ತೆ ಗುಂಡಿಗಳನ್ನು ಮುಚ್ಚಿ



ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ಸ್ಪೋರ್ಟ್ಸ್ ಕ್ಲಬ್‌ನ ಬಲಭಾಗದ 2ನೇ ಅಡ್ಡರಸ್ತೆ ಗುಂಡಿಗಳಿಂದ ಕೂಡಿದ್ದು, ನಡೆದಾಡುವುದು ಸಹ ಕಷ್ಟವಾಗಿದೆ. ಅನೇಕ ದ್ವಿಚಕ್ರವಾಹನಗಳು ಈ ರಸ್ತೆಯಲ್ಲಿ ಸಂಚರಿಸುತ್ತವೆ ಮತ್ತು ನನ್ನಂತಹ ಅನೇಕ ಹಿರಿಯ ನಾಗರಿಕರು ಈ ರಸ್ತೆಯ ಮೂಲಕ ವಾಯುವಿಹಾರಕ್ಕೆ ತೆರಳುತ್ತಾರೆ. ಆದ ಕಾರಣ ಅನಾಹುತಗಳು ಸಂಭವಿಸುವ ಮುನ್ನ ಸಂಬಂಧಪಟ್ಟ ಅಧಿಕಾರಿಗಳು ದಯಮಾಡಿ ಇತ್ತ ಗಮನಹರಿಸಿ ಆದಷ್ಟು ಶೀಘ್ರ ಈ ರಸ್ತೆಯ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ಕೆ.ಎಸ್.ಅಶ್ವತ್ಥನಾರಾಯಣ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಪರಿಚಿತರೊಳಗಿರುವ ಅಪರಿಚಿತರು!!



> “ ನಾವು ಯಾರೂ ಈ ಸಮಾಜಕ್ಕೆ ಹಾಗೂ ನಮ್ಮ ಮನೆಗಳಿಗೂ ಅನಿವಾರ್ಯವಲ್ಲ. ಇರುವಾಗ ನಮ್ಮ ಅಗತ್ಯ ಹೆಚ್ಚಾಗಿರುವುದಾಗಿ ಕಂಡುಬರುತ್ತದೆ ಅಥವಾ ನಾವೇ ಹಾಗೆ ಭಾವಿಸಿಕೊಂಡು ಬಿಡುತ್ತೇವೆ. ಆದರೆ ಎಂತಹ ದೊಡ್ಡ ವ್ಯಕ್ತಿತ್ವದವರ ಸಾವಾದಾಗಲೂ ಕೆಲವೇ ದಿನಗಳಲ್ಲಿ ಎಲ್ಲವೂ ಮೊದಲಿನಂತೆಯೇ ಸಾಗುವುದನ್ನು ಕಾಣುತ್ತೇವೆ. ನಮಗೆ ಭ್ರಮೆ. ನಾವಿಲ್ಲದಿದ್ದರೆ ಏನೋ ಆಗಿಹೋಗುತ್ತದೆ ಎಂದು. ಅಂತಹ ಭ್ರಮೆಯನ್ನು ಬಿಟ್ಟು ಸಮಾಜದೊಡನೆ, ಮನೆಯವರೊಡನೆ ಮುಕ್ತವಾಗಿ ಬೆರೆಯುವುದು ಬುದ್ಧಿವಂತಿಕೆ; ನಮ್ಮ ಹಿರಿಮೆ ಕಾಯ್ದುಕೊಂಡಂತೆ.

ಇತ್ತೀಚೆಗೆ ಪತ್ರಿಕೆಗಳಲ್ಲಿ ಹಾಗೂ ಮಾಧ್ಯಮಗಳಲ್ಲಿ ವರದಿಯಾಗುವ ಬಹುತೇಕ ವಂಚನೆ ಪ್ರಕರಣಗಳಲ್ಲಿ ಜನರು ಗೊತ್ತಿದ್ದೂ ಮೋಸ ಹೋಗುತ್ತಿರುವ ವರದಿಗಳೇ ಜಾಸ್ತಿಯಾಗಿವೆ. ಅನೇಕ ವೇಳೆ ನಾವೂ ಪರಿಚಿತರಿಂದಲೇ ಸಣ್ಣ ಪ್ರಮಾಣದಲ್ಲಿಯಾದರೂ ಮೋಸ ಹೋಗಿರುತ್ತೇವೆ. ಈ ಪ್ರಮಾಣ ದೊಡ್ಡದಾದಾಗ ನಮಗೆ ಆಘಾತವಾಗುತ್ತದೆ. ಆಗ ನಮ್ಮ ಪ್ರತಿಕ್ರಿಯೆ ಹೇಗಿರುತ್ತದೆ ಎಂದರೆ, ಅವನನ್ನು/ಅವಳನ್ನು ನಾನು ಗೋವಿನಂತೆ ಎಂದು ಭಾವಿಸಿದ್ದೆ, ಆದರೆ ನಂತರ ಗೊತ್ತಾದದ್ದು ಅದು ಗೋವಲ್ಲ, ವ್ಯಾಘ್ರ ಎಂದು ಹೇಳುತ್ತಾರೆ. ಈ ರೀತಿ ಮೋಸ ಮಾಡುವ ವ್ಯಕ್ತಿಗಳಲ್ಲಿ ಬಹುತೇಕರು ನಮಗೆ ಪರಿಚಿತರೇ ಆಗಿರುತ್ತಾರೆ ಎಂಬುದು ವಿಶೇಷ. ಹಲವಾರು ವರ್ಷಗಳು ಅವರೊಡನೆ ನಮಗೆ ಸ್ನೇಹ ಅಥವಾ ಸಂಬಂಧ ಇರುತ್ತದೆ. ಅವರನ್ನು ನಾವು ಬಹಳವಾಗಿ ನಂಬಿರುತ್ತೇವೆ, ಕೆಲವೊಮ್ಮೆ ಅವರು ನಮಗೆ ಆದರ್ಶ ವ್ಯಕ್ತಿಗಳಂತೆಯೂ ಕಂಡುಬಂದಿರುತ್ತಾರೆ. ಅಂತಹವರಿಂದ ಮೋಸವಾದಾಗ ನಮಗೆ ಆಘಾತವಾಗುತ್ತದೆ. ಕೆಲವೊಮ್ಮೆ ನಮ್ಮ ಒಡಹುಟ್ಟಿದವರೇ ಇಂತಹ ಕೆಲಸಕ್ಕೆ ಕೈಹಾಕಿರುತ್ತಾರೆ. ಹಾಗೆ ಮಾಡಲು ಸಾಮಾನ್ಯವಾಗಿ ಹಣ ಅಥವಾ ಆಸ್ತಿ ಮುಖ್ಯ ಕಾರಣವಾಗಿರುತ್ತದೆ.

ನಾವು ಬದುಕುವುದು ಸಾಮಾನ್ಯವಾಗಿ ನಂಬಿಕೆಗಳ ಮೇಲೆಯೇ. ಎಲ್ಲವನ್ನು ಅಥವಾ ಎಲ್ಲರನ್ನು ಅನುಮಾನದ ದೃಷ್ಟಿಯಿಂದ ನೋಡುವುದು ತುಸು ಕಷ್ಟವೇ. ಅದರಲ್ಲೂ ನಮಗೆ ತೊಂದರೆಗಳಾದಾಗ ಅಲ್ಪಸ್ವಲ್ಪ ಸಹಾಯ ಮಾಡಿದವರನ್ನು ನಾವು ಸಾಮಾನ್ಯವಾಗಿ ಕೃತಜ್ಞತಾ ಭಾವದಿಂದಲೇ ನೋಡುತ್ತೇವೆ, ಅವರ ಬಗೆಗೆ ನಮಗೆ ಕಿಂಚಿತ್ ಅನುಮಾನವೂ ಬರುವುದಿಲ್ಲ. ಆದರೆ, ಇಂತಹ ಕೆಲವರು ನಮ್ಮ ನಂಬಿಕೆ ಬಲವಾಗುತ್ತಿದ್ದಂತೆ ನಂತರದ ಹಂತದಲ್ಲಿ ಮೋಸ ಮಾಡುತ್ತಾರೆ. ಅವರ ಉದ್ದೇಶ ಸಹಾಯ ಮಾಡುವುದಾಗಿರುವುದಿಲ್ಲ, ಬದಲಾಗಿ ಮೋಸ ಮಾಡುವುದೇ ಆಗಿರುತ್ತದೆ. ನಮ್ಮ ಅನೇಕ ಸ್ನೇಹಿತರು ಹಾಗೂ ನೆಂಟರೂ ಸಾಮಾನ್ಯವಾಗಿ ನಮಗೆ ಮೋಸಗಾರರಂತೆ ಕಂಡುಬರುವುದಿಲ್ಲ. ಆದರೆ ಯಾವಾಗ ನಮ್ಮಲ್ಲಿ ಹಣವಿರುವುದು ಅವರಿಗೆ ಗೊತ್ತಾಗುವುದೋ ಆಗ ಅಥವಾ ನಮ್ಮ ದೌರ್ಬಲ್ಯ ಅವರಿಗೆ ಗೊತ್ತಾದಾಗ ಅವರು ಮೋಸ ಮಾಡುವ ಮನಸ್ಸು ಮಾಡುತ್ತಾರೆ. ಅತೀ ವಿನಯದಿಂದ ಮಾತನಾಡಿ ತಾವು ಬಹು ಉಪಕಾರಿಗಳು ಎಂದು ನಂಬಿಸುತ್ತಾರೆ. ಕೊನೆಗೆ ಮೋಸ ಮಾಡುತ್ತಾರೆ.

ಪ್ರತಿ ವ್ಯಕ್ತಿಯಲ್ಲೂ ಸಾಮಾನ್ಯವಾಗಿ ಎರಡು ಮುಖಗಳಿರುತ್ತದೆ. ಹೊರ ಮುಖದಲ್ಲಿ ಯಾರೂ ಅವರನ್ನು ಕೆಟ್ಟವರೆಂದು ತೋರಿಸಿಕೊಳ್ಳುವುದಿಲ್ಲ. ಆದರೆ ಅವರ ಮತ್ತೊಂದು ಮುಖ ನಮಗೆ ಅರಿವಾಗುವುದು ಅವರು ದುಷ್ಟತನ ತೋರಿದಾಗ. ಏನೂ ದೊರಕದಿರುವಾಗ ನಿರ್ಮಲವಾಗಿರುವ ಮನಸ್ಸು ಮತ್ತೊಂದನ್ನು ಕಂಡಾಗ, ಅದು ಸುಲಭವಾಗಿ ನಮ್ಮ ವಶವಾಗಬಹುದು ಎಂದಾದಾಗ ಅದನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತದೆ. ಕೆಲವೊಮ್ಮೆ ಅದು ನಮಗೆ ಅಗತ್ಯ ಇರದಿದ್ದರೂ ಸಿಕ್ಕರೆ ಸಿಗಲಿ ಎಂದು ಹಂಬಲಿಸುತ್ತದೆ. ಆಗ ನಮ್ಮ ಮತ್ತೊಂದು ಮುಖ/ ಸ್ವರೂಪ ಅರಿವಾಗುತ್ತದೆ. ಅತ್ಯಂತ ಸಂಭಾವಿತರೆನಿಸಿಕೊಂಡವರೂ ಜಗಳದಲ್ಲಿ ತೊಡಗಿದಾಗ ಅವರ ಬಾಯಿಯಿಂದ ಅವಾಚ್ಯ ಶಬ್ದಗಳು ಬರುವುದನ್ನು ಕೇಳುತ್ತೇವೆ. ಆಗ ನಮಗೆ ಆಶ್ಚರ್ಯವಾಗುತ್ತದೆ. ಇವರು ಹೀಗಾ...? ಎಂದು ಮನಸ್ಸು ದಿಗಿಲುಗೊಳ್ಳುತ್ತದೆ.

ಇಂತಹ ವರ್ತನೆಗಳು ಹೊರಗಿನವರಿಂದ ಮಾತ್ರ ವ್ಯಕ್ತವಾಗುವುದಿಲ್ಲ. ಮನೆಯವರೂ ಕೆಲವೊಮ್ಮೆ ಇಂತಹ ವೈರುಧ್ಯದ ಮುಖಗಳನ್ನು ತೋರಿಸುತ್ತಾರೆ. ಶ್ರೀ ರಾಮಕೃಷ್ಣ ಪರಮಹಂಸರು ಹೇಳುತ್ತಿದ್ದ ಕಥೆಯೊಂದಿದೆ. ಮನುಷ್ಯ ಹೇಗೆ ಎರಡೆರಡು ಮುಖಗಳನ್ನು ಹೊಂದಿರುತ್ತಾನೆ ಎಂಬುದಕ್ಕೆ ಈ ಕಥೆ ಉತ್ತಮ ಉದಾಹರಣೆ; ಒಮ್ಮೆ ಒಬ್ಬ ಗೃಹಸ್ಥ, ಒಬ್ಬ ಸನ್ಯಾಸಿಯ ಬಳಿಗೆ ಹೋಗುತ್ತಾನೆ. ಹೇಗಿದ್ದೀರಿ? ಎಂದು ಸನ್ಯಾಸಿ ಕೇಳುತ್ತಾನೆ. ಅದಕ್ಕೆ ಆ ಗೃಹಸ್ಥ ನಾನು ಅತ್ಯಂತ ಸಂತೋಷದಿಂದ ಇದ್ದೇನೆ. ನನ್ನನ್ನು ಪ್ರೀತಿಸುವ ತಾಯಿ. ಗೌರವಿಸುವ ಹೆಂಡತಿ, ಹೇಳಿದಂತೆ ಕೇಳುವ ಮಕ್ಕಳು ಎಲ್ಲರೂ ಇದ್ದಾರೆ. ಆದ್ದರಿಂದ ನಾನು ಸುಖಿ ಎನ್ನುತ್ತಾನೆ. ಅದಕ್ಕೆ ಸನ್ಯಾಸಿ, ಇದು ನೀನು ಸುಖಿ ಎಂದು ಹೇಳಲು ಸಮಂಜಸ ಉತ್ತರವಲ್ಲ. ಅವರೆಲ್ಲಾ ನಿನ್ನನ್ನು ಅಷ್ಟು ಇಷ್ಟಪಡದಿರಲೂ ಬಹುದು ಎಂದಾಗ ಗೃಹಸ್ಥ ಇಲ್ಲ ಹಾಗಲ್ಲ ಎನ್ನುತ್ತಾನೆ. ಅದಕ್ಕೆ ಆ ಸನ್ಯಾಸಿ ಈ ಬಗ್ಗೆ ಒಂದು ಪರೀಕ್ಷೆ ಮಾಡೋಣವೇ? ಎಂದು ಕೇಳುತ್ತಾನೆ. ಅದಕ್ಕೆ ಗೃಹಸ್ಥ ಒಪ್ಪುತ್ತಾನೆ. ಅವನಿಗೆ ಸ್ವಾಮಿಗಳು ಒಂದು ಪುಡಿಯನ್ನು ಕೊಡುತ್ತಾರೆ. ಇದನ್ನು ಮನೆಗೆ ಹೋಗಿ ನೀರಿನಲ್ಲಿ ಬೆರೆಸಿ ಕುಡಿ, ನಿನಗೆ ಗಾಢವಾದ ನಿದ್ರೆ ಬರುತ್ತದೆ. ನೀನು ಥೇಟ್ ಸತ್ತಂತೆ ಬಿದ್ದಿರುತ್ತೀಯಾ. ಆಗ ನಿನ್ನ ಮನೆಯವರು ಹೀಗೆ ಭಾವಿಸುತ್ತಾರೆ. ನಾನು ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬರುತ್ತೇನೆ. ಆನಂತರ ನಿನ್ನನ್ನು ಯಾರು ಎಷ್ಟು ಇಷ್ಟಪಡುತ್ತಾರೆ ಎಂಬುದು ವ್ಯಕ್ತವಾಗುತ್ತದೆ. ಹಾಗೆ ಮಾಡು ನೋಡೋಣ ಎನ್ನುತ್ತಾರೆ. ಅದರಂತೆ ಆ ಗೃಹಸ್ಥ ಮನೆಗೆ ಹೋಗಿ ಆ ಪುಡಿಯನ್ನು ಸೇವಿಸಿದ ನಂತರ ಪ್ರಜ್ಞೆ ಕಳೆದುಕೊಂಡು ಮಲಗುತ್ತಾನೆ. ಮನೆಯವರೆಲ್ಲರೂ ಅವನು ಮಿಸುಕಾಡದೇ ಬಿದ್ದಿರುವುದನ್ನು ಕಂಡು, ಎಬ್ಬಿಸಲು ಪ್ರಯತ್ನಿಸಿದರು, ಸಾಧ್ಯವಾಗದೆ, ಅವನು ಸಾವನ್ನಪ್ಪಿರುವುದಾಗಿ ಭಾವಿಸಿ ಅಳಲು ಆರಂಭಿಸುತ್ತಾರೆ. ಆಗ ಆ ಸನ್ಯಾಸಿ ಅಲ್ಲಿಗೆ ಬರುತ್ತಾರೆ. ಅವರ ಮುಂದೆ ಕುಟುಂಬದವರು ತಮ್ಮ ದುಃಖ ತೋಡಿಕೊಳ್ಳುತ್ತಾರೆ. ಆಗ ಸನ್ಯಾಸಿ ಈ ವ್ಯಕ್ತಿ ಮೃತಪಟ್ಟಿಲ್ಲ, ಮತ್ತೆ ಬದುಕಬಹುದು. ಇವರಿಗೆ ಈ ಪುಡಿಯನ್ನು ನೀರಿನಲ್ಲಿ ಸೇರಿಸಿ ಕುಡಿಸಿ ಏಳುತ್ತಾನೆ ಎಂದು ಹೇಳಿ ಒಂದು ಪುಡಿಯನ್ನು ನೀಡುತ್ತಾರೆ. ಆಗ ಗೃಹಸ್ಥನ ಹೆಂಡತಿ ಅದನ್ನು ಕುಡಿಸಲು ಹೋದಾಗ ಸನ್ಯಾಸಿ ಹಾಗೆ ಕುಡಿಸಲಾಗದು. ಇದನ್ನು ಮೊದಲು ನೀವು ಕುಡಿಯಬೇಕು. ನೀವು ಕುಡಿದಾಗ ನೀವು ಸಾಯುತ್ತೀರಿ. ಆಗ ನಿಮ್ಮ ಗಂಡ ಬದುಕುತ್ತಾರೆ ಎನ್ನುತ್ತಾರೆ. ಆಗ ಆತನ ಮಡದಿ ಅಯ್ಯೋ! ನಾನು ಕುಡಿಯುವುದಿಲ್ಲ. ನನಗೆ ಸಾಯಲು ಇಚ್ಛೆ ಇಲ್ಲ. ನಾನು ಸತ್ತರೆ ನನ್ನ ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ ಎನ್ನುತ್ತಾಳೆ. ಕೊನೆಗೆ ಆಕೆಯೇ ಇದನ್ನು ನನ್ನ ಅತ್ತೆ (ಗಂಡನ ತಾಯಿ) ಕುಡಿಯಲಿ. ಹೇಗಿದ್ದರೂ ಅವರಿಗೆ ವಯಸ್ಸಾಗಿದೆ ಎನ್ನುತ್ತಾಳೆ. ಆಗ ಆ ತಾಯಿಯೂ ಇಲ್ಲ ನಾನು ಸಾಯುವುದಿಲ್ಲ. ನಾನು ಸತ್ತರೆ ಮೊಮ್ಮಕ್ಕಳನ್ನು ಯಾರು ನೋಡಿಕೊಳ್ಳುತ್ತಾರೆ ಎನ್ನುತ್ತಾಳೆ. ಕೊನೆಗೆ ಸನ್ಯಾಸಿ ಹಾಗಾದರೆ ಈ ವ್ಯಕ್ತಿಯ ಪ್ರಾಣ ಮರಳಿ ಬರುವುದಿಲ್ಲ. ಇದಕ್ಕೆ ಅಂತ್ಯಸಂಸ್ಕಾರ ಮಾಡಬೇಕು. ದೇಹವನ್ನು ಮಂಚದ ಸಮೇತ ಹೊರಗೆ ತೆಗೆದುಕೊಂಡು ಹೋಗಿ ಎಂದು ಅಲ್ಲಿದ್ದವರಿಗೆ ಹೇಳುತ್ತಾನೆ. ಆಗ ಆ ಗೃಹಸ್ಥನ ತಾಯಿ ಬೇಡಿ ಮಂಚ ತೆಗೆದುಕೊಂಡು ಹೋಗಬೇಡಿ. ಅದು ನನ್ನ ಪತಿಯದ್ದು ಎನ್ನುತ್ತಾಳೆ. ಆದರೂ ಮಂಚವನ್ನು ಹೊರಗೆ ಸಾಗಿಸಲು ಅಲ್ಲಿದ್ದವರು ವಿಧ್ಯುಕ್ತರಾಗುತ್ತಾರೆ. ಆದರೆ ಮಂಚ ಬಾಗಿಲಿಗಿಂತ ದೊಡ್ಡದಾಗಿರುವುದರಿಂದ ಹೊರಗೆ ಸಾಗಿಸಲು ಸಾಧ್ಯವಾಗುವುದಿಲ್ಲ. ಅದಕ್ಕೆ ಸನ್ಯಾಸಿ, ಹಾಗಿದ್ದರೆ ಬಾಗಿಲ ಚೌಕಟ್ಟು ಕಿತ್ತಾಕಿ ಮಂಚವನ್ನು ಹೊರಗೆ ತೆಗೆದುಕೊಂಡು ಹೋಗಲು ಹೇಳುತ್ತಾರೆ. ಆಗ ಆತನ ಮಡದಿ ಓಡಿ ಬಂದು ಹಾಗೆ ಮಾಡಬೇಡಿ. ಹಾಗೆ ಮಾಡಿದರೆ ಮತ್ತೆ ರಿಪೇರಿ ಮಾಡಿಸಲು ಕಷ್ಟವಾಗುತ್ತದೆ ಎನ್ನುತ್ತಾಳೆ. ಆಗ ಆ ಗೃಹಸ್ಥ ಎಚ್ಚರಗೊಂಡು ನಿಮಗೆ ನನಗಿಂತ ನಿಮ್ಮ ಜೀವನ, ಈ ಮಂಚ, ಈ ಬಾಗಿಲೇ ಜಾಸ್ತಿಯಾಯಿತೇ ಎಂದು ಅವರನ್ನು ಪ್ರಶ್ನಿಸಿ, ಕೊನೆಗೆ ಜೀವನದಲ್ಲಿ ಜಿಗುಪ್ಸೆಗೊಂಡು ಸನ್ಯಾಸಿಯೊಡನೆ ತಾನೂ ಸನ್ಯಾಸಿಯಾಗಲು ಹೊರಡುತ್ತಾನೆ. ಇದು ಕಥೆ. ಇಂತಹ ಅನೇಕ ಪ್ರಸಂಗಗಳನ್ನು ನಾವು ನೋಡುತ್ತೇವೆ, ಕೇಳುತ್ತೇವೆ. ಹಾಗಿದ್ದರೆ ಮನುಷ್ಯನ ಅವಶ್ಯಕತೆ, ಅನಿವಾರ್ಯತೆ ಎಷ್ಟು ಎಂಬ ಪ್ರಶ್ನೆ ಮೂಡುತ್ತದೆ. ಅಲ್ಲದೆ ಅವರೆಲ್ಲಾ ನನ್ನನ್ನು ಬಹಳ ಇಷ್ಟಪಡುತ್ತಾರೆ ಎಂದುಕೊಂಡಿದ್ದೂ ಸುಳ್ಳು ಎನ್ನಿಸುತ್ತದೆ. ಆಗ ಪರಿಚಿತರ ಅಪರಿಚಿತ ಮುಖ ನಮಗೆ ಪರಿಚಯವಾಗುತ್ತದೆ.

ನಮ್ಮತನವನ್ನು ನಾವು ಉಳಿಸಿಕೊಳ್ಳಬೇಕು. ನಮಗೆ ಎರಡು ಮುಖಗಳಿರಬಾರದು. ಒಬ್ಬರು ಪ್ರಖ್ಯಾತ ವಿದ್ವಾಂಸರಿದ್ದರು. ಅವರ ಪ್ರವಚನ ಕೇಳಲು ಸಾವಿರಾರು ಜನರು ಸೇರುತ್ತಿದ್ದರು. ಒಮ್ಮೆ ಅವರು ಒಂದು ಊರಿನ ಪ್ರವಚನ ಮುಗಿಸಿ ಮತ್ತೊಂದು ಊರಿಗೆ ಹೋಗಲು ಬಸ್ಸು ಹತ್ತುತ್ತಾರೆ. ಟಿಕೆಟ್ ಪಡೆಯಲು ಕಂಡಕ್ಟರ್‌ಗೆ ಹಣ ನೀಡುತ್ತಾರೆ. ಕಂಡಕ್ಟರ್ ಉಳಿಕೆ ಹಣ ನೀಡುವಾಗ ಹತ್ತು ರೂ. ಜಾಸ್ತಿ ಕೊಟ್ಟುಬಿಡುತ್ತಾನೆ. ಇದನ್ನು ಪಡೆದ ವಿದ್ವಾಂಸರಿಗೆ ಗೊಂದಲವಾಗುತ್ತದೆ. ಆ ಹತ್ತು ರೂ. ವಾಪಸ್ಸು ಕೊಡಲು ಬಯಸುತ್ತಾರೆ. ಆದರೆ ಬಸ್ಸು ಭರ್ತಿಯಾಗಿರುತ್ತದೆ. ಕಂಡಕ್ಟರ್ ಹತ್ತಿರ ಬರುವುದಿಲ್ಲ. ನಂತರ ಇವರು ಯೋಚಿಸುತ್ತಾರೆ. ಈ ಹಣವನ್ನು ಏಕೆ ವಾಪಸು ನೀಡಬೇಕು? ಕಂಡಕ್ಟರ್ ಎಷ್ಟೋ ಜನರಿಗೆ ಚಿಲ್ಲರೆ ಕೊಡದೇ ತಾನೇ ಇಟ್ಟುಕೊಂಡಿರಬಹುದು. ಅಲ್ಲದೆ ಈ ಬಸ್ ಸಹಾ ಒಂದು ಕಂಪನಿಯದ್ದು. ಆದ್ದರಿಂದ ಈ ಹತ್ತು ರೂ. ಕೊಡದಿದ್ದರೂ ಆಗುತ್ತದೆ ಎಂದು ಯೋಚಿಸುತ್ತಾರೆ. ಅವರು ಇಳಿಯಬೇಕಾದ ಊರು ಬರುತ್ತದೆ. ಇವರು ಇಳಿದಾಗ ಕಂಡಕ್ಟರ್ ಹತ್ತಿರ ಬರುತ್ತಾನೆ. ಆಗ ಇವರು ತಕ್ಷಣ ನೀವು ಚಿಲ್ಲರೆ ಕೊಡುವಾಗ ಹತ್ತು ರೂಪಾಯಿ ಜಾಸ್ತಿ ಕೊಟ್ಟಿದ್ದಿರಿ, ತೆಗೆದುಕೊಳ್ಳಿ ಎಂದು ಕೊಡುತ್ತಾರೆ. ಆಗ ಕಂಡಕ್ಟರ್, ನಾನೂ ನಿಮ್ಮ ಪ್ರವಚನಗಳನ್ನು ಕೇಳಿದ್ದೇನೆ. ನೀವು ಬೋಧಿಸಿದಂತೆ ನಡೆದುಕೊಳ್ಳುತ್ತೀರೋ ಇಲ್ಲವೋ ಎಂದು ಪರೀಕ್ಷಿಸಲು ನಾನು ಬೇಕೆಂದೇ ಹತ್ತು ರೂಪಾಯಿ ಹೆಚ್ಚಿಗೆ ನೀಡಿದ್ದೆ ಎನ್ನುತ್ತಾನೆ. ಆಗ ಈ ವಿದ್ವಾಂಸರು ನಿಟ್ಟುಸಿರು ಬಿಟ್ಟು ಬರೀ ಹತ್ತು ರೂಪಾಯಿ ಆಸೆಗೆ ನನ್ನ ಮೌಲ್ಯಗಳಿಗೆ ತಿಲಾಂಜಲಿ ಹೇಳಿ ಬಿಡುತ್ತಿದ್ದೆನಲ್ಲಾ, ಹಾಗೆ ಮಾಡಿದ್ದರೆ ಎಂತಹ ಅಚಾತುರ್ಯವಾಗುತ್ತಿತ್ತು ಎಂದು ಸಮಾಧಾನಪಟ್ಟುಕೊಳ್ಳುತ್ತಾರೆ. ಹೀಗೆ ನಾವು ಮನಸ್ಸಿನಲ್ಲಿ ಸಂಘರ್ಷವೇರ್ಪಟ್ಟಾಗ ಅಚಲ ಭಾವದಿಂದ ಸರಿಯಾದ ನಿರ್ಧಾರವನ್ನೇ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸಣ್ಣ ವಿಚಾರಗಳಿಗೆ ನಾವು ನಮ್ಮತನವನ್ನೇ ಕಳೆದುಕೊಳ್ಳಬೇಕಾಗುತ್ತದೆ.

ನಾವು ಯಾರೂ ಈ ಸಮಾಜಕ್ಕೆ ಹಾಗೂ ನಮ್ಮ ಮನೆಗಳಿಗೂ ಅನಿವಾರ್ಯವಲ್ಲ. ಇರುವಾಗ ನಮ್ಮ ಅಗತ್ಯ ಹೆಚ್ಚಾಗಿರುವುದಾಗಿ ಕಂಡುಬರುತ್ತದೆ ಅಥವಾ ನಾವೇ ಹಾಗೆ ಭಾವಿಸಿಕೊಂಡು ಬಿಡುತ್ತೇವೆ. ಆದರೆ ಎಂತಹ ದೊಡ್ಡ ವ್ಯಕ್ತಿತ್ವದವರ ಸಾವಾದಾಗಲೂ ಕೆಲವೇ ದಿನಗಳಲ್ಲಿ ಎಲ್ಲವೂ ಮೊದಲಿನಂತೆಯೇ ಸಾಗುವುದನ್ನು ಕಾಣುತ್ತೇವೆ. ನಮಗೆ ಭ್ರಮೆ. ನಾವಿಲ್ಲದಿದ್ದರೆ ಏನೋ ಆಗಿಹೋಗುತ್ತದೆ ಎಂದು. ಅಂತಹ ಭ್ರಮೆಯನ್ನು ಬಿಟ್ಟು ಸಮಾಜದೊಡನೆ, ಮನೆಯವರೊಡನೆ ಮುಕ್ತವಾಗಿ ಬೆರೆಯುವುದು ಬುದ್ಧಿವಂತಿಕೆ; ನಮ್ಮ ಹಿರಿಮೆ ಕಾಯ್ದುಕೊಂಡಂತೆ.

ಇಂತಹ ಮನೋಭಾವ ಬೆಳೆದಾಗ ಒಂದಷ್ಟಾದರೂ ಆಸೆ. ದುರಾಸೆಗಳು ಕಡಿಮೆಯಾಗಬಹುದು. ನಮ್ಮೊಳಗಿನ ವ್ಯಕ್ತಿ ಒಬ್ಬನೇ ಆಗಿದ್ದಾನೆ, ಅದು ಸುಖ–ದುಃಖಗಳನ್ನು ಒಂದೇ ರೀತಿ ಪ್ರತಿಕ್ರಿಯಿಸುತ್ತದೆ ಎನ್ನುವಂತಾಗಬೇಕು. ನಮ್ಮ ದುರುಳ ಮುಖ ನಮ್ಮನ್ನು ಅಪಹಾಸ್ಯಕ್ಕೆ ತಳ್ಳಿಬಿಡಬಹುದು. ನಾವು ಸಮಾಜಕ್ಕೆ, ಬಂಧುಗಳೊಡನೆ ತೋರಿಸುವ ಪರಿಚಿತ ಮುಖ ಹಾಗೆಯೇ ಉಳಿದರೆ ಸೂಕ್ತ ಒಳ್ಳೆಯದು ಸಾಮಾನ್ಯವಾಗಿ ಒಳ್ಳೆಯದನ್ನೇ ನೀಡುತ್ತದೆ. ಆದರೆ, ಅದಕ್ಕೆ ಸ್ವಲ್ಪ ಸಮಯ ಬೇಕಾಗಬಹುದು. ಹಾಗೆಯೇ ಕೆಟ್ಟದ್ದು ತಾತ್ಕಾಲಿಕವಾಗಿ ಖುಷಿ ನೀಡಿದರೂ ಕೊನೆಗೆ ಅದು ಕೆಟ್ಟ ಪರಿಣಾಮವನ್ನೇ ಬೀರುತ್ತದೆ ಎಂಬುದನ್ನು ಎಂದೂ ಮರೆಯಬಾರದು.

ಮಕ್ಕಳೇ ನಮಗೆಲ್ಲಾ ಸರ್ವಸ್ವ ಅಲ್ಲವೆ...!?



ಪ್ರಸಕ್ತ ಶೈಕ್ಷಣಿಕ ವರ್ಷದ ಶಾಲೆ, ಕಾನ್ವೆಂಟ್‌ಗಳು ಪ್ರಾರಂಭವಾಗಿ ಸುಮಾರು 1 ವಾರ ಮುಗಿದಿದೆ. ಎಲ್ಲಾ ಪೋಷಕರು ತಮ್ಮ ಮುದ್ದು ಮಕ್ಕಳನ್ನು ಸ್ಕೂಲ್‌ಗಳಿಗೆ ಸೇರಿಸುವ ಮುಖ್ಯ ಉದ್ದೇಶ ಏನೆಂದರೆ, ತಮ್ಮ ಮಕ್ಕಳು ವಿದ್ಯೆಯನ್ನು ಕಲಿತು ಉತ್ತಮ ವಿದ್ಯಾವಂತರಾಗಿ ಅವರವರ ಭವಿಷ್ಯವನ್ನು ಉಜ್ವಲವಾಗಿ ರೂಪಿಸಿಕೊಂಡು, ಸಮಾಜದಲ್ಲಿ ಒಳ್ಳೆಯ ಪ್ರಜೆಯಾಗಿ ಬದುಕಲೆಂದು. ಈ ಮೂಲಕ ಹೆತ್ತವರಿಗೆ ಸಂತೋಷವನ್ನು ಹಾಗೂ ತಂದೆ–ತಾಯಂದಿರ ಇಳಿ ವಯಸ್ಸಿನಲ್ಲಿ ಮಕ್ಕಳು ಊರುಗೋಲಿನ ಹಾಗೆ ನೆರವಾಗಿ, ಸಾರ್ಥಕ ಬದುಕನ್ನು ಸಂಪೂರ್ಣಗೊಳಿಸಲು ಕಾರಣವಾಗುತ್ತಾರೆ ಎಂಬುದು ಎಲ್ಲಾ ಪೋಷಕರ ಜೀವನದ ಪರಮಗುರಿ; ಆಸೆಯೂ ಕೂಡ.

ತಮ್ಮ ಮಕ್ಕಳ ಸುಂದರ ಭವಿಷ್ಯದ ಕನಸನ್ನು ಕಂಡು, ಅದರ ನನಸಿಗಾಗಿ ಹಗಲಿರುಳು ಕಷ್ಟಪಡುವ ಪೋಷಕರು, ಅದೇ ಮಕ್ಕಳ ಅಮೂಲ್ಯವಾದ ಜೀವದ ಬಗ್ಗೆ ಅಷ್ಟಾಗಿ ಕಾಳಜಿ ವಹಿಸಿದಂತೆ ಇತ್ತೀಚಿನ ದಿನಗಳಲ್ಲಿ ಕಂಡುಬರುತ್ತಿಲ್ಲ ಎಂಬುದು ವಿಷಾದಕರ ಸಂಗತಿ.

ಕಾರಣ, ಕಳೆದ ಹಲವಾರು ದಿನಗಳಿಂದ, ಶಾಲಾ ದಿವಸಗಳಂದು ಬೆಳಗಿನ ಹಾಗೂ ಸಾಯಂಕಾಲದ ಸಮಯದಲ್ಲಿ ಶಾಲೆಗೆ ಕರೆದೊಯ್ಯುವ ಹೆಚ್ಚಿನ ಶಾಲಾ, ಖಾಸಗಿ ವಾಹನಗಳು ಹಾಗೂ ಆಟೋಗಳಲ್ಲಿ ಚಿಕ್ಕ ಪುಟ್ಟ ಮಕ್ಕಳನ್ನು ಕುರಿಗಳಂತೆ ತುಂಬಿಕೊಂಡು ಹೋಗುತ್ತಿರುವುದನ್ನು ನೋಡುತ್ತಿದ್ದರೆ ಮನಸ್ಸಿಗಾಗುವ ನೋವು ಅಷ್ಟಿಷ್ಟಲ್ಲ.

ಯಾವುದೇ ಒಂದು ಪ್ರಯಾಣಿಕ ವಾಹನದಲ್ಲಿ ಇಂತಿಷ್ಟೇ ಜನರನ್ನು ಸಾಗಿಸಬೇಕು ಎಂಬ ಸಾರಿಗೆ ನಿಯಮಗಳು ಇದ್ದರೂ, ಅದಾವುದು ಸ್ಪಷ್ಟವಾಗಿ ಜಾರಿಗೆ ಬಂದಂತೆ ಕಾಣುತ್ತಿಲ್ಲ. ಕೇವಲ ಪುಸ್ತಕದ ಹಾಳೆಗಳಿಗೆ ಮಾತ್ರ ಸೀಮಿತವಾದಂತೆ ಕಂಡುಬರುತ್ತಿದೆ.

ಶಾಲೆ ಅಥವಾ ಕಾನ್ವೆಂಟ್‌ಗಳಲ್ಲಿ ಮಕ್ಕಳಿಗೆ ಕಲಿಕೆಯಲ್ಲಿ ಆಸಕ್ತಿ ಮೂಡಬೇಕೆಂದರೆ, ಮೊದಲು ಅವರಿಗೆ ಶಾಲೆಗೆ ಹೋಗಲು ಆಸಕ್ತಿ ಹಾಗೂ ಖುಷಿಯನ್ನು ಮೂಡಿಸಬೇಕಾದ ಕೆಲಸ ಆಗಬೇಕಿದೆ.

ಆದರೆ, ಪ್ರಸ್ತುತ ಸಂದರ್ಭದಲ್ಲಿ ಮಕ್ಕಳು ಮನೆಯಿಂದ ಶಾಲೆಗೆ ಖುಷಿಯಿಂದ ಹೊರಟರೂ, ಶಾಲೆ ತಲುಪುವ ವೇಳೆಗಾಗಲೇ ದೈಹಿಕ ಹಾಗೂ ಮಾನಸಿಕವಾಗಿ ಕುಗ್ಗಿರುತ್ತಾರೆ. ಕಾರಣ, ಅವರು ಶಾಲೆಗೆ ಹೋಗಲು ವ್ಯವಸ್ಥೆ ಮಾಡಿರುವ ವಾಹನಗಳಲ್ಲಿನ ಇಕ್ಕಟ್ಟಿನ ಪರಿಸ್ಥಿತಿ, ಉಸಿರಾಡಲು ಅಗತ್ಯವಾಗಿರುವ ಗಾಳಿಯ ಕೊರತೆ ಇತ್ಯಾದಿ. ಈ ಎಲ್ಲಾ ಸಮಸ್ಯೆಗಳ ಜೊತೆಗೆ ಮಣಭಾರ ಇರುವ ಬ್ಯಾಗ್.

ಇತ್ತೀಚಿನ ವರ್ಷಗಳಲ್ಲಿ, ನಮ್ಮ ರಾಜ್ಯ ಹಾಗೂ ದೇಶದ ವಿವಿಧ ಕಡೆಗಳಲ್ಲಿ, ಅಗತ್ಯಕ್ಕಿಂತ ಹೆಚ್ಚಾಗಿ ಮಕ್ಕಳನ್ನು ತುಂಬಿಕೊಂಡು ಶಾಲೆಗೆ ಕರೆದೊಯ್ಯುವ ಹಲವು ಶಾಲಾ, ಖಾಸಗಿ ವಾಹನಗಳು ಹಾಗೂ ಆಟೋಗಳು ಅಪಘಾತಕ್ಕೀಡಾಗಿರುವುದನ್ನು ನಾವೆಲ್ಲಾ ದೃಶ್ಯ ಹಾಗೂ ಪತ್ರಿಕಾ ಮಾಧ್ಯಮಗಳಲ್ಲಿ ನೋಡಿರುತ್ತೇವೆ; ಕೇಳಿರುತ್ತೇವೆ. ಈ ರೀತಿಯ ಅಪಘಾತಗಳಿಂದಾಗಿ ಭವ್ಯ ಭಾರತದ ಪ್ರಜೆಗಳಾಗಬೇಕಾದ, ಬದುಕಿ ಬಾಳಬೇಕಾದ ಮಕ್ಕಳ ಜೀವ, ಏನೂ ಅರಿಯದ ಚಿಕ್ಕ ವಯಸ್ಸಿನಲ್ಲಿಯೇ ಕಮರಿ ಹೋಗುವುದನ್ನು ನೋಡಿದ್ದೇವೆ. ಜೊತೆಗೆ, ಎಷ್ಟೋ ಮಕ್ಕಳು ಗಂಭೀರವಾಗಿ ಗಾಯಗೊಂಡು ಶಾಶ್ವತ ಊನಾವಸ್ಥೆ ತಲುಪುತ್ತಿರುವುದನ್ನು ನೋಡಿರುತ್ತೇವೆ. ಏಕೆಂದರೆ, ಅಪಘಾತವಾದ ಸಂದರ್ಭದಲ್ಲಿ ಮಕ್ಕಳಿಗೆ ತಪ್ಪಿಸಿಕೊಳ್ಳಲು ಆಗದಷ್ಟು ಇಕ್ಕಟ್ಟಿನ ಪರಿಸ್ಥಿತಿ ವಾಹನದೊಳಗೆ ಇರುತ್ತದೆ.

ಪ್ರತೀ ವರ್ಷವೂ ಒಂದಲ್ಲ ಒಂದು ಕಡೆ ಇಂತಹ ಅನಾಹುತಗಳು ಸಂಭವಿಸುತ್ತಿದ್ದರೂ, ಪೋಷಕರು ಮಾತ್ರ ರಾತ್ರಿ ಕಂಡ ಬಾವಿಗೆ ಹಗಲಿನಲ್ಲಿ ಬಿದ್ದಂತೆ ವರ್ತಿಸುತ್ತಿರುವುದು ವಿಷಾದನೀಯ ಸಂಗತಿ. ಪುಟ್ಟ ಮಕ್ಕಳು ಸುಂದರ ಹೂವುಗಳಿದ್ದಂತೆ, ಅವು ಅರಳುವ ಮುನ್ನವೇ ಬಾಡಿ ಹೋಗುವ ಹಾಗೆ ಮಾಡುವುದು ಸರಿಯೇ, ಔಚಿತ್ಯವೇ, ನ್ಯಾಯವೇ. ನಮಗೆ ಆ ಅಧಿಕಾರ ಇಲ್ಲವೇ ಇಲ್ಲ.

ಹಾಗಾದರೆ ಇಂತಹ ಭೀಕರ ಪರಿಸ್ಥಿತಿಗಳಿಂದ, ಅನಾಹುತಗಳಿಂದ ಹೊರಬರಲು ಸಾಧ್ಯವಿಲ್ಲವೆ; ಖಂಡಿತಾ ಸಾಧ್ಯವಿದೆ. ಅದು....

● ಶಾಲೆಗಳು ನಮ್ಮ ಮನೆಯ ಸಮೀಪದಲ್ಲಿದ್ದರೆ, ಇತರೇ ವಾಹನಗಳನ್ನು ಅವಲಂಬಿಸುವ ಬದಲು ಸ್ವಲ್ಪ ಸಮಯ ಬಿಡುವು ಮಾಡಿಕೊಂಡು ಕಾಲ್ನಡಿಗೆಯಲ್ಲಿಯೇ ಮಕ್ಕಳನ್ನು ಕರೆದುಕೊಂಡು ಹೋಗಿ ಶಾಲೆಗೆ ಬಿಡುವ ಪದ್ಧತಿಯನ್ನು ರೂಢಿಸಿಕೊಳ್ಳುವುದು.

● ಮಿತಿ ಮೀರಿದ ಸಂಖ್ಯೆಯ ಮಕ್ಕಳನ್ನು ವಾಹನಗಳಲ್ಲಿ ಕರೆದೊಯ್ಯುತ್ತಿದ್ದರೆ, ಅಂತಹ ವಾಹನಗಳಲ್ಲಿ ತಮ್ಮ ಮಕ್ಕಳನ್ನು ಕಳುಹಿಸದಿದ್ದರೆ ಒಳಿತು. ಇದರೊಂದಿಗೆ, ಆ ವಾಹನಗಳಿಗೆ ಸಂಬಂಧಿಸಿದ ಚಾಲಕ ಅಥವಾ ಶಾಲಾ ಸಿಬ್ಬಂದಿ ಹಾಗೂ ಆಡಳಿತ ಮಂಡಳಿಯವರಲ್ಲಿ ಮುಂದಾಗುವ ಅಪಾಯಗಳ ಬಗ್ಗೆ ಕಡ್ಡಾಯವಾಗಿ ಅರಿವು ಮೂಡಿಸಬೇಕು.

● ಒಂದು ವೇಳೆ ಶಾಲೆ ತಮ್ಮ ಮನೆಯಿಂದ ದೂರವಿದ್ದರೆ, ಬೆಳಗಿನ ಹಾಗೂ ಸಂಜೆಯ ಸಮಯ ಅಲ್ಪ ಬಿಡುವು ಮಾಡಿಕೊಂಡು ತಮ್ಮ ಸ್ವಂತ ವಾಹನಗಳಲ್ಲಿ ಅಥವಾ ಸಾರ್ವಜನಿಕ ಸಾರಿಗೆ ವಾಹನಗಳಲ್ಲಿ ತಾವೇ ಖುದ್ದಾಗಿ ಮಕ್ಕಳನ್ನು ಬಿಡಲು ಹಾಗೂ ಕರೆದುಕೊಂಡು ಬರಲು ನಿರ್ಧರಿಸಿ.


ಹೀಗಾದಲ್ಲಿ, ಮಕ್ಕಳಿಗೆ ತಮ್ಮ ಪೋಷಕರು ತೆಗೆದುಕೊಳ್ಳುತ್ತಿರುವ ಕಾಳಜಿಯ ಬಗ್ಗೆ ಆತ್ಮಾಭಿಮಾನ ಮತ್ತು ಪ್ರೀತಿ ಮೂಡುತ್ತದೆ. ಇದು ತಂದೆ–ತಾಯಿ ಮತ್ತು ಮಕ್ಕಳ ನಡುವಿನ ಸುಮಧುರ ಸಂಬಂಧ ಗಟ್ಟಿಯಾಗಲು ಕಾರಣವಾಗುತ್ತದೆ.

ಆತ್ಮೀಯ ಪೋಷಕರೇ, ಮಕ್ಕಳು ದೇವರಿಗೆ ಸಮ. ಅವರು ಬೆಳೆದು ಪ್ರೌಢಾವಸ್ಥೆ ತಲುಪುವವರೆಗೂ ಅವರ ಬೇಕು–ಬೇಡಗಳು ಹಾಗೂ ಅವರ ಜೀವದ ಬಗ್ಗೆ ನಾವು ಕಾಳಜಿ ಮಾಡಿದ್ದೇ ಆದಲ್ಲಿ, ಅದುವೇ ನಾವು ದೇವರಿಗೆ ಸಲ್ಲಿಸುವ ನಿಜವಾದ ಸೇವೆ ಹಾಗೂ ಪೂಜೆ. ಪವಿತ್ರ ಭಕ್ತಿಗೆ ಹೇಗೆ ದೇವರು ಸಂತುಷ್ಟನಾಗುವನೋ, ಹಾಗೆಯೇ ನಮ್ಮ ಮಕ್ಕಳಿಗೆ ನಾವು ಅವರ ಎಳೆಯವಯಸ್ಸಿನಲ್ಲಿ ತೋರಿಸುವ ಪ್ರೀತಿ; ಕಾಳಜಿ, ತ್ಯಾಗದಿಂದಾಗಿ ಅವರು ದೊಡ್ಡವರಾದ ಮೇಲೆ, ಇಳಿ ವಯಸ್ಸಿನ ತಂದೆ–ತಾಯಿಯರನ್ನು ಕೂಡ ಅಷ್ಟೇ ಪ್ರೀತಿ ಕಾಳಜಿಯಿಂದ ನೋಡಿಕೊಳ್ಳುತ್ತಾರೆ ಎಂಬ ಬಲವಾದ ನಂಬಿಕೆ ನಿಜವಾಗಬಲ್ಲದು.

ಮಕ್ಕಳಿಗಾಗಿ ಆಸ್ತಿ ಮಾಡುವುದು ಬೇಡ, ಮಕ್ಕಳನ್ನೇ ಆಸ್ತಿಯನ್ನಾಗಿ ಬೆಳೆಸಿ. ಪ್ರಸ್ತುತ ಸನ್ನಿವೇಶಕ್ಕೆ ಈ ಮುತ್ತಿನಂತಹ ಮಾತು ನೂರಕ್ಕೆ ನೂರರಷ್ಟು ಹೋಲಿಕೆಯಾಗುತ್ತದೆ. ಏಕೆಂದರೆ, ನಮ್ಮ ಮಕ್ಕಳಿಗಾಗಿ ನಾವು ಹಗಲಿರುಳು ದುಡಿದು ಕೂಡಿ ಇಡುತ್ತಿರುವ ಹಣ, ಆಸ್ತಿ ಕಳೆದು ಹೋದರೆ ಮತ್ತೊಮ್ಮೆ ಸಂಪಾದಿಸಬಹುದು. ಆದರೆ, ನಮ್ಮ ಮಕ್ಕಳ ಜೀವವೇ ಹೋದರೆ ಮತ್ತೊಮ್ಮೆ ಮರುಜೀವ ಬರಲು ಸಾಧ್ಯವೇ. ಆ ಮಕ್ಕಳು ಮತ್ತೇ ಹುಟ್ಟಿ ಬರುತ್ತಾರೆಯೇ ಯೋಚಿಸಿ!

ಹಾಗಾಗಿ, ನಮ್ಮಗಳ ಬಿಡುವಿಲ್ಲದ ಕೆಲಸಗಳ ನಡುವೆಯೂ ನಮ್ಮ ಮಕ್ಕಳ ಮನಸ್ಸನ್ನು ಸಂತೋಷಪಡಿಸಲು, ಮುಂದೆ ತಂದೆ–ತಾಯಿಗಳ ಬಗ್ಗೆ ಒಲವು ಮೂಡಲು ಅಗತ್ಯವಿರುವ ಕಾಳಜಿಯನ್ನು ಎಳೆಯ ವಯಸ್ಸಿನಲ್ಲಿಯೇ ತೋರೋಣ. ಏಕೆಂದರೆ, ಗಿಡವಾಗಿರುವಾಗ ಬಗ್ಗಿಸಬಹುದೇ ಹೊರತು, ಮರವಾಗಿರುವಾಗ ಬಗ್ಗಿಸಲು ಸಾಧ್ಯವೇ ಇಲ್ಲ.

ನೆನಪಿರಲಿ, ಪ್ರಪಂಚದಲ್ಲಿ ಏನನ್ನು ಬೇಕಾದರೂ ಕಷ್ಟಪಟ್ಟು ಸಂಪಾದಿಸಬಹುದು, ಹೋದ ಜೀವ ಒಂದನ್ನು ಬಿಟ್ಟು. ಶಾಲಾ ಮಕ್ಕಳನ್ನು ಕಿಕ್ಕಿರಿದು ತುಂಬಿದ್ದ ವಾಹನ ಅಪಘಾತಕ್ಕೀಡಾಗಿ ಹಲವು ಮಕ್ಕಳ ದುರ್ಮರಣ, ಕೆಲವರಿಗೆ ಗಂಭೀರ ಗಾಯ, ಇನ್ನು ಕೆಲವರು ಚಿಂತಾಜನಕ ಸ್ಥಿತಿಯಲ್ಲಿ ಎಂಬ ಸುದ್ದಿಯಲ್ಲಿ ನಿಮ್ಮ ಪ್ರೀತಿಯ ಮಕ್ಕಳು ಸೇರಿರಬಾರದು ಎಂದರೆ ಈಗಲೇ ಎಚ್ಚೆತ್ತುಕೊಳ್ಳಿ. ಏನೂ ಅರಿಯದ ನಿಮ್ಮ ಮಕ್ಕಳನ್ನು ಕಾಪಾಡಿ. ಅವರ ಜೀವ ಮತ್ತು ಸುಂದರ ಭವಿಷ್ಯ ನಿಮ್ಮಗಳ ಕೈಯಲ್ಲಿದೆ. ಏಕೆಂದರೆ, ಆ ಎಳೆಯ ವಯಸ್ಸಿನಲ್ಲಿ ಅವರಿಗೆ ನೀವೇ ಸರ್ವಸ್ವ, ಪೋಷಕರುಗಳ ಬೇಜವಾಬ್ದಾರಿತನ, ಕೆಲಸದ ಒತ್ತಡ, ಸತತ ದುಡಿಮೆ, ಸಂಸಾರದ ಜಂಜಾಟದಲ್ಲಿ ನಮ್ಮ ಪ್ರೀತಿಯ ಮಕ್ಕಳ ಜೀವ ಬಲಿಯಾಗದಿರಲಿ. ಭವಿಷ್ಯದ ರಾಷ್ಟ್ರ ನಿರ್ಮಾಪಕರುಗಳನ್ನು ಅತ್ಯಂತ ಜತನದಿಂದ ಜೋಪಾನವಾಗಿ ಕಾಪಾಡುವ ಜವಾಬ್ದಾರಿ ನಮ್ಮೆಲ್ಲರದಾಗಲಿ. ಮಕ್ಕಳೆಂಬ ಅರಳುವ ಹೂಗಳು, ಮುಂದೊಂದು ದಿನ ತಮ್ಮ ಸಾಧನೆ ಎಂಬ ಕಂಪಿನಿಂದ ಇಡೀ ಜಗತ್ತಿಗೆ ಪಸರಿಸಿ, ಇದಕ್ಕೆ ಕಾರಣರಾದ ತಂದೆ–ತಾಯಿಗಳಿಗೆ ಕೀರ್ತಿ, ಗೌರವಗಳನ್ನು ತಂದುಕೊಡುತ್ತಾರೆ. ಹೆತ್ತ ತಂದೆ–ತಾಯಿಗಳಿಗೆ ಹಾಗೂ ಬೆಳೆದ ಮಕ್ಕಳಿಗೆ, ಇದಕ್ಕಿಂತ ಸಂತೋಷವನ್ನು ತಂದುಕೊಡುವ ಮತ್ತು ಮರೆಯಲಾಗದ ಕ್ಷಣ ಖಂಡಿತ ಎಂದೂ ಸಿಗಲಾರದು.



ಪ್ರಶಾಂತ್‌ಕುಮಾರ್ ಎ.ಪಿ.
ಮೊ: 9844859950

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬಾಲಕಾರ್ಮಿಕ ಮಕ್ಕಳಿಗೆ ಶಿಕ್ಷಣದ ಅರಿವು ಮೂಡಿಸಿ ಶಾಲೆಗೆ ಹೋಗುವಂತೆ ಪ್ರೇರೇಪಿಸಿ

ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಕರೆ

ಮೈಸೂರು, ಜೂ.12(ಜಿಎ)–ಸಮಾಜದಲ್ಲಿ ಉತ್ತಮ ಸ್ಥಾನಕ್ಕೇರಲು, ಸುರಕ್ಷಿತ ಜೀವನ ನಡೆಸಲು ಹಾಗೂ ಪ್ರಜ್ಞಾವಂತ ಪ್ರಜೆಯಾಗಲು ಶಿಕ್ಷಣ ಅವಶ್ಯಕ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ರವೀಂದ್ರ ಹೆಗಡೆ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವೇಶ್ವರನಗರದ ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೂಲಭೂತ ಹಕ್ಕಾದ ಶಿಕ್ಷಣವು ಪ್ರತಿಯೊಬ್ಬರಿಗೂ ದೊರೆಯಬೇಕು. ಬಾಲಕಾರ್ಮಿಕ ಮಕ್ಕಳಿಗೆ ಶಿಕ್ಷಣದ ಅರಿವನ್ನು ಮೂಡಿಸಿ ಅವರನ್ನು ಶಾಲೆಗೆ ಹೋಗುವಂತೆ ಪ್ರೇರೇಪಿಸಬೇಕು ಎಂದರು.

ಮೈಸೂರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಅಧ್ಯಕ್ಷರೂ ಆದ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ವಿವಿಧ ಕಡೆಗಳಲ್ಲಿ ಬಾಲ ಕಾರ್ಮಿಕರು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿ, ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿ ಮಾಡುವಲ್ಲಿ ಎಲ್ಲರೂ ಕೈ ಜೋಡಿಸಬೇಕು. ಸಂವಿಧಾನದ ಆಶಯದಂತೆ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕೊಡಿಸಬೇಕು. ಮಕ್ಕಳ ದುರ್ಬಳಕೆ ಕಂಡುಬಂದಲ್ಲಿ ಮಕ್ಕಳ ಸಹಾಯವಾಣಿ 1098 ಕರೆ ಮಾಡಿ ದೂರು ನೀಡಬಹುದು ಎಂದು ತಿಳಿಸಿದರು.

ಬಾಲಕಾರ್ಮಿಕ ನಿರ್ಮೂಲನೆಗಾಗಿ ಪ್ರತಿಯೊಬ್ಬ ಅಧಿಕಾರಿಗಳು ಕಣ್ಣು ಮತ್ತು ಕಿವಿಗಳಾಗಿ ಕರ್ತವ್ಯ ನಿರ್ವಹಿಸಬೇಕು. ಮುಂಬರುವ ಮಕ್ಕಳ ದಿನಾಚರಣೆಯ ವೇಳೆಗೆ ಬಾಲ ಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿ ಮಾಡುವಂತೆ ಪಣ ತೊಡಬೇಕು ಎಂದರು.

ಶಾಲೆಗೆ ಹೋಗದಿರುವ ಮಕ್ಕಳು ಸಮಾಜದಲ್ಲಿ ಯಾವುದೇ ರೀತಿಯ ಸಮಾಜಘಾತುಕ ಕೆಲಸವನ್ನಾದರೂ ಮಾಡಬಹುದು. ಆದ್ದರಿಂದ ಎಲ್ಲಾ ಮಕ್ಕಳಿಗೆ ಶಿಕ್ಷಣದ ಮಹತ್ವವನ್ನು ತಿಳಿಸಿ ಅವರಿಗೆ ಮೂಲಸೌಕರ್ಯಗಳು ದೊರಕುವಂತೆ ಮಾಡಬೇಕು. ಇದಕ್ಕೆ ಜಿಲ್ಲಾಡಳಿತದ ಜೊತೆ ಎಲ್ಲಾ ಇಲಾಖೆಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳು ಕೈ ಜೋಡಿಸಿ ಸಹಕರಿಸಬೇಕು ಎಂದರು.

ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಕಾರ್ಮಿಕ ಆಯುಕ್ತರೂ ಆದ ನಾಜಿಯಾ ಸುಲ್ತಾನ, ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯ ಕುರಿತು ಪ್ರಮಾಣ ವಚನವನ್ನು ಬೋಧಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಬಿ.ಜಿ.ದಿನೇಶ್, ಜಿಲ್ಲಾ ಪಂಚಾಯತ್ ಸಿಇಓ ಕೆ.ಎಂ.ಗಾಯತ್ರಿ, ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎನ್.ಟಿ.ಯೋಗೇಶ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ್‌ಗೌಡ, ಮೈಸೂರು ಉಪವಿಭಾಗದ ಕಾರ್ಮಿಕ ಅಧಿಕಾರಿ ರಾಜೇಶ್ ಕೆ.ಜಾದವ್, ಮಹಾನಗರಪಾಲಿಕೆ ಹೆಚ್ಚುವರಿ ಆಯುಕ್ತೆ ಕುಸುಮ, ಆಶಾ ಕಾರ್ಯಕರ್ತರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



ಮೈಸೂರಿನ ವಿಶ್ವೇಶ್ವರನಗರದ ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಮಾತನಾಡಿದರು.

> “ಬೃಹತ್ ನಗರಗಳಲ್ಲಿ, ಹೋಟೆಲ್‌ಗಳಲ್ಲಿ, ಗುಜರಿ ಅಂಗಡಿಗಳಲ್ಲಿ, ಕಾರ್ಖಾನೆ ಸೇರಿದಂತೆ ಮುಂತಾದ ಕಡೆಗಳಲ್ಲಿ 14 ವರ್ಷದೊಳಗಿನ ಮಕ್ಕಳನ್ನು ಬಾಲ ಕಾರ್ಮಿಕರಾಗಿ ಬಳಸಿಕೊಳ್ಳುತ್ತಿರುವುದನ್ನು ತಡೆಗಟ್ಟಬೇಕು. ಬಾಲ ಕಾರ್ಮಿಕರು ಉತ್ಪಾದಿಸುವ ಪದಾರ್ಥಗಳನ್ನು ನಾವು ತೆಗೆದುಕೊಳ್ಳದಿರುವುದರಿಂದ ಪರೋಕ್ಷವಾಗಿ ಬಾಲಕಾರ್ಮಿಕ ಪದ್ಧತಿಯನ್ನು ನಿಷೇಧಿಸಬಹುದು. ಬಾಲಕಾರ್ಮಿಕ ಮಕ್ಕಳಿಗೆ ಸುರಕ್ಷಿತ ಆರೋಗ್ಯ, ಜೀವನವನ್ನು ಕಟ್ಟಿಕೊಡುವ ಕೆಲಸ ಮಾಡುವಲ್ಲಿ ಪ್ರತಿಯೊಬ್ಬರೂ ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಬಾಲ ಕಾರ್ಮಿಕ ಪದ್ಧತಿ ತಡೆಯಬೇಕು.
> –ರವೀಂದ್ರ ಹೆಗಡೆ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ವಿದ್ಯಾವರ್ಧಕ ಕಾನೂನು ಕಾಲೇಜಲ್ಲಿ ಬಾಲಕಾರ್ಮಿಕ ವಿರೋಧಿ ದಿನ ಆಚರಣೆ



ಮೈಸೂರು, ಜೂ. 12– ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಬಾಲಕಾರ್ಮಿಕ ವಿರೋಧಿ ದಿನವನ್ನು ಬುಧವಾರ ಆಚರಿಸಲಾಯಿತು.

ಈ ವೇಳೆ ವಕೀಲ ಲೋಕೇಶ್ ಮಾತನಾಡಿ, ಬಾಲಕಾರ್ಮಿಕ ಪದ್ಧತಿಯು ಎಲ್ಲೆಡೆ ಪ್ರಸ್ತುತವಾಗಿರುವ ಸಮಸ್ಯೆ. 18ನೇ ಶತಮಾನದ ಕೈಗಾರಿಕಾ ಕ್ರಾಂತಿಯಿಂದ ಶುರುವಾಯಿತು. ಜರ್ಮನಿ, ಬಾಲ ಕಾರ್ಮಿಕ ಪದ್ಧತಿಯನ್ನು ತಡೆಗಟ್ಟಲು 1839ರಲ್ಲಿ ಕಾನೂನು ಮಂಡಿಸಿತು. ಭಾರತದಲ್ಲಿ 3ನೇ ಶತಮಾನದಲ್ಲೇ ಗೃಹೋಪಯೋಗಿ ಕೆಲಸಕ್ಕೆ ಮಕ್ಕಳನ್ನು ಖರೀದಿಸಲಾಗುತ್ತೆಂದು ಅರ್ಥಶಾಸ್ತ್ರದಲ್ಲಿ ಉಲ್ಲೇಖವಾಗಿದೆ. ಬಡತನ, ಆರ್ಥಿಕ ಅವಶ್ಯಕತೆ, ಸಾಮಾಜಿಕ ಮತ್ತು ಸಾಂಸ್ಕೃತಿಕ ರೂಢಿಗಳು ಬಾಲಕಾರ್ಮಿಕ ಪದ್ಧತಿಗೆ ಪ್ರಮುಖ ಕಾರಣವಾಗಿರುತ್ತದೆ. ಇದರಿಂದ ಮಾನಸಿಕ ಹಾಗೂ ದೈಹಿಕ ಶೋಷಣೆಗೆ ಮಕ್ಕಳು ಒಳಗಾಗುತ್ತಾರೆ ಮತ್ತು ಅವರ ಶೈಕ್ಷಣಿಕ ಅಭ್ಯಾಸಕ್ಕೆ ಅಡ್ಡಿಯಾಗುತ್ತದೆ ಎಂದು ಹೇಳಿದರು.

218 ದಶಲಕ್ಷ ಮಕ್ಕಳು ಇಂದೂ ಬಾಲಕಾರ್ಮಿಕರಾಗಿದ್ದಾರೆ. ಅದರಲ್ಲಿ 152 ದಶಲಕ್ಷ ಮಕ್ಕಳು ಅಪಾಯಕಾರಿ ಸ್ಥಿತಿಯಲ್ಲಿ ಕೆಲಸಮಾಡುತ್ತಿದ್ದಾರೆ. ಆಫ್ರಿಕನ್ ದೇಶಗಳಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಮಕ್ಕಳು ಕೆಲಸ ಮಾಡುತ್ತಿದ್ದಾರೆ.

ಇಂದಿನ ಮಕ್ಕಳು ನಾಳೆಯ ನಾಗರಿಕರು, ಅವರ ಬಾಲ್ಯತನವನ್ನು, ವಿದ್ಯಾಭ್ಯಾಸ ಮತ್ತು ಅವಕಾಶವನ್ನು ಕಲ್ಪಿಸುವ ಮೂಲಕ ರಕ್ಷಿಸಬೇಕು ಹಾಗೂ ಈ ಸಮಸ್ಯೆ ಪರಿಹರಿಸಿದರೆ ಮಾತ್ರ ದೇಶದ ಪ್ರಗತಿಯನ್ನು ಕಾಣಬಹುದು ಎಂದು ಹೇಳಿದರು.

ನೂತನ ಎಂಎಲ್‌ಸಿ ಡಾ.ಯತೀಂದ್ರಗೆ ಅಭಿನಂದನೆ


ವಿಧಾನಪರಿಷತ್ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದ ಡಾ.ಯತೀಂದ್ರ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಹೂಗುಚ್ಛ ನೀಡಿ, ಅಭಿನಂದಿಸಿದರು. ಈ ಸಂದರ್ಭದಲ್ಲಿ ಎಂಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಚಂದ್ರಶೇಖರ್, ದೇವರಾಜ ಬ್ಲಾಕ್ ಅಧ್ಯಕ್ಷ ರಮೇಶ ರಾಯಪ್ಪ, ಕೈಲಾಸಪುರಂ ಮಂಜು ಉಪಸ್ಥಿತರಿದ್ದರು.

ಯದುವೀರ್ ಒಡೆಯರ್‌ಗೆ ಅಭಿನಂದನೆ


ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಂ.ಶಿವಕುಮಾರ್, ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷ ಟಿ.ರಮೇಶ್, ನರಸಿಂಹರಾಜ ಕ್ಷೇತ್ರದ ಮುಖಂಡ ಕೃಷ್ಣ ಸುಪ್ರೀತ್ ಅಭಿನಂದಿಸಿದರು.

ವನಿತಾ ಸದನ ಪ್ರೌಢಶಾಲೆಯಲ್ಲಿ ಪ್ರತಿಭಾ ಪುರಸ್ಕಾರ


ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ವನಿತಾ ಸದನ ಪ್ರೌಢಶಾಲೆಯಲ್ಲಿ ಈ ಬಾರಿ ಎಸ್‌ಎಸ್‌ಎಲ್‌ಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ಕುಮಾರಿ ಬಿ.ಹೇಮಲತಾ ಅವರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಿ, ಪ್ರಶಸ್ತಿ ನಗದು ಪುರಸ್ಕಾರ ನೀಡಲಾಯಿತು. ಈ ವೇಳೆ ಸಂಸ್ಥೆಯ ಸದಸ್ಯರಾದ ರವಿ, ಯಶಸ್ವಿನಿ, ಮುಖ್ಯೋಪಾಧ್ಯಾಯರಾದ ಶ್ರೀಮತಿ ಶಿವಮ್ಮ, ಭವಾನಿ, ಸುಧಾ, ರವಿಕುಮಾರ್, ನಿಂಗಮ್ಮ ಮತ್ತಿತರರು ಉಪಸ್ಥಿತರಿದ್ದರು.

ಶಾಸಕ ಕೆ.ಹರೀಶ್‌ಗೌಡರ ವಿವಾಹ ವಾರ್ಷಿಕೋತ್ಸವ


ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಹಾಗೂ ಶ್ರೀಮತಿ ಗೌರಿ ಅವರ ವಿವಾಹ ವಾರ್ಷಿಕೋತ್ಸವದ ಅಂಗವಾಗಿ ಹರೀಶ್‌ಗೌಡರ ನಿವಾಸದಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ವಿಶೇಷಚೇತನರ ವೇತನದ ಫಲಾನುಭವಿಗಳಿಗೆ ಆದೇಶ ಪತ್ರ ನೀಡಿ, ಸಿಹಿ ವಿತರಿಸಲಾಯಿತು. ಈ ವೇಳೆ ಹರೀಶ್‌ಗೌಡರ ಧರ್ಮಪತ್ನಿ ಶ್ರೀಮತಿ ಗೌರಿ, ಪುತ್ರ ಕಿಶನ್‌ಗೌಡ, ಶ್ರೀಮತಿ ಸೌಭಾಗ್ಯ ಗಿರೀಶ್, ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಕೃಷ್ಣ, ಪುರುಷೋತ್ತಮ್, ದೇವೇಗೌಡ, ಮಾದೇಶ್, ವೆಂಕಟೇಶ್, ಕುಮಾರ್ ಉಪಸ್ಥಿತರಿದ್ದರು.

ಹರಿಹರ ಗ್ರಾಮದ ವ್ಯಕ್ತಿ ನಾಪತ್ತೆ

ಮೈಸೂರು,ಜೂ.12(ಪಿಎಂ)– ವ್ಯಕ್ತಿಯೊಬ್ಬರು ನಾಪತ್ತೆಯಾಗಿರುವ ಸಂಬಂಧ ಇಲವಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ಹರಿಹರ ಗ್ರಾಮದ ಟಿ.ಎಂ.ಅರುಣ್ (60) ಕಾಣೆಯಾದವರು. ಇವರ ಸಂಬಂಧಿ ಎಂ.ಎಸ್.ಪೊನ್ನಣ್ಣ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ. ಸಾಧಾರಣ ಮೈಕಟ್ಟು, ಕೋಲುಮುಖ, ಎಣ್ಣೆಗೆಂಪು ಬಣ್ಣ ಹಾಗೂ ಕಪ್ಪು–ಬಿಳಿ ಮಿಶ್ರಿತ ತಲೆಗೂದಲಿನ ಚಹರೆಯನ್ನು ಕಾಣೆಯಾದ ಅರುಣ್ ಹೊಂದಿದ್ದಾರೆ. ಇವರು ಕನ್ನಡ, ಕೊಡವ ಮತ್ತು ಮಲೆಯಾಳಿ ಭಾಷೆಗಳನ್ನು ಬಲ್ಲವರಾಗಿದ್ದಾರೆ.

ಇಲವಾಲ ಹೋಬಳಿಯ ಬೋಗಾದಿ ರಸ್ತೆಯ ಟ್ರೆಂಡ್ಜ್ ಅಪಾರ್ಟ್‌ಮೆಂಟ್‌ನ ನಮ್ಮ ಮನೆಗೆ ಮೇ 28ರಂದು ರಾತ್ರಿ ನನ್ನ ಸೋದರ ಮಾವ ಟಿ.ಎಂ.ಅರುಣ್ ಬಂದಿದ್ದರು. ಮೇ 31ರ ಬೆಳಗ್ಗೆ 11.30ರ ವೇಳೆಯಲ್ಲಿ ಹೊರ ಹೋಗಿ ಬರುತ್ತೇನೆಂದು ಹೋದವರು ವಾಪಸ್ ಬಂದಿಲ್ಲ. ಎಲ್ಲೆಡೆ ಹುಡುಕಾಡಿ ಕೊನೆಗೆ ದೂರು ನೀಡುತ್ತಿರುವುದಾಗಿ ಪೊನ್ನಣ್ಣ ದೂರಿನಲ್ಲಿ ತಿಳಿಸಿದ್ದಾರೆ.

ಯೋಗ ಮನುಷ್ಯ ಜೀವನದ ಪದ್ಧತಿಯಾಗಲಿ

ಯೋಗ ಯೋಗಾನು ಶಾಸನ-2024 ಕಾರ್ಯಕ್ರಮದಲ್ಲಿ ಡಾ.ಕೆ.ವಿ.ವೆಂಕಟಕೃಷ್ಣ ಅಭಿಮತ



ಮೈಸೂರು, ಜೂ. 12– ನಿತ್ಯ ಯೋಗದಿಂದ ಅನೇಕ ರೋಗಗಳ ಪರಿಹಾರಕ್ಕೆ ಉತ್ತಮ ಮಾರ್ಗ, ಯೋಗವನ್ನು ಜೀವನ ಪದ್ಧತಿಯಾಗಿ ಅಳವಡಿಸಿಕೊಂಡರೆ ಸದೃಢ ದೇಹ ಮತ್ತು ಆರೋಗ್ಯ ಹೊಂದಲು ಸಾಧ್ಯ ಎಂದು ಸರ್ಕಾರಿ ಆಯು ರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕರೂ ಆದ ವಿಭಾಗ ಮುಖ್ಯಸ್ಥ ಡಾ.ಕೆ.ವಿ.ವೆಂಕಟಕೃಷ್ಣ ಹೇಳಿದರು.

ಮೈಸೂರಿನ ಗೋಕುಲಂನಲ್ಲಿರುವ ಸೌಗಂಧಿಕಾ ಉದ್ಯಾನವನದಲ್ಲಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಹಾಗೂ ಸ್ವಾಸ್ಥವೃತ್ತ ಮತ್ತು ಯೋಗ ವಿಭಾಗ ವತಿಯಿಂದ 10ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಮಹಿಳಾ ಸಬಲೀಕರಣಕ್ಕಾಗಿ ಯೋಗ ಯೋಗಾನು ಶಾಸನ–2024 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದಿನನಿತ್ಯ ಜೀವನದಲ್ಲಿ ಮಹಿಳೆಯರಿಗೆ ಯೋಗ ಎಷ್ಟು ಅವಶ್ಯಕತೆ ಎಂಬುದನ್ನು ತಿಳಿಸುವುದರ ಜೊತೆಗೆ ಯೋಗದಿಂದ ಹೇಗೆ ಆರೋಗ್ಯವನ್ನು ವೃದ್ಧಿಸಿಕೊಳ್ಳಬಹುದು ಎಂಬುದನ್ನು ಮನವರಿಕೆ ಮಾಡಿಕೊಟ್ಟರು.


ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಪ್ರಮುಖ ಜೆ.ನಾಗಮಣಿ ಮಾತನಾಡಿ, ನಿಯಮಿತವಾಗಿ ಯೋಗಾಭ್ಯಾಸ ಮತ್ತು ಸಾತ್ವಿಕ ಆಹಾರ ಸೇವನೆ ಮನುಷ್ಯರನ್ನು ಯಾವಾಗಲೂ ಆರೋಗ್ಯವಂತನಾಗಿ ಮಾಡುತ್ತದೆ. ರಾಷ್ಟ್ರಪ್ರೇಮ ಬೆಳೆಸಿಕೊಂಡು ನಿಸರ್ಗ ಪ್ರೀತಿಸಿ ಬದುಕಿ ಬಾಳಿದರೆ ಮನುಷ್ಯನ ಜೀವನ ಸಾರ್ಥಕತೆ ಪಡೆಯುತ್ತದೆ ಎಂದರು.

ಇದೇ ಸಂದರ್ಭದಲ್ಲಿ 50ಕ್ಕೂ ಹೆಚ್ಚು ಮಂದಿ ಭಾಗವಹಿಸಿ ಯೋಗಾಭ್ಯಾಸ ಮಾಡಿದರು. ಚಾಮರಾಜ ಕ್ಷೇತ್ರದ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಚಂದ್ರಕಲಾ, ದರ್ಶನ್ ಮೂರ್ತಿ ಸೇರಿದಂತೆ ಇನ್ನಿತರರು ಭಾಗವಹಿಸಿದ್ದರು.

ಸಾರ್ವಜನಿಕರು, ಪ್ರವಾಸಿಗರ ರಕ್ಷಣೆಗಾಗಿ ವಿಶೇಷ ತಪಾಸಣೆ

ಕಿರುಕುಳ, ಅನಗತ್ಯ ಕಿರಿಕಿರಿ ಮಾಡುವ ಉದ್ದೇಶವಲ್ಲ

ಮೈಸೂರು, ಜೂ. 12(ಆರ್‌ಕೆ)– ಮೈಸೂರು ನಗರದಾದ್ಯಂತ ವಾಹನಗಳ ತಪಾಸಣಾ ಕಾರ್ಯಾಚರಣೆ ಮಾಡುತ್ತಿರುವುದು ಸಾರ್ವಜನಿಕರು ಹಾಗೂ ಪ್ರವಾಸಿಗರ ಸುರಕ್ಷತೆಗಾಗಿಯೇ ಹೊರತು, ಜನರಿಗೆ ಕಿರುಕುಳ, ತೊಂದರೆ ನೀಡುವುದಕ್ಕಲ್ಲ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸ್ಪಷ್ಟಪಡಿಸಿದ್ದಾರೆ.


ಬಿ.ರಮೇಶ್

ಮೈಸೂರು ನಗರದಾದ್ಯಂತ ವಾಹನಗಳನ್ನು ತಡೆದು ತೀವ್ರ ಪರಿಶೀಲನೆ ಮಾಡುತ್ತಿರುವ ಬಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿದ ಅವರು, ದೇಶ–ವಿದೇಶಗಳಿಂದ ಬರುವ ಪ್ರವಾಸಿಗರಿಗೆ ಮೈಸೂರು ಸುರಕ್ಷಿತ ಸ್ಥಳ, ಇಲ್ಲಿ ಯಾವುದೇ ಸಮಸ್ಯೆ ಇಲ್ಲ, ಪೊಲೀಸರು ಎಲ್ಲೆಂದರಲ್ಲಿ ಕಾಣಸಿಗುತ್ತಾರೆ, ನಮ್ಮ ರಕ್ಷಣೆ ಮಾಡುತ್ತಾರೆ ಎಂಬ ವಿಶ್ವಾಸ ಬರಬೇಕೆಂಬ ಉದ್ದೇಶದಿಂದ ತಪಾಸಣಾ ಕಾರ್ಯಾಚರಣೆಯನ್ನು ಮಂಗಳವಾರ ರಾತ್ರಿಯಿಂದ ತೀವ್ರಗೊಳಿಸಲಾಗಿದೆ ಎಂದು ತಿಳಿಸಿದರು.

ಒಂದು ವೇಳೆ ಎಲ್ಲಾದರೂ ಒಂದು ಸಣ್ಣ ಅಹಿತಕರ ಘಟನೆ ಸಂಭವಿಸಿದರೂ ಅದರ ಪರಿಣಾಮ ಪ್ರವಾಸಿಗರ ಮೇಲೆ ಬೀರುತ್ತದೆ. ಅದರಿಂದ ಚೇತರಿಸಿಕೊಳ್ಳಲು ಕನಿಷ್ಠ 5ರಿಂದ 10 ವರ್ಷ ಬೇಕಾಗುತ್ತದೆ ಎಂದ ಅವರು, ಹೊರಗಿನಿಂದ ಬರುವ ಪ್ರವಾಸಿಗರಿಗೆ ಮಾಹಿತಿ ನೀಡುವುದು, ಅವರಿಗೆ ಸಹಕಾರ–ಸಹಾಯ ನೀಡಿ ಸುರಕ್ಷತೆಗೆ ಆದ್ಯತೆ ನೀಡುವುದು ನಮ್ಮ ಕರ್ತವ್ಯ. ರಸ್ತೆಗಳು, ಜಂಕ್ಷನ್‌ಗಳು, ಸಾರ್ವಜನಿಕ ಸ್ಥಳಗಳಲ್ಲಿ ಪೊಲೀಸರು ಕಂಡರೆ ಸಾಕು ಅರ್ಧ ಅಪರಾಧ ಪ್ರಕರಣಗಳು ಕಡಿಮೆಯಾಗುತ್ತವೆ. ಆದ್ದರಿಂದ ಮೈಸೂರು ನಗರದಾದ್ಯಂತ ವಾಹನ ತಪಾಸಣಾ ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದರು.

ಸಾಕಷ್ಟು ಜಾಗೃತಿ ಮೂಡಿಸಿದಾಗಲೂ ಜನರು ಸಂಚಾರ ನಿಯಮ ಉಲ್ಲಂಘಿಸುವುದುಂಟು. ಆದ್ದರಿಂದ ಅಪಘಾತ, ಅಪರಾಧ ಕೃತ್ಯ ನಿಯಂತ್ರಿಸುವುದು ಹಾಗೂ ಪತ್ತೆ ಮಾಡುವುದು ವಿಶೇಷ ಕಾರ್ಯಾಚರಣೆಯ ಮೂಲ ಉದ್ದೇಶವಾಗಿದೆ ಎಂದು ಬಿ. ರಮೇಶ್ ತಿಳಿಸಿದರು.

ಕೀಳನಪುರ ಸರ್ಕಾರಿ ಶಾಲೆ ಮಕ್ಕಳಿಗೆ ಸಮವಸ್ತ್ರ, ಶೈಕ್ಷಣಿಕ ಪರಿಕರ ವಿತರಣೆ

ಮೈಸೂರು, ಜೂ. 12– ತಾಲೂಕಿನ ಕೀಳನಪುರ ಸರ್ಕಾರಿ ಪ್ರಾಥಮಿಕ ಶಾಲೆ ಇತರ ಶಾಲೆಗಳಿಗಿಂತ ಭಿನ್ನವಾಗಿರುವುದರ ಜತೆಗೆ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುತ್ತಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವಿವೇಕಾನಂದ ಮೆಚ್ಚುಗೆ ವ್ಯಕ್ತಪಡಿಸಿದರು.

ಕೀಳನಪುರ ಸರ್ಕಾರಿ ಪ್ರಾಥಮಿಕ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಮಕ್ಕಳಿಗೆ ಸಮವಸ್ತ್ರ, ಶೈಕ್ಷಣಿಕ ಪರಿಕರಗಳ ವಿತರಣಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಈ ಶಾಲೆಯಲ್ಲಿ ಗುಣಮಟ್ಟ ಶಿಕ್ಷಣ ದೊರಕುತ್ತಿದ್ದು, ಇದಕ್ಕೆ ಕಳೆದ ಬಾರಿಯ ಫಲಿತಾಂಶವೇ ಸಾಕ್ಷಿ. ಮಕ್ಕಳಿಗೆ ಸಮವಸ್ತ್ರ, ಶೂ, ಬ್ಲೇಜರ್ ಸೇರಿದಂತೆ ಇನ್ನಿತರೆ ಪರಿಕರಗಳನ್ನು ದಾನಿಗಳ ಮೂಲಕ ಒದಗಿಸಲಾಗಿದ್ದು, ಇದರಿಂದ ಮಕ್ಕಳಲ್ಲಿ ಶಿಸ್ತು ಬೆಳೆಯಲಿದೆ. ಈ ನಿಟ್ಟಿನಲ್ಲಿ ಸ್ಥಳೀಯ ಮುಖಂಡರು ಹಾಗೂ ಶಾಲೆ ಮುಖ್ಯ ಶಿಕ್ಷಕ ಶ್ರಮ ಅಪಾರ ಎಂದು ಶ್ಲಾಘನೆ ವ್ಯಕ್ತಪಡಿಸಿದರು.



ಪ್ರಾಥಮಿಕ ಹಂತದಲ್ಲೇ ಮಕ್ಕಳಲ್ಲಿ ಶಿಸ್ತನ್ನು ರೂಢಿಸಿದರೆ ಅದು ಮುಂದಿನ ದಿನಗಳಲ್ಲಿ ಒಳ್ಳೆಯ ಫಲ ನೀಡಲಿದೆ. ಕಾನ್ವೆಂಟ್ ಮಕ್ಕಳಂತೆ ಸರ್ಕಾರಿ ಶಾಲೆ ಮಕ್ಕಳೂ ಎಲ್ಲ ರೀತಿಯಲ್ಲೂ ಮುಂದಿರಬೇಕೆಂಬ ದೃಷ್ಟಿಯಿಂದ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಮಕ್ಕಳು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಖ್ಯ ಶಿಕ್ಷಕ ಮಾಲಂಗಿ ಸುರೇಶ್ ಮಾತನಾಡಿದರು. ದಾನಿ ರಾಜೇಶ್ ಪಟ್ಟಾರ್ ಮಕ್ಕಳಿಗೆ ತಮ್ಮ ವೆಚ್ಚದಲ್ಲಿ ಬ್ಲೇಜರ್, ಶೂ, ಸಾಕ್ಸ್, ವಾಟರ್ ಬಾಟಲಿ, ಸಮವಸ್ತ್ರ ಸೇರಿದಂತೆ ಹಲವು ಪರಿಕರಗಳನ್ನು ಶಾಲೆಗೆ ನೀಡಿದ್ದಾರೆ. ಕಾರ್ಯಕ್ರಮದಲ್ಲಿ ತಾಪಂ ಮಾಜಿ ಸದಸ್ಯ ಮಹದೇವಪ್ಪ, ಎಸ್‌ಡಿಎಂಸಿ ಸದಸ್ಯರಾದ ಮಲ್ಲು, ನಿಂಗಪ್ಪ, ಗ್ರಾಪಂ ಸದಸ್ಯೆ ಜ್ಯೋತಿಸ್ವಾಮಿ, ಕಲಿಸು ಫೌಂಡೇಷನ್ ಸಿಇಒ ಎಂ.ಎಂ.ನಿಖಿಲೇಶ್, ಪತ್ನಿ ನಾಗಶ್ರೀ ನಿಖಿಲೇಶ್, ಎಪಿಸಿ ಸುರೇಶ್, ಶಾಲೆಯ ಪ್ರೌಢಶಾಲಾ ಮುಖ್ಯ ಶಿಕ್ಷಕಿ ಶ್ವೇತಾ, ಶಿಕ್ಷಣ ಸಂಯೋಜಕ ಆರಾಧ್ಯ ಇತರರಿದ್ದರು.

ಕಾವೇರಿಯೂ ಸೇರಿದಂತೆ ನಾಡಿನ ಜ್ವಲಂತ ಸಮಸ್ಯೆಗಳ ಪರಿಹಾರಕ್ಕೆ ಕೇಂದ್ರ ಸಚಿವ ಕುಮಾರಸ್ವಾಮಿ ಮುಂದಾಗಲಿ

ಸುದ್ದಿಗೋಷ್ಠಿಯಲ್ಲಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸಲಹೆ



ಮೈಸೂರು,ಜೂ.12(ಎಂಟಿವೈ)– ಕೇಂದ್ರ ಸಚಿವರಾಗಿರುವ ಹಾಗೂ ಪ್ರಧಾನಿ ನರೇಂದ್ರ ಮೋದಿ ಜತೆ ಒಡನಾಟ ಹೊಂದಿರುವ ಹೆಚ್.ಡಿ.ಕುಮಾರಸ್ವಾಮಿ ಅವರು ಕಾವೇರಿ ನದಿ ನೀರು ಹಂಚಿಕೆ ವಿವಾದ ಸೇರಿದಂತೆ ನಾಡಿನ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸಲಹೆ ನೀಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಪ್ರಚಾರದ ವೇಳೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹಾಗೂ ಹೆಚ್.ಡಿ. ಕುಮಾರಸ್ವಾಮಿ ಕಾವೇರಿ ವಿವಾದ ಬಗೆಹರಿಸುವುದಾಗಿ ಭರವಸೆ ನೀಡಿದ್ದರು. ಆ ಮಾತನ್ನು ಈಗ ಮರೆಯಬಾರದು. ಕೇಂದ್ರ ಸಚಿವರಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರು, ಪ್ರಧಾನಿ ಮೋದಿ ಅವರ ಮೇಲೆ ಒತ್ತಡ ಹೇರಿ ರಾಜ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಬೇಕು. ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಬೇಕು. ಪಾರಂಪರಿಕ ಅರಣ್ಯ ಹಕ್ಕು ಅನುಷ್ಠಾನ, ರಾಜ್ಯಕ್ಕೆ ಬರಬೇಕಾದ ಜಿಎಸ್‌ಟಿ ಬಾಕಿ ಕೊಡಿಸಲು ಸಹಕರಿಸಬೇಕು. ಮಹದಾಯಿ ಯೋಜನೆ ಅನುಮತಿ, ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸಲು ಕ್ರಮ, ರಾಜ್ಯದ ರೈತರಿಗೆ ಕೊಡಬೇಕಾದ ಬರ ಪರಿಹಾರದ ಉಳಿದ ಹಣ ಬಿಡುಗಡೆ ಮಾಡಿಸಲು ಪ್ರಯತ್ನಿಸಬೇಕು. ಈ ಸಮಸ್ಯೆಗಳ ಪರಿಹಾರಕ್ಕೆ ತಮ್ಮ ನಿಲುವು ಏನೆಂದು ರಾಜ್ಯದ ಜನರಿಗೆ ಹೆಚ್.ಡಿ. ಕುಮಾರಸ್ವಾಮಿ ಉತ್ತರಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಸಿ–ಎಸ್‌ಟಿ ಕಡೆಗಣನೆ: ಪ್ರತಿಯೊಂದು ಚುನಾವಣೆಯಲ್ಲೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಮತದಾರರನ್ನು ಕೇವಲ ಮತಬ್ಯಾಂಕ್‌ನಂತೆ ಬಿಜೆಪಿ ಬಳಸಿಕೊಳ್ಳುತ್ತಿದ್ದು, ಇದೀಗ ಸಂಪುಟ ವಿಸ್ತರಣೆಯಲ್ಲಿ ಶೋಷಿತ ಸಮುದಾಯವನ್ನು ಕಡೆಗಣಿಸಿ, ತಮ್ಮ ಅಜೆಂಡಾವನ್ನು ಪ್ರದರ್ಶಿಸಿದೆ. ಕೆಲ ಕಾರಣದಿಂದ ಬಿಜೆಪಿಯನ್ನು ಬೆಂಬಲಿಸಿರುವ ಪ್ರಾತಿನಿಧ್ಯ ಸಿಗದ ಸಮುದಾಯಗಳು ಕೇಂದ್ರದ ಬಿಜೆಪಿ ನಾಯಕತ್ವವನ್ನು ಪ್ರಶ್ನಿಸಬೇಕು. ಕರ್ನಾಟಕದಲ್ಲಿ ಒಬ್ಬ ದಲಿತ, ಹಿಂದುಳಿದ ವರ್ಗಕ್ಕೆ ಸೇರಿದ ಸಂಸದರಿಗೆ ಸಚಿವ ಸ್ಥಾನ ನೀಡಿಲ್ಲ. ಇದರಿಂದ ಬಿಜೆಪಿಯ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಲೋಕಸಭೆ ಚುನಾವಣೆಯಲ್ಲಿ ರಾಜ್ಯದ 19 ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳು ಗೆದ್ದಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಸಂಪುಟದಲ್ಲಿ ರಾಜ್ಯವನ್ನು ಪ್ರತಿನಿಧಿಸುವ ಐವರಿಗೆ ಸಚಿವ ಸ್ಥಾನ ನೀಡಲಾಗಿದೆ. ಕೇವಲ ಮೂರು ಪ್ರಭಾವಿ ಸಮುದಾಯಕ್ಕೆ ಮಾತ್ರವೇ ಮಂತ್ರಿಗಿರಿ ಕೊಡಲಾಗಿದೆ. ಉಳಿದ ಸಮಾಜದವರನ್ನು ಕಡೆಗಣಿಸಲಾಗಿದೆ ಎಂದು ದೂರಿದರು. ಶೇ.2 ಜನಸಂಖ್ಯೆಯ ಸಮುದಾಯಕ್ಕೆ 19 ಸಚಿವ ಸ್ಥಾನಗಳನ್ನು ನೀಡಲಾಗಿದೆ ಎಂದು ಹೇಳಿದರು.

ವ್ಯವಸ್ಥೆಯೇ ಸ್ಯಾಡಿಸ್ಟ್: ಮತದಾರರನ್ನು ನಾನು ಸ್ಯಾಡಿಸ್ಟಿಕ್ ಮನಸ್ಥಿತಿಯವರು ಎಂದು ಹೇಳಿಲ್ಲ. ಮತದಾರರ ಬಗ್ಗೆ ಗೌರವವಿದೆ. ವ್ಯವಸ್ಥೆಯ ಬಗ್ಗೆ ಮಾತನಾಡಿದ್ದೇನೆ. ಆದರೆ, ಕೆಲವರು ನನ್ನ ಮಾತನ್ನು ತಿರುಚಿ ಮತದಾರರನ್ನು ಅಪಮಾನಿಸಿದ್ದಾರೆಂದು ಹೇಳಿರುವುದು ಸರಿಯಲ್ಲ. ನನಗೆ ಮತ ನೀಡಿದ 6.50 ಲಕ್ಷ ಮತದಾರರಿಗೆ ನಮಸ್ಕಾರ ಹೇಳಿದ್ದೇನೆ. ಜನರ ಸೇವೆ ಕೆಲಸ ಮಾಡಲು ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಕಚೇರಿ ತೆರೆಯುತ್ತೇನೆ ಎಂದರು.

ಗ್ಯಾರಂಟಿ ಯೋಜನೆ ಸ್ಥಗಿತಗೊಳಿಸುವಂತೆ ಹೇಳಿಲ್ಲ: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾದ ಐದು ಗ್ಯಾರಂಟಿ ಯೋಜನೆಯಿಂದ ಸಾವಿರಾರು ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳು ಗೌರವಯುತವಾಗಿ ಬದುಕುತ್ತಿವೆ. ಈ ನಿಟ್ಟಿನಲ್ಲಿ ಗ್ಯಾರಂಟಿ ಸ್ಥಗಿತಗೊಳಿಸುವಂತೆ ನಾನು ಹೇಳಿಕೆ ನೀಡಿಲ್ಲ. 3 ಲಕ್ಷ ಸಂಬಳ ತೆಗೆದುಕೊಳ್ಳುತ್ತಿರುವವರಿಗೂ 200 ಯೂನಿಟ್ ವಿದ್ಯುತ್ ಉಚಿತವಾಗಿ ದೊರೆಯುತ್ತಿದೆ. ಇಂಥಾದ್ದನ್ನು ಗಮನಿಸಬೇಕು ಹಾಗೂ ಕೆಲವು ನ್ಯೂನತೆಗಳಿದ್ದು ಅವುಗಳನ್ನು ಸರಿಪಡಿಸಬೇಕು ಎಂದಷ್ಟೇ ಹೇಳಿದ್ದೇವೆ. ಸ್ಥಗಿತಗೊಳಿಸಬೇಕು ಎಂದಾಗಲಿ ಅಥವಾ ಸ್ಥಗಿತಗೊಳಿಸಲು ಮುಖ್ಯಮಂತ್ರಿ ಬಳಿ ಮನವಿ ಮಾಡುತ್ತೇನೆಂದು ಹೇಳಿಲ್ಲ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ವಕ್ತಾರ ಕೆ.ಮಹೇಶ್, ಕಾರ್ಯದರ್ಶಿ ಗಿರೀಶ್ ನಾಯಕ ಇದ್ದರು.

ವ್ಯಕ್ತಿ ನಾಪತ್ತೆ



ಮೈಸೂರು,ಜೂ.12–ಮೈಸೂರಿನ ಗಿರಿಯಾಭೋವಿ ಪಾಳ್ಯದ ನಿವಾಸಿ ಕಾಣೆಯಾಗಿರುವ ಬಗ್ಗೆ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಚಂದ್ರಶೇಖರ್ (79) ಕಾಣೆಯಾದವರು. ಮೇ 30ರಂದು ಮಧ್ಯಾಹ್ನ ಮನೆಯಿಂದ ಹೊರಹೋದವರು ಮನೆಗೆ ಹಿಂದಿರುಗಿಲ್ಲ. ಇವರ ಬಗ್ಗೆ ಮಾಹಿತಿ ದೊರೆತರೆ, 0821–2418208 ಸಂಪರ್ಕಿಸಿ ಎಂದು ನಜರ್‌ಬಾದ್ ಪೊಲೀಸ್ ಠಾಣೆ ಪ್ರಕಟಣೆ ತಿಳಿಸಿದೆ.

ಜೂ.17, ಕಣ್ಣಿನ ಉಚಿತ ತಪಾಸಣಾ ಶಿಬಿರ



ಮೈಸೂರು,ಜೂ.12–ಮೈಸೂರಿನ ವಿಜಯನಗರ ಸಾಂಸ್ಕೃತಿಕ ಸಂಸ್ಥೆ, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್, ರೋಟರಿ ಪಂಚಶೀಲ ವತಿಯಿಂದ ಜೂ.17ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ಪಡುವಾರಹಳ್ಳಿ ಶ್ರೀ ವರಸಿದ್ಧಿ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9972962665, 9900520414 ಸಂಪರ್ಕಿಸಬಹುದು.

ಮೈಸೂರು ಮಿತ್ರ

ಜುಲೈ ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ

ಸ್ಥಳ ಪರಿಶೀಲನೆ ವೇಳೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕುಮಾರ್ ಸೂಚನೆ



ಶಾಸಕ, ಅಧಿಕಾರಿಗಳೊಂದಿಗೆ ಮಂಡ್ಯದಲ್ಲಿ ಪರಿಶೀಲನೆ ನಡೆಸಿದ ಜಿಲ್ಲಾಧಿಕಾರಿ

ಮಂಡ್ಯ,ಜೂ.12– ನಗರದೊಳಗೆ ನಡೆಯುತ್ತಿರುವ ಹಲವು ಕಾಮಗಾರಿಗಳನ್ನು ಜುಲೈ ಅಂತ್ಯದೊಳಗೆ ಪೂರ್ಣಗೊಳಿಸಿ ಸರ್ಕಾರದ ವಶಕ್ಕೆ ನೀಡುವಂತೆ ಸಂಬಂಧಿಸಿದ ಗುತ್ತಿಗೆದಾರರು, ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ನಗರದ ರೈಲ್ವೆ ಕೆಳ ಸೇತುವೆ ಕಾಮಗಾರಿ, ತರಕಾರಿ ಮಾರುಕಟ್ಟೆ ಕಾಮಗಾರಿಗಳನ್ನು ಶಾಸಕ ಪಿ. ರವಿಕುಮಾರ್ ಮತ್ತು ಅಧಿಕಾರಿಗಳೊಟ್ಟಿಗೆ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರೈಲ್ವೆ ಕೆಳ ಸೇತುವೆ ಪ್ರಗತಿಯಲ್ಲಿದೆ. ಶೀಘ್ರ ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದರು.

ಶಾಸಕ ಪಿ.ರವಿಕುಮಾರ್ ಮಾತನಾಡಿ, ಬಹಳ ದಿನಗಳಿಂದ ನನೆಗುದಿಗೆ ಬಿದ್ದಿದ್ದ ರೈಲ್ವೆ ಕೆಳ ಸೇತುವೆ ಕಾಮಗಾರಿ ಪ್ರಗತಿಯಲ್ಲಿದೆ. ಮಳೆ ಬೀಳದಂತೆ ಮೇಲ್ಚಾವಣಿಯನ್ನೂ ನಿರ್ಮಿಸಲಾಗುತ್ತಿದೆ. ಮಳೆ ನೀರು ನಿಂತು ಸಂಚಾರಕ್ಕೆ ಅಡಣೆಯಾಗುತ್ತಿದ್ದುದನ್ನು ತಪ್ಪಿಸಲು ಈ ಕ್ರಮವನ್ನು ಅನುಸರಿಸಲಾಗುತ್ತಿದೆ ಎಂದು ಹೇಳಿದರು.

ರೈಲ್ವೆ ಕೆಳ ಸೇತುವೆ ಕಾಮಗಾರಿ ಆಗಸ್ಟ್ ಮೊದಲ ವಾರದೊಳಗೆ ಪೂರ್ಣಗೊಳಿಸಿ ಆ. 15ರಂದು ಲೋಕಾರ್ಪಣೆ ಮಾಡಲು ಸಿದ್ಧತೆ ನಡೆಸಲಾಗಿದೆ. ಈ ಬಗ್ಗೆ ಸಂಬಂಧಿಸಿದವರಿಗೆ ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

ತರಕಾರಿ ಮಾರುಕಟ್ಟೆ ಕಟ್ಟಡ ಸಂಪೂರ್ಣಗೊಂಡಿದೆ. ಹಿಂದೆ ಇದ್ದ ಹಳೇ ಕಟ್ಟಡ ಒಡೆದುಹಾಕುವ ವೇಳೆ ಎಷ್ಟು ಮಂದಿ ವರ್ತಕರಿದ್ದರೋ ಅವರಿಗೆಲ್ಲರಿಗೂ ಅಂಗಡಿಗಳನ್ನು ಆದ್ಯತೆ ಮೇರೆಗೆ ಕೊಡಬೇಕಿದೆ. ಕೆಲವರಿಗೆ ಕೃಷಿ ಉತ್ಪನ್ನ ಮಾರುಕಟ್ಟೆಯೊಳಗೆ ವ್ಯಾಪಾರಕ್ಕೆ ಅವಕಾಶ ಕಲ್ಪಿಸಲಾಗಿದೆ. ಉಳಿದವರಿಗೆ ಇಲ್ಲಿರುವ ಅಂಗಡಿಗಳನ್ನು ಹಂಚಿಕೆ ಮಾಡಬೇಕಿದೆ. ಎಲ್ಲ ಪ್ರಕ್ರಿಯೆಗಳನ್ನೂ ಪೂರ್ಣಗೊಳಿಸಿ ಆ. 15ರೊಳಗೆ ಎಲ್ಲರಿಗೂ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

ನಗರಸಭಾ ಸದಸ್ಯರಾದ ಮಂಜುಳಾ, ಶ್ರೀಧರ್, ಟಿ.ಕೆ.ರಾಮಲಿಂಗಯ್ಯ, ಪೂರ್ಣಿಮಾ, ಆಯುಕ್ತ ಮಂಜುನಾಥ್, ನಯೀಂ, ಜಿಲ್ಲಾ ವಾಣಿಜ್ಯ ಮಂಡಳಿ ಅಧ್ಯಕ್ಷ ಪ್ರಭಾಕರ್, ಮುಖಂಡರಾದ ರುದ್ರಪ್ಪ, ಶಿವನಂಜು ಇತರರು ಇದ್ದರು.

ನೀಟ್ ಪರೀಕ್ಷೆಯಲ್ಲಿ ರೈತನ ಮಗನ ಸಾಧನೆ



ಕೆ.ಆರ್.ಪೇಟೆ,ಜೂ,12: ತಾಲೂಕಿನ ಚಿಲ್ಲದ'ಹ'ಳ್ಳಿ ಗ್ರಾಮದ ರೈತ ಕುಟುಂಬದ ವರುಣೇಶ್ ಮತ್ತು ಶೃತಿ ದಂಪತಿಗಳ ಪುತ್ರಗೌಡ ವಿಕಾಸ್ ವರುಣೇಶ್ ನೀಟ್ ಪರೀಕ್ಷೆಯಲ್ಲಿ 720ಕ್ಕೆ 655ಅಂಕಗಳನ್ನು ಪಡೆದು ವೈದ್ಯಕೀಯ ಪ್ರವೇಶಕ್ಕೆ ಸರ್ಕಾರಿ ಸೀಟ್ ಗಿಟ್ಟಿಸುವ ಮೂಲಕ ಸಾಧನೆ ಮಾಡಿದ್ದಾನೆ.

ಸಾಮಾನ್ಯ ರೈತ ಕುಟುಂಬದ ಗ್ರಾಮೀಣ ವಿದ್ಯಾರ್ಥಿಯಾಗಿರುವ ಗೌಡವಿಕಾಸ್ ವರುಣೇಶ್ ನೀಟ್ ಪರೀಕ್ಷೆಯಲ್ಲಿ 655 ಅಂಕಗಳನ್ನು ಪಡೆದು ಸರ್ಕಾರಿ ಮೆಡಿಕಲ್ ಸೀಟ್ ಪಡೆದು ಶ್ರೇಷ್ಠ ಸಾಧನೆ ಮಾಡಿದ್ದು ಈತನನ್ನು ತಾಲೂಕಿನ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಅಭಿನಂದಿಸಿದ್ದಾರೆ. ನಗರ ಪ್ರದೇಶದ ವಿದ್ಯಾರ್ಥಿಗಳಂತೆಯೇ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸಾಧನೆ ಮಾಡುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ ಎಂದು ಚಿಲ್ಲದಹಳ್ಳಿ ಕ್ಷೇತ್ರದ ಗ್ರಾ.ಪಂ.ಸದಸ್ಯ ಆರ್.ಶ್ರೀನಿವಾಸ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಸಿ.ಎನ್.ಯತೀಶ್ ಅಭಿಪ್ರಾಯಪಟ್ಟಿದ್ದಾರೆ.

ಪ್ರಕೃತಿದತ್ತ ಅರಣ್ಯವನ್ನು ಸಂರಕ್ಷಿಸಬೇಕಿದೆ



ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಗಣ್ಯರು

ಮಂಡ್ಯ,ಜೂ.12– ಪ್ರಕೃತಿದತ್ತವಾಗಿ ಬಂದಿರುವ ಭೂಮಿ, ಗಾಳಿ, ನೀರು, ಅರಣ್ಯವನ್ನು ಸಂರಕ್ಷಿಸಬೇಕಿದೆ ಎಂದು ಕರ್ನಾಟಕ ರಾಜ್ಯ ಆಹಾರ ಆಯೋಗ ಅಧ್ಯಕ್ಷ ಡಾ.ಹೆಚ್.ಕೃಷ್ಣ ಹೇಳಿದರು.

ನಗರದಲ್ಲಿರುವ ಡಿಎಚ್‌ಓ ಕಚೇರಿ ಆವರಣದಲ್ಲಿ ಜಿಲ್ಲಾ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ವೈದ್ಯರ ಸಂಘ ಮಂಡ್ಯ ಇವರು ಮಿಮ್ಸ್ ಮತ್ತು ಡಿಎಚ್‌ಓ ಕಚೇರಿ ಸಹಯೋಗದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರತಿಯೊಬ್ಬರಲ್ಲೂ ಪರಿಸರ ಪ್ರಜ್ಞೆ–ಸಂರಕ್ಷಣೆಯ ಜವಾಬ್ದಾರಿ ಅತ್ಯವಶ್ಯಕವಾಗಿರಬೇಕು, ನಾಗರಿಕ ಸಮಾಜ ಎಷ್ಟು ಪ್ರಗತಿ ಕಂಡರೂ ಪ್ರಕೃತಿವಿರೋಧಿ ಕೃತ್ಯ ಎಸಗಬಾರದು, ಅತಿಯಾದರೆ ವಿಕೋಪ ಕಟ್ಟಿಟ್ಟಬುತ್ತಿಯಾಗುತ್ತದೆ ಎಂದು ನುಡಿದರು.

ಪ್ರಪಂಚದ 143 ದೇಶಗಳು ವಿಶ್ವ ಪರಿಸರ ದಿನವನ್ನು ಆಚರಿಸುತ್ತಿವೆ, 1973ರಿಂದ ಆಚರಣೆ ಬಂದಿತು. ನಮ್ಮೆಲ್ಲರ ರಕ್ಷಣೆ ಮಾಡುತ್ತಿರುವ ಪ್ರಕೃತಿಯನ್ನು ನಾವು ಉಳಿಸಿ ಬೆಳೆಸುವುದು, ಪ್ರತಿಯೊಬ್ಬರ ಕರ್ತವ್ಯವಾಗಿದೆ. ಸಸಿಗಳನ್ನು ನೆಟ್ಟು ಮುಂದಿನ ಪೀಳಿಗೆಗೆ ಹಸಿರು ಸಂಪತ್ತನ್ನು ಕೊಡಗೆಯಾಗಿ ನೀಡಬೇಕಿದೆ ಎಂದು ತಿಳಿಸಿದರು.

ಬಳಿಕ ಮಾತನಾಡಿದ ಜಿಲ್ಲಾ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ವೈದ್ಯರ ಸಂಘ ಅಧ್ಯಕ್ಷೆ ವಸಂತಲಕ್ಷ್ಮಿ, ಗಿಡ ನೆಡುವುದರ ಮೂಲಕ ಜನರಲ್ಲಿ ಪರಿಸರ ಜಾಗೃತಿ ಮೂಡಿಸುತ್ತಿದ್ದೇವೆ, ಪರಿಸರ ಕಾಳಜಿ ಎಲ್ಲರಲ್ಲೂ ಇರಬೇಕು, ಪ್ರಕೃತಿಯಿಂದ ಜೀವರಾಶಿಗಳು ಜೀವಂತವಾಗಿವೆ, ತಂಪು ತಂಗಾಳಿಗಾಗಿ ಮರಗಿಡಗಳು ಅತ್ಯವಶ್ಯ ಎಂದು ನುಡಿದರು.

ಇತ್ತೀಚಿನ ದಿನಗಳಲ್ಲಿ ಜಾಗತಿಕವಾಗಿ ಭೂ ತಾಪಮಾನ ಹೆಚ್ಚಾಗುತ್ತಿದೆ, ಪ್ರಕೃತಿ ಸಂಪತ್ತು ವಿನಾಶವಾಗುತ್ತಿದೆ, ಮನುಷ್ಯನಿಂದ ಮಾತ್ರ ಪ್ರಕೃತಿಗೆ ಧಕ್ಕೆಯಾಗುತ್ತದೆ. ಇನ್ನಾದರೂ ಪರಿಸರ ಆರೋಗ್ಯ ಹೆಚ್ಚಿಸಲು ಎಲ್ಲರೂ ಕೈಜೋಡಿಸೋಣ ಎಂದರು.

ಎಷ್ಟೇ ಅಭಿವೃದ್ಧಿ ಹೊಂದಿದ್ದರೂ ನಾವು ಪ್ರಕೃತಿ ಎದುರು ವಿರುದ್ಧವಾಗಿ ಹೋಗಲು ಸಾಧ್ಯವಿಲ್ಲ, ಪ್ರಕೃತಿಯನ್ನು ಪೋಷಿಸುತ್ತಲೇ ನಾವು ಜೀವಿಸಬೇಕು, ಪರಿಸರ ಉಳಿದರೆ ಮಾತ್ರ ಜೀವಸಂತತಿ ಉಳಿಯುತ್ತದೆ ಎಂದು ಎಚ್ಚರಿಸಿದರು.

ಡಿಎಚ್‌ಓ ಡಾ.ಕೆ. ಮೋಹನ್, ಮಿಮ್ಸ್ ನಿರ್ದೇಶಕ ಡಾ.ನರಸಿಂಹಸ್ವಾಮಿ, ಎಂಓಜಿಎಸ್ ಸಂಘದ ಮಾಜಿ ಅಧ್ಯಕ್ಷೆ ಡಾ.ವಸುಮತಿ ರಾವ್, ಕಾರ್ಯದರ್ಶಿ ಡಾ.ಶೀಲಾ, ಡಾ.ಬಿ.ಕೆ ಸುರೇಶ್, ಡಾ.ಸವಿತಾ, ಡಾ.ಶೋಭಾರಾಣಿ, ಮಿಮ್ಸ್‌ನ ವೈದ್ಯ ವಿದ್ಯಾರ್ಥಿಗಳು ಹಾಜರಿದ್ದರು.

ಬದುಕುವ ಆಸೆ ಇದ್ದರೆ ಮರ ಗಿಡ ಬೆಳೆಸಿ

ಕಿಕ್ಕೇರಿ: ಆರೋಗ್ಯಕರವಾಗಿ ಬದುಕುವ ಆಸೆ ಇದ್ದಲ್ಲಿ ಮೊದಲು ಮರ ಗಿಡ ಬೆಳೆಸಲು ಮುಂದಾಗುವ ಅವಶ್ಯಕತೆ ಇದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ಎಂ.ವೀರೇಶಪ್ಪ ಹೇಳಿದರು. ಸಮೀಪದ ಮಾಕವಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಮ್ಮಿಕೊಂಡಿದ್ದ ಪರಿಸರ ಕಾರ್ಯಕ್ರಮದಲ್ಲಿ ಮಾತನಾಡಿ, ಜೀವರಾಶಿ ಬದುಕಲು ಪಂಚಭೂತಗಳ ಅವಶ್ಯವಿದೆ. ಇವುಗಳನ್ನು ಮಾಲಿನ್ಯ, ಹಾಳು ಮಾಡಿದರೆ ಸರ್ವನಾಶ ಖಚಿತ. ಮರಗಿಡ ಹನನದಿಂದ ಪರಿಸರ, ವಾಯುಮಾಲಿನ್ಯವಾಗಿ ಕೋವಿಡ್ ವೇಳೆ ಶುದ್ಧ ಗಾಳಿ ಇಲ್ಲದೆ ಉಸಿರಾಡಲಾಗದೆ ಲಕ್ಷಾಂತರ ಮಂದಿ ಮೃತರಾಗಿದ್ದು ಇದು ನಮಗೆ ಎಚ್ಚರಿಕೆ ಪಾಠ. ಸಮುದಾಯ ಒಂದಾಗಿ ಮರಗಿಡ ಬೆಳೆಸಿ, ಉಳಿಸಿದರೆ ಮಾತ್ರ ಬದುಕಲು ಸಾಧ್ಯ ಎಂದರು.

ಸಂಸ್ಥೆ ರಾಜ್ಯಾದ್ಯಂತ ಇಂತಹ ಕಾರ್ಯಕ್ರಮ ರೂಪಿಸುತ್ತಿದ್ದು ಎಲ್ಲರ ಸಹಕಾರ ಬೇಕಿದೆ ಎಂದು ವಿನಂತಿಸಿದರು.

ಮುಖ್ಯಶಿಕ್ಷಕ ಲಾಯಪ್ಪ ಸಂಸ್ಥೆಯ ಸಮಾಜಮುಖಿ ಕಾರ್ಯ ಕುರಿತು ಮಾತನಾಡಿದರು. ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿ ಬಹುಮಾನ ವಿತರಿಸಲಾಯಿತು.

ಮುಖ್ಯಶಿಕ್ಷಕ ಲಾಯಪ್ಪ, ಪರಿಸರ ಶಿಕ್ಷಕ ಹೇಮಂತ್‌ಕುಮಾರ್, ಚಿತ್ರಕಲಾ ಶಿಕ್ಷಕ ಪರಮೇಶ್, ವಲಯ ಮೇಲ್ವಿಚಾರಕ ಪ್ರವೀಣ್, ಸೇವಾ ಪ್ರತಿನಿಧಿ ಶೋಭಾ, ಶಿಕ್ಷಕ ಮಂಜುನಾಥ್, ಹೇಮಂತ ಕುಮಾರ್, ರಮೇಶ್, ವೇದಾವತಿ, ರೂಪಾ ಉಪಸ್ಥಿತರಿದ್ದರು.



ಕಿಕ್ಕೇರಿ ಸಮೀಪದ ಮಾಕವಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಪರಿಸರ ಜಾಗೃತಿ ಕಾರ್ಯಕ್ರಮ ನಡೆಯಿತು.

ಹೆಚ್ಚು ಹಾಲು ಉತ್ಪಾದಿಸಿ, ಮಾದರಿಯಾದ ಡಿಂಕಾ ಡೇರಿ



ಪಾಂಡವಪುರ, ಜೂ. 12– ಡಿಂಕಾ ಹಾಲು ಉತ್ಪಾದಕರ ಸಹಕಾರ ಸಂಘವು ತಾಲೂಕಿನಲ್ಲಿಯೇ ಅತಿಹೆಚ್ಚು ಹಾಲು ಉತ್ಪಾದನೆ ಮಾಡುವ ಮೂಲಕ ತಾಲೂಕಿಗೆ ಮಾದರಿ ಸಂಘವಾಗಿ ಹೊರಹೊಮ್ಮಿದೆ ಎಂದು ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ಹೇಳಿದರು.

ತಾಲೂಕಿನ ಡಿಂಕಾ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ವತಿಯಿಂದ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಹಾಗೂ ಹೆಚ್ಚು ಹಾಲು ಉತ್ಪಾದಿಸಿದ ರೈತರಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಡಿಂಕಾ ಹಾಲು ಉತ್ಪಾದಕರ ಸಹಕಾರ ಸಂಘ ತಾಲೂಕಿಗೆ ಮಾದರಿ ಸಂಘವಾಗಿ ಕೆಲಸ ಮಾಡುತ್ತಿದೆ. ತಾಲೂಕಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾಲು ಉತ್ಪಾದನೆ ಮಾಡುವ ಮೂಲಕ ಲಾಭದಾಯಕವಾಗಿ ಮುನ್ನಡೆಯುತ್ತಿದೆ. ಉಳಿಕೆ ಡೇರಿಗಳು ಸಹ ಡಿಂಕಾ ಡೇರಿಯಂತೆಯೇ ಹಾಲು ಉತ್ಪಾದನೆ ಮಾಡುವ ಮೂಲಕ ಲಾಭಗಳಿಕೆ ಮಾಡಬೇಕು ಸಲಹೆ ನೀಡಿದರು.

ಇದೇವೇಳೆ ಡೇರಿಗೆ ಅಧಿಕ ಹಾಲು ಪೂರೈಕೆ ಮಾಡಿದ ರೈತರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಡೇರಿ ಅಧ್ಯಕ್ಷ ಡಿ.ವಿ. ಶಿವಣ್ಣ, ಉಪಾಧ್ಯಕ್ಷ ಕೃಷ್ಣಶೆಟ್ಟಿ, ಸಹಕಾರ ಸಂಘಗಳ ಸಹಾಯಕ ನಿಬಂಧಕ ಎಚ್.ಆರ್. ನಾಗಭೂಷಣ್, ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್, ಡಾ.ಕೃಷ್ಣೇಗೌಡ, ಮಾರ್ಗವಿಸ್ತರಣಾಧಿಕಾರಿಗಳಾದ ಜೆ.ನಿತಿನ್, ಎಚ್.ಎನ್.ಉಷಾ, ನಿರ್ದೇಶಕರಾದ ಗಿರೀಶ್, ಡಿ.ಈ.ಕಲಿಗಣೇಶ್, ಮಹದೇವಪ್ಪ, ಡಿ.ಎಂ.ಇಂದ್ರೇಶ್, ಶಿವಲಿಂಗಪ್ಪ, ಮಹೇಶ್, ಪ್ರೇಮಮ್ಮ, ಸೌಮ್ಯ, ಡಿ.ಎಂ. ಪುಟ್ಟೇಗೌಡ, ಶ್ರೀನಿವಾಸಯ್ಯ, ರಮಾದೇವಿ, ಗ್ರಾಪಂ ಮಾಜಿ ಅಧ್ಯಕ್ಷ ಮಾದಪ್ಪ, ಸದಸ್ಯ ಮಹದೇವಪ್ಪ, ಕಾರ್ಯದರ್ಶಿ ಡಿ.ಎಂ.ಶಿವಪ್ಪ, ಹಾಲು ಪರೀಕ್ಷಕ ಜಿ.ಕೇಶವಾಚಾರ್, ಸಹಾಯಕರಾದ ಡಿ.ಎಸ್.ಈರಪ್ಪಾಜಿ, ಶೇಖರಪ್ಪ, ಕೃಷ್ಣೇಗೌಡ, ಮಾದಯ್ಯ ಸೇರಿದಂತೆ ಹಲವರು ಇದ್ದರು.

ಬೈಕ್ ಹಳ್ಳಕ್ಕೆ ಬಿದ್ದು ವ್ಯಕ್ತಿ ಸಾವು



ಶ್ರೀರಂಗಪಟ್ಟಣ, ಜೂ. 12– ರಸ್ತೆ ತಿರುವಿನಲ್ಲಿ ಬೈಕ್ ಹಳ್ಳಕ್ಕೆ ಬಿದ್ದು ಸ್ಥಳದಲ್ಲೇ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ತಾಲೂಕಿನ ಮರಳಗಾಲ ಗ್ರಾಮದ ಬಳಿ ಸೋಮವಾರ ತಡರಾತ್ರಿ ಸಂಭವಿಸಿದೆ.

ತಾಲೂಕಿನ ಅರಕೆರೆ ಗ್ರಾಮದ ಮಧು ಬಿನ್ ಸಿದ್ದರಾಜು (32) ಮೃತ ದುರ್ದೈವಿ. ಆತ ಸೋಮವಾರ ರಾತ್ರಿ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಈ ಘಟನೆ ಸಂಭವಿಸಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶ್ರೀರಂಗಪಟ್ಟಣ ಹಾಗೂ ಬನ್ನೂರು ಮಾರ್ಗದ ರಸ್ತೆಯ ಮರಳಗಾಲ ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಬಳಿಯ ತಿರುವಿನಲ್ಲಿ ಬೈಕ್ ನಿಯಂತ್ರಣ ತಪ್ಪಿ ಹಳ್ಳಕ್ಕೆ ಉರುಳಿದ್ದು, ಮಧು ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎನ್ನಲಾಗಿದೆ.

ಬೈಕ್ ಹಾಗೂ ಮೃತಪಟ್ಟಿರುವ ಮಧುವಿನ ಶವ ನೋಡಿದ ಸ್ಥಳೀಯರ ಮಾಹಿತಿಯಿಂದ ಮಂಗಳವಾರ ಬೆಳಿಗ್ಗೆ ಈ ಘಟನೆ ಬೆಳಕಿಗೆ ಬಂದಿದ್ದು, ಶ್ರೀರಂಗಪಟ್ಟಣ ಗ್ರಾಮಾಂತರ ಪೊಲೀಸರು ಸ್ಥಳಕ್ಕಾಗಮಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸರ್ಕಾರಿ ಸೇವೆಗಳು ನಿಮ್ಮನೆ ಬಾಗಿಲಿಗೆ

ಮಂಡ್ಯ, ಜೂ.12–ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ ಅವರು ಜೂನ್ 13 ರಿಂದ ಸತತ 15 ದಿನಗಳ ಕಾಲ ಸರ್ಕಾರಿ ಸೇವೆಗಳು ನಿಮ್ಮನೆ ಬಾಗಿಲಿಗೆ ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಜೂನ್ 13 ರಂದು ಬೆಳಿಗ್ಗೆ 10.30 ಕ್ಕೆ ಪಾಂಡವಪುರ ಕೆನ್ನಾಳು ಗ್ರಾಮದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು.ಕಾರ್ಯಕ್ರಮದಲ್ಲಿ ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಸಾರ್ವಜನಿಕರು ತಮ್ಮ ಮನೆಯ ಬಾಗಿಲಲ್ಲೇ ತಮಗೆ ಇರುವ ಕುಂದು ಕೊರತೆಗಳ ಬಗ್ಗೆ ಚರ್ಚಿಸಿ ಪರಿಹರಿಸಿಕೊಳ್ಳಬಹುದಾಗಿದೆ ಎಂದು ಶಾಸಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ತನಿಖೆಗೆ ಪೊಲೀಸರು ಮುಕ್ತ

ತಡೆಯಲು ಅವಕಾಶವಿತ್ತು. ಆದರೆ, ಘಟನೆ ನಡೆದು ಹೋಗಿದೆ. ಯಾರೂ ಏನೂ ಮಾಡಲು ಆಗುವುದಿಲ್ಲ. ತನಿಖೆಯಲ್ಲಿ ಬರುವ ಅಂಶಗಳನ್ನು ಆಧರಿಸಿ ಕಾನೂನು ಪ್ರಕಾರ ಇಲಾಖೆ ಕ್ರಮ ತೆಗೆದುಕೊಳ್ಳುತ್ತದೆ.

ಕೊಲೆಯಾದ ರೇಣುಕಾಸ್ವಾಮಿ ಕುಟುಂಬ ವರ್ಗದ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸುತ್ತೇನೆ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವ ಅಗತ್ಯವಿಲ್ಲ. ಪ್ರಕರಣದಲ್ಲಿ ಭಾಗಿಯಾಗಿದ್ದ 13 ಜನರನ್ನು ಈಗಾಗಲೇ ಬಂಧಿಸಲಾಗಿದೆ, ಪ್ರಕರಣದ ತನಿಖೆಯನ್ನು ಬೇರೆ ಏಜೆನ್ಸಿಗೆ ಕೊಡುವ ಅಗತ್ಯವಿಲ್ಲ.

ತನಿಖೆ ಪೂರ್ಣಗೊಂಡ ನಂತರ ಎಲ್ಲ ಮಾಹಿತಿ ಗೊತ್ತಾಗುತ್ತದೆ, ಅಲ್ಲಿಯವರೆಗೆ ಈ ಬಗ್ಗೆ ಅಧಿಕಾರಿಗಳನ್ನು ನಾವು ಕೇಳುವುದಿಲ್ಲ, ಅವರೂ ನಮಗೆ ಹೇಳುವುದಿಲ್ಲ ಎಂದರು. ನಟ ದರ್ಶನ್ ಅವರ ಘಟನೆಗಳು ಇದೇ ಮೊದಲಲ್ಲ ಎಂಬುದಾಗಿ ಮಾಧ್ಯಮಗಳಲ್ಲಿ ಬಂದಿರುವುದನ್ನು ಗಮನಿಸಿದ್ದೇನೆ. ಪೊಲೀಸರು ತನಿಖೆ ಮಾಡುತ್ತಾರೆ. ತನಿಖೆ ನಂತರ ವರದಿಯಲ್ಲಿ ಏನು ಶಿಫಾರಸ್ಸು ಮಾಡುತ್ತಾರೆಯೋ ನೋಡಬೇಕು. ಪೊಲೀಸರಿಗೆ ಫ್ರೀಹ್ಯಾಂಡ್ ಇದೆ, ಸೆಕ್ಷನ್ ಹಾಕುವುದಕ್ಕೆ ಅವರು ಸಮರ್ಥರು, ನಮ್ಮನ್ನು ಕೇಳಿ ಸೆಕ್ಷನ್ ಹಾಕುವುದಿಲ್ಲ ಎಂದರು.

ನಿಯಮದ ಚೌಕಟ್ಟಲ್ಲಿ ಅಂತರ ಜಿಲ್ಲಾ ವರ್ಗಾವಣೆ: ಪೊಲೀಸರ ಅಂತರ ಜಿಲ್ಲಾ ವರ್ಗಾವಣೆ ಶಿಸ್ತುಬದ್ಧವಾಗಿ ನಿಯಮದ ಚೌಕಟ್ಟಿನಲ್ಲಿ ನಡೆಯಬೇಕಾಗುತ್ತದೆ. ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆ, ಪೋರ್ಟಲ್ ಅರ್ಜಿಗಳು ನಿಯಮದ ಪ್ರಕಾರ ಆಗುತ್ತವೆ. ಪೊಲೀಸ್ ವರ್ಗಾವಣೆಗೆ ಸಂಬಂಧಿಸಿದಂತೆ ಕೆಲವು ನಿಯಮಗಳಿವೆ. ಅವನ್ನು ಮೀರಿ ವರ್ಗಾವಣೆ ಮಾಡಲು ಆಗುವುದಿಲ್ಲ. ಹಾಗೆ ಮಾಡಬೇಕಾದರೆ ನಿಯಮಗಳನ್ನು ಬದಲಾಯಿಸಬೇಕಾಗುತ್ತದೆ. ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ಒಂದು ವರ್ಷದ ನಿಯಮವಿತ್ತು, ಸದನದಲ್ಲಿ ಕಾನೂನು ಬದಲಾಯಿಸಿ ಎರಡು ವರ್ಷ ಮಾಡಲಾಗಿದೆ. ಇರುವಂತಹ ನಿಯಮ ಉಲ್ಲಂಘನೆ ಮಾಡಿ, ವರ್ಗಾವಣೆ ಮಾಡುವುದಕ್ಕೆ ಅವಕಾಶವಿಲ್ಲ. ಡಿಜಿಯಾಗಲಿ, ನಾನಾಗಲೀ ಅಥವಾ ಯಾರೇ ಆಗಲಿ ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ.

ವರ್ಗಾವಣೆಗೆ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವುದಕ್ಕೆ ಸಿಬ್ಬಂದಿಗಳಿಗೆ ಸಣ್ಣಪುಟ್ಟ ತೊಂದರೆಗಳು ಆಗಿದ್ದರೆ ಸರಿಪಡಿಸುವುದಕ್ಕೆ ಸೂಚನೆ ನೀಡಲಾಗುವುದು. ಅವರಿಗೂ ಕುಟುಂಬಗಳಿವೆ, ಇದನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ ಎಂದರು. 545 ಪಿಎಸ್ಐ ಹುದ್ದೆಗಳ ನೇಮಕಾತಿ ಕುರಿತು ಕೋರ್ಟ್‌ನಿಂದ ಆದೇಶ ತಂದಾಗ, ನಮ್ಮ ಕೈಕಟ್ಟಿ ಹಾಕಿದಂತಾಗುತ್ತದೆ. ಪಿಎಸ್ಐ ಹುದ್ದೆಗಳಿಗೆ ನೇಮಕಾತಿ ಆದೇಶ ಕೊಡಬೇಕೆಂಬ ಉದ್ದೇಶದಿಂದ ಪರೀಕ್ಷೆ ಪೂರ್ಣಗೊಳಿಸಿದ್ದೇವೆ. ಈ ಹಂತದಲ್ಲಿ ಕೆಲವರು ಕೋರ್ಟ್‌ಗೆ ಹೋಗಿದ್ದಾರೆ, ಸದರಿ ಪ್ರಕರಣ ಮುಗಿದರೆ ಮುಂದಿನ ನೇಮಕಾತಿಗಳಿಗೆ ಅನುಕೂಲವಾಗುತ್ತದೆ, 545 ಪಿಎಸ್ಐ ಹುದ್ದೆಗಳ ನೇಮಕಾತಿ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ಪಕ್ಷದ ನಾಯಕರಾಗಿ ಜಿಟಿಡಿ ಸಾಧ್ಯತೆ

ಹೀಗಾಗಿ ಜಿ.ಟಿ.ದೇವೇಗೌಡರಿಗೇ ಶಾಸಕಾಂಗ ಪಕ್ಷದ ನಾಯಕತ್ವ ದೊರೆಯುವ ಸಾಧ್ಯತೆ ಇದೆ. ಇನ್ನು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಕುರುಬ ಸಮುದಾಯಕ್ಕೆ ಸೇರಿದ ಮಾಜಿ ಸಚಿವ ಬಂಡೆಪ್ಪ ಕಾಶೆಂಪೂರ ಇಲ್ಲವೆ ಹಾಲಿ ಶಾಸಕ ಸುರೇಶ್ ಬಾಬು ಅವರ ಹೆಸರುಗಳು ಚಲಾವಣೆಯಲ್ಲಿವೆ.

ಅಲ್ಲದೆ, ಯುವ ಶಾಸಕ ಶರಣಗೌಡ ಕಂದಕೂರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡುವ ಬಗ್ಗೆಯೂ ಚರ್ಚೆ ನಡೆದಿದೆ. ಕೇಂದ್ರ ಸಚಿವರಾದ ನಂತರ ಕುಮಾರಸ್ವಾಮಿ ರಾಜ್ಯಕ್ಕೆ ಇನ್ನೂ ಭೇಟಿ ನೀಡಿಲ್ಲ, ಅವರು ಶುಕ್ರವಾರ ನಗರಕ್ಕೆ ಬರಲಿದ್ದು ಆ ಸಂದರ್ಭದಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರೊಂದಿಗೆ ಚರ್ಚಿಸಿ, ತಮ್ಮಿಂದ ತೆರವಾಗುತ್ತಿರುವ ಸ್ಥಾನಕ್ಕೆ ನೇಮಕದ ಬಗ್ಗೆ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಜು.4ರವರೆಗೆ ಯಾವುದೇ ಕ್ರಮ ಇಲ್ಲ

ಅವಧಿ ಇಂದಿಗೆ ಅಂತ್ಯವಾಗಲಿದ್ದು, ಈ ಅವಧಿಯನ್ನು ವಿಸ್ತರಿಸಬೇಕು ಎಂದು ಅರ್ಜಿದಾರರ ಪರ ವಕೀಲರು ಮನವಿ ಸಲ್ಲಿಸಿದರು. ಈ ವೇಳೆ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಂ ಹುಯಿಲಗೋಳ ಅವರು, ಹೆಚ್‌ಎಸ್‌ಆರ್‌ಪಿ ಕಡ್ಡಾಯದ ಅವಧಿಯನ್ನು ಆಗಸ್ಟ್ ಇಲ್ಲವೆ ಸೆಪ್ಟೆಂಬರ್‌ವರೆಗೆ ವಿಸ್ತರಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಈ ಸಂಬಂಧ ಒಂದು ವಾರದಲ್ಲಿ ಅಧಿಸೂಚನೆ ಹೊರಡಿಸುವುದಾಗಿ ಸರ್ಕಾರ ತಿಳಿಸಿದೆ ಎಂಬುದನ್ನು ನ್ಯಾಯಾಲಯದ ಗಮನಕ್ಕೆ ತಂದರಲ್ಲದೆ, ಹೈಕೋರ್ಟ್ ಅನುಮತಿ ನೀಡಿದ್ದಲ್ಲಿ ಸರ್ಕಾರ ಅವಧಿ ವಿಸ್ತರಣೆ ಮಾಡಲಿದೆ ಎಂದರು. ಈ ವೇಳೆ ನ್ಯಾಯಮೂರ್ತಿಗಳು ಹೆಚ್‌ಎಸ್‌ಆರ್‌ಪಿ ಕಡ್ಡಾಯ ಅವಧಿ ವಿಸ್ತರಿಸಲು ರಾಜ್ಯ ಸರ್ಕಾರ ಸ್ವತಂತ್ರವಾಗಿರುತ್ತದೆ ಎಂದು ತಿಳಿಸಿದರಲ್ಲದೇ, ಹೆಚ್‌ಎಸ್‌ಆರ್‌ಪಿ ಅಳವಡಿಸದಿರುವ ವಾಹನ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಬಾರದು ಎಂಬ ಮೇ 21ರ ಆದೇಶವನ್ನು, ಜುಲೈ 4ರವರೆಗೆ ವಿಸ್ತರಿಸಿ ಆದೇಶ ಹೊರಡಿಸಿದರು.

ರಾಜೀವ್ ತಾರಾನಾಥ್ ಅಂತ್ಯಕ್ರಿಯೆ

ಬೆಳಗ್ಗೆ 9ರಿಂದ ಮಧ್ಯಾಹ್ನ 1 ಗಂಟೆವರೆಗೆ ಪಂಡಿತ್ ತಾರಾನಾಥ್ ಅವರ ಪಾರ್ಥಿವ ಶರೀರವನ್ನು ಸಾರ್ವಜನಿಕರ ದರ್ಶನಕ್ಕೆ ಇರಿಸಲಾಗಿತ್ತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯಿತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ, ಕೆ.ಆರ್. ಉಪವಿಭಾಗದ ಎಸಿಪಿ ರಮೇಶ್‌ಕುಮಾರ್, ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಯೋಗೇಶ್ ಹಾಗೂ ಇತರ ಅಧಿಕಾರಿಗಳು ರಾಜೀವ್ ತಾರಾನಾಥ್ ಪಾರ್ಥಿವ ಶರೀರದ ದರ್ಶನ ಮಾಡಿ, ನಮಿಸಿದರು.

ದೂರದರ್ಶನ ನಿವೃತ್ತ ನಿರ್ದೇಶಕ ಬಿ.ಜೆ. ಬಸವರಾಜು, ಹಿಂದೂಸ್ತಾನಿ ಗಾಯಕ ಪಂಡಿತ್ ಶಿವರುದ್ರಯ್ಯ ಹಿರೇಮಠ, ರೀಜನಲ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಪ್ರೊ. ಜಯಶಂಕರ, ನಾರಾಯಣ ಶೆಟ್ಟಿ, ಶಿಷ್ಯಂದಿರಾದ ಡಿ.ಎ. ಶಂಕರ್, ರೆಹಮಾನ್ ತರೀಕೆರೆ, ಸಚಿನ್ ಹಂಪಿಮನೆ, ಕೃಷ್ಣ ಮನೋಹಳ್ಳಿ, ಪ್ರೊ. ಎನ್.ಎಸ್. ರಂಗರಾಜು, ಪ್ರೊ. ಗೋಪಿನಾಥ ಸಹ ಅಗಲಿದ ಗುರುವಿನ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ಕಂಬನಿ ಮಿಡಿದರು. ಒಡನಾಡಿಗಳಾದ ವೇಣುಗೋಪಾಲ್, ಚಂದನಕುಮಾರ್, ವೆಂಕಟೇಶ್‌ಕುಮಾರ್, ಪ್ರೊ. ನಾ. ರತ್ನ, ರಾಮಕೃಷ್ಣ, ಸಿ. ಚಂದ್ರಶೇಖರ, ಕೃಪಾ ಪಡ್ಕೆ, ಪ್ರೊ. ಶಶಿಧರ, ಮಾಜಿ ಶಾಸಕ ಎಲ್. ನಾಗೇಂದ್ರ, ಪ್ರೊ. ಕಾಳಚನ್ನೇಗೌಡ, ನಾ. ದಿವಾಕರ, ಪ್ರೊ. ಚಂದ್ರಶೇಖರ ಕಂಬಾರ, ಮೊರಬದ ಮಲ್ಲಿಕಾರ್ಜುನಸ್ವಾಮಿ, ರಾಮಚಂದ್ರ, ವಿಕ್ರಮ್, ಚದುರಂಗ, ಎಸ್.ಚಿನ್ನಪ್ಪ, ಕೆ.ವಿ.ಮಲ್ಲೇಶ, ಜಯಂತ ಕಾಯ್ಕಿಣಿ, ಜಿ.ಬಿ. ಬಸವರಾಜು, ಗಣೇಶ ಅಮೀನಗಡ, ಸಿ. ಬಸವಲಿಂಗಯ್ಯ, ಡಾ. ವಿಜಯಜನಾರ್ಧನ (ಜನ್ನಿ) ಸೇರಿದಂತೆ ಸಾಹಿತಿಗಳು, ಸಂಗೀತ ವಿದ್ವಾಂಸರು, ನಿವೃತ್ತ ಪ್ರಾಧ್ಯಾಪಕರು, ಶಿಷ್ಯಂದಿರು, ಒಡನಾಡಿಗಳು ಅಗಲಿದ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಪಾರ್ಥಿವ ಶರೀರದ ದರ್ಶನ ಪಡೆದರು. ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ನಿಧನದಿಂದ ಸಂಗೀತ ಹಾಗೂ ಸಾಂಸ್ಕೃತಿಕ ಲೋಕ ಬಡವಾದಂತಾಗಿದೆ. ಅವರು ರಾಜ್ಯಕ್ಕಷ್ಟೇ ಅಲ್ಲದೇ ದೇಶದ ಸರೋದ್ ಪ್ರಿಯರಿಗೆ ಸಂಗೀತದ ರಸದೌತಣ ನೀಡಿದ ಅಪರೂಪದ ವ್ಯಕ್ತಿ ಎಂದರು. ಮನೆಯಲ್ಲಿ ಜಾರಿ ಬಿದ್ದು ಕಾಲಿಗೆ ಪೆಟ್ಟಾಗಿದ್ದರಿಂದ ಅವರನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಸರ್ಕಾರವೇ ಅದರ ವೆಚ್ಚವನ್ನು ಭರಿಸಲಿದ್ದು, ಸರ್ಕಾರಿ ಗೌರವಗಳೊಂದಿಗೆ ಶ್ರೀಯುತರ ಅಂತ್ಯಕ್ರಿಯೆ ನಡೆಸಲು ತೀರ್ಮಾನಿಸಲಾಯಿತು ಎಂದು ಸಚಿವರು ನುಡಿದರು.

ಯಡಿಯೂರಪ್ಪಗೆ ಸಿಐಡಿ ನೋಟಿಸ್

ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪಿಸಿದ್ದರು. ಮಾರ್ಚ್ 14 ರಂದು ಬೆಂಗಳೂರಿನ ಸದಾಶಿವನಗರ ಪೊಲೀಸರು ಪ್ರಕರಣವನ್ನು ದಾಖಲಿಸಿದ ನಂತರ, ಕರ್ನಾಟಕ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರು ಪ್ರಕರಣವನ್ನು ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವರ್ಗಾಯಿಸಿ ಆದೇಶ ಹೊರಡಿಸಿದ್ದರು. ಯಡಿಯೂರಪ್ಪ ವಿರುದ್ಧ ಆರೋಪ ಮಾಡಿದ್ದ 54 ವರ್ಷದ ಮಹಿಳೆ ಶ್ವಾಸಕೋಶದ ಕ್ಯಾನ್ಸರ್‌ನಿಂದ ಕಳೆದ ತಿಂಗಳು ಬನ್ನೇರುಘಟ್ಟ ರಸ್ತೆಯ ಖಾಸಗಿ ಆಸ್ಪತ್ರೆಯಲ್ಲಿ ಮೇ 27ರಂದು ಮೃತಪಟ್ಟಿದ್ದರು. 81 ವರ್ಷದ ಯಡಿಯೂರಪ್ಪ ಅವರು ಈ ಆರೋಪವನ್ನು ನಿರಾಕರಿಸಿದ್ದು, ಪ್ರಕರಣದ ವಿರುದ್ಧ ಕಾನೂನು ಹೋರಾಟ ನಡೆಸುವುದಾಗಿ ಹೇಳಿದ್ದಾರೆ. ಇಂದು ವಿಚಾರಣೆಗೆ ಹಾಜರಾಗುವಂತೆ ನಿನ್ನೆ ಸಿಐಡಿ ನೋಟಿಸ್ ಕಳುಹಿಸಿತ್ತು. ಆದರೆ, ಸದ್ಯ ದೆಹಲಿಯಲ್ಲಿರುವ ಕಾರಣ ಯಡಿಯೂರಪ್ಪ ಅವರು ಸಮಯಾವಕಾಶ ಕೋರಿದ್ದಾರೆ. ಮೂರು ದಿನಗಳ ನಂತರ ಅವರು ಪೊಲೀಸರ ಮುಂದೆ ಹಾಜರಾಗಲಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಮೋದಿ ಸಂಪುಟದಲ್ಲಿ ಸೋಮಣ್ಣಗೆ ರಾಜ್ಯ ಖಾತೆ ನೀಡಿದ್ದಕ್ಕೆ ಸಮುದಾಯ ಆಕ್ರೋಶ



ಬೆಂಗಳೂರು: ಮೂರನೇ ಬಾರಿಗೆ ಪ್ರಧಾನಿಯಾಗಿ ನರೇಂದ್ರ ಮೋದಿ ಅಧಿಕಾರ ಸ್ವೀಕರಿಸಿದ್ದಾರೆ. ಕೇಂದ್ರ ಸರ್ಕಾರ ರಚನೆಯಲ್ಲಿ ವೀರಶೈವ ಲಿಂಗಾಯತರು ಬದಿಗೆ ಸರಿದಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಕರ್ನಾಟಕದಲ್ಲಿ ಕಳೆದ 20 ವರ್ಷಗಳಿಂದ ವೀರಶೈವ ಲಿಂಗಾಯತ ಸಮುದಾಯ ಬಿಜೆಪಿಯನ್ನು ಬೆಂಬಲಿಸುತ್ತಿದ್ದರೂ ಇಲ್ಲಿಯವರೆಗೆ ಒಂದೇ ಒಂದು ಕ್ಯಾಬಿನೆಟ್ ದರ್ಜೆಯ ಸ್ಥಾನವನ್ನು ನೀಡಿಲ್ಲ ಎಂದು ಮುಖಂಡರು ಹೇಳಿದ್ದಾರೆ. ತುಮಕೂರು ಲೋಕಸಭಾ ಕ್ಷೇತ್ರದಿಂದ ಗೆದ್ದಿರುವ ವಿ. ಸೋಮಣ್ಣ ಅವರನ್ನು ರೈಲ್ವೆ ಖಾತೆ ರಾಜ್ಯ ಸಚಿವರನ್ನಾಗಿ ಮಾಡಲಾಗಿದೆ.

ಅಖಿಲ ಭಾರತ ವೀರಶೈವ ಮಹಾಸಭಾ ಕಾರ್ಯದರ್ಶಿ ರೇಣುಕಾ ಪ್ರಸನ್ನ ಮಾತನಾಡಿ, ಕರ್ನಾಟಕದಿಂದ ನಿರ್ಮಲಾ ಸೀತಾರಾಮನ್ ಮತ್ತು ಪ್ರಹ್ಲಾದ್ ಜೋಶಿ ಇಬ್ಬರು ಬ್ರಾಹ್ಮಣರು ಸಂಪುಟಕ್ಕೆ ಸೇರ್ಪಡೆಯಾಗಿದ್ದಾರೆ, ಆದರೆ ಲಿಂಗಾಯತರಿಗೆ ಕೇವಲ ಒಂದು ಸ್ಥಾನ ನೀಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕೆಲಸವಿರುವಾಗ ಲಿಂಗಾಯತರು ಬೇಕು, ಕೇಶವ ಕೃಪಾ (ಬಿಜೆಪಿ ಕೇಂದ್ರ ಕಚೇರಿ) ಫಲವನ್ನು ಕೊಯ್ಲು ಮಾಡಿ ಆನಂದಿಸುತ್ತದೆ ಎಂದು ಅವರು ಬೇಸರ ವ್ಯಕ್ತಪಡಿಸಿದ್ದಾರೆ. ಮಾಜಿ ಅಧಿಕಾರಿ ಮತ್ತು ಜಾಗತಿಕ ಲಿಂಗಾಯತ ಚಳವಳಿಯ ಮುಖ್ಯಸ್ಥ ಎಸ್.ಎಂ.ಜಾಮದಾರ ಮಾತನಾಡಿ, ಕೇಂದ್ರ ಸಂಪುಟದಲ್ಲಿ ಲಿಂಗಾಯತರಿಗೆ ಪ್ರಾತಿನಿಧ್ಯ ಕಡಿಮೆಯಾಗಿದೆ ಮತ್ತು ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅದಕ್ಕೆ ಬೆಲೆ ತೆತ್ತಲಿದೆ ಎಂದಿದ್ದಾರೆ.

ಬೆಂಗಳೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರದ ಮಾಜಿ ಎಚ್‌ಒಡಿ, ರಾಜಕೀಯ ವಿಶ್ಲೇಷಕ ಪ್ರೊ. ಪಿ.ಎಸ್.ಜಯರಾಮು ಮಾತನಾಡಿ, ಈ ಸರ್ಕಾರಕ್ಕೆ ಮಿತ್ರ ಪಕ್ಷಗಳು ಇರುವುದರಿಂದ ಇದು ಅನಿವಾರ್ಯವಾಗಿದೆ. ನಿಸ್ಸಂಶಯವಾಗಿ ಅವರು ಮಹಾರಾಷ್ಟ್ರ, ಬಿಹಾರ, ಜಾರ್ಖಂಡ್, ದೆಹಲಿ ಮತ್ತು ಹರಿಯಾಣದಂತಹ ಚುನಾವಣೆಗೆ ಹೋಗುವ ರಾಜ್ಯಗಳಿಂದ ಹೆಚ್ಚಿನ ಅವಕಾಶಗಳನ್ನು ಪಡೆಯಲು ಬಯಸುತ್ತಾರೆ ಎಂದಿದ್ದಾರೆ.

ಮತ್ತೊಬ್ಬ ರಾಜಕೀಯ ವಿಶ್ಲೇಷಕ ಬಿ.ಎಸ್. ಮೂರ್ತಿ ಮಾತನಾಡಿ, ಈ ಬಾರಿ ಮಾಜಿ ಸಿಎಂಗಳಾದ ಬಸವರಾಜ ಬೊಮ್ಮಾಯಿ ಮತ್ತು ಜಗದೀಶ್ ಶೆಟ್ಟರ್ ಗೆಲುವು ಸಾಧಿಸಿರುವುದರಿಂದ ತಮ್ಮ ನಿರೀಕ್ಷೆ ಹೆಚ್ಚಿತ್ತು. ತಮ್ಮನ್ನು ಸತತವಾಗಿ ಬಿಜೆಪಿ ಕೇಂದ್ರ ಸರ್ಕಾರಗಳು ಬಳಸಿಕೊಂಡು ನಂತರ ನಿರ್ಲಕ್ಷಿಸಿದ್ದಾರೆ ಎಂದು ಲಿಂಗಾಯತ ಸಮುದಾಯದ ಜನರು ಭಾವಿಸುತ್ತಾರೆ. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಕೂಡ ಲಿಂಗಾಯತರಿಗೆ ಕ್ಯಾಬಿನೆಟ್ ಹುದ್ದೆ ನೀಡಿಲ್ಲ ಎಂದು ಕೆಲವರು ದೂರಿದ್ದಾರೆ. ಈಗ ಎಚ್‌ಡಿ ಕುಮಾರಸ್ವಾಮಿ ಅವರು ಎನ್‌ಡಿಎ ತಂಡದ ಪಾಲುದಾರರಾಗಿರುವುದರಿಂದ ರಾಜ್ಯದಲ್ಲಿ ತನ್ನ ರಾಜಕೀಯ ನಡೆಯ ಬಗ್ಗೆ ಸಮುದಾಯವು ಮರುಚಿಂತನೆ ಮಾಡುತ್ತದೆಯೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಲಿಂಗಾಯತರು ಬಿಜೆಪಿಯಿಂದ ಟಿಕೆಟ್‌ಗಳ ಹಂಚಿಕೆಯನ್ನು ಪಡೆದಿಲ್ಲ ಅಥವಾ ಅವರು ಮಂತ್ರಿಮಂಡಲದಲ್ಲಿ ಅವರ ಪಾಲು ಪಡೆದಿಲ್ಲ ಎಂದು ಹೇಳಿದರು. ಈ ಬಾರಿ ಸಹಜವಾಗಿಯೇ ಸಮ್ಮಿಶ್ರ ಸರ್ಕಾರವಾಗಿದೆ, ಆದರೆ ಹಿಂದಿನ ಸಂದರ್ಭಗಳಲ್ಲಿ ಕೂಡ ಲಿಂಗಾಯತ ನಾಯಕರು ಕೇವಲ ರಾಜ್ಯ ಸಚಿವರಾಗಿ ಉಳಿದಿದ್ದಾರೆ. ಲಿಂಗಾಯತ ಗುಂಪುಗಳು ಈ ಬಗ್ಗೆ ಬಿಸಿಯಾಗಿ ಚರ್ಚಿಸುತ್ತಿವೆ ಎಂದು ಅವರು ಹೇಳಿದರು. ಧಾರವಾಡದಲ್ಲಿ ಪ್ರಹ್ಲಾದ್ ಜೋಶಿ ವಿರುದ್ಧ ಪ್ರಚಾರ ನಡೆಸಿದ್ದ ಲಿಂಗಾಯತ ಮಠಾಧೀಶ ದಿಂಗಾಲೇಶ್ವರ ಸ್ವಾಮೀಜಿ, ಯಾವುದೇ ಪ್ರತಿಕ್ರಿಯೆ ನೀಡದಿರಲು ನಿರಾಕರಿಸಿದ್ದಾರೆ.

65 ಅಗ್ನಿಶಾಮಕ ಸಿಬ್ಬಂದಿಗೆ 'ಮುಖ್ಯಮಂತ್ರಿ ಚಿನ್ನದ ಪದಕ' ಗೌರವ

ಬೆಂಗಳೂರು: ಕರ್ನಾಟಕ ರಾಜ್ಯ ಅಗ್ನಿಶಾಮಕ ಹಾಗೂ ತುರ್ತು ಸೇವಾ ಇಲಾಖೆಯಿಂದ ನೀಡುವ ಅತ್ಯುತ್ತಮ ಸೇವಾ ಪ್ರಶಸ್ತಿ ಮುಖ್ಯಮಂತ್ರಿ ಚಿನ್ನದ ಪದಕಕ್ಕೆ 65 ಮಂದಿ ಸಿಬ್ಬಂದಿ ಭಾಜನರಾಗಿದ್ದಾರೆ.

13 ಹೋಮ್ ಗಾರ್ಡ್‌ಗಳು ಮತ್ತು ಇಬ್ಬರು ಸಿವಿಲ್ ಡಿಫೆನ್ಸ್ ಸಿಬ್ಬಂದಿ ಸೇರಿದಂತೆ 65 ಅಗ್ನಿಶಾಮಕ ಸಿಬ್ಬಂದಿಗೆ ಮಂಗಳವಾರ ಮುಖ್ಯಮಂತ್ರಿಗಳ ಪದಕವನ್ನು ನೀಡಿ ಅವರ ಅಪ್ರತಿಮ ಸೇವೆಯನ್ನು ಗುರುತಿಸಿ ಗೌರವಿಸಲಾಯಿತು. ಅಗ್ನಿಶಾಮಕ ಸಿಬ್ಬಂದಿಗೆ ಸಿಎಂ ಪದಕವನ್ನು ನೀಡಿ ಗೌರವಿಸಿದ ಬಳಿಕ, ಕೊಳವೆಬಾವಿಗೆ ಬಿದ್ದಿದ್ದ ಮಗುವನ್ನು ರಕ್ಷಿಸುವ ಮೂಲಕ ಶೌರ್ಯ ಪ್ರದರ್ಶಿಸಿದ ಒಂಬತ್ತು ಮಂದಿ ಅಗ್ನಿಶಾಮಕ ಸಿಬ್ಬಂದಿ ಮತ್ತು ಕ್ರೀಡೆಯಲ್ಲಿ ಸಾಧನೆ ಮಾಡಿದ ಇಬ್ಬರು ಸೇರಿದಂತೆ 11 ಅಗ್ನಿಶಾಮಕ ಸಿಬ್ಬಂದಿಯನ್ನು, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಸನ್ಮಾನಿಸಿದರು.

ವಿಜಯಪುರದಲ್ಲಿ ಏಪ್ರಿಲ್ 3 ರಂದು 205 ಅಡಿ ಕೊಳವೆಬಾವಿಗೆ ಬಿದ್ದ ಎರಡೂವರೆ ವರ್ಷದ ಬಾಲಕನ ರಕ್ಷಣಾ ಕಾರ್ಯಾಚರಣೆಯಲ್ಲಿ ಒಂಬತ್ತು ಮಂದಿ ಅಗ್ನಿಶಾಮಕ ಸಿಬ್ಬಂದಿ ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಗೃಹ ಸಚಿವ ಡಾ.ಪರಮೇಶ್ವರ್ ಅವರು HPCL ಪೆಟ್ರೋಲಿಯಂ ಸಹಯೋಗದೊಂದಿಗೆ 'ಪೆಟ್ರೋ ಕಾರ್ಡ್' ಅನ್ನು ಬಿಡುಗಡೆ ಮಾಡಿದರು.

ಪ್ರಜ್ವಲ್ ಮತ್ತೆ ಜೂ.18ರವರೆಗೆ ಎಸ್‌ಐಟಿ ಕಸ್ಟಡಿಗೆ



ಬೆಂಗಳೂರು, ಜೂ.12– ಹಾಸನ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಮತ್ತೆ ಜೂನ್ 18ರವರೆಗೆ (ಸೈಬರ್ ಕ್ರೈಮ್ ಠಾಣೆ ಎಫ್‌ಐಆರ್ ನಂ.2/2024ರಲ್ಲಿ) ಎಸ್‌ಐಟಿ ಕಸ್ಟಡಿಗೆ ನೀಡಲಾಗಿದೆ. ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ಪ್ರಜ್ವಲ್ ರೇವಣ್ಣ ಅವರನ್ನು ಇಂದು(ಜೂ.12) ನ್ಯಾಯಾಲಯಕ್ಕೆ ಹಾಜರುಪಡಿಸಿ ಆತನನ್ನು ಕಸ್ಟಡಿಗೆ ನೀಡುವಂತೆ ಎಸ್‌ಐಟಿ ಅಧಿಕಾರಿಗಳು ಮನವಿ ಮಾಡಿದ್ದರು. ಮನವಿ ಪುರಸ್ಕರಿಸಿದ ಬೆಂಗಳೂರಿನ 42ನೇ ಎಸಿಎಂಎಂ ಕೋರ್ಟ್, ಬಾಡಿ ವಾರಂಟ್ ಜಾರಿಗೊಳಿಸಿದೆ.

ಕಳೆದ ಎರಡು ದಿನಗಳ ಹಿಂದೆ ಪ್ರಜ್ವಲ್ ರೇವಣ್ಣಗೆ ಕೋರ್ಟ್ ನ್ಯಾಯಾಂಗ ಬಂಧನ ವಿಧಿಸಿದ್ದು, ಈ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿಗೆ ಶಿಫ್ಟ್ ಮಾಡಲಾಗಿದ್ದು, ವಿಚಾರಣಾಧೀನ ಕೈದಿ ಸಂಖ್ಯೆ 5664 ನೀಡಲಾಗಿತ್ತು. ಬಳಿಕ ಪ್ರಜ್ವಲ್ ರೇವಣ್ಣ, ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನ ಕ್ವಾರಂಟೈನ್ ಸೆಲ್‌ನಲ್ಲಿದ್ದರು. ಅವರಿಗೆ ಜೈಲಿನ ಮೆನುವಿನಂತೆ ಮುದ್ದೆ, ಅನ್ನ, ಸಾಂಬರು, ಪಲ್ಯ ನೀಡಲಾಗಿತ್ತು.

ಹಿರಿಯ ನಟ ವಿನೋದ್ ರಾಜ್ ಆಸ್ಪತ್ರೆಗೆ ದಾಖಲು



ಬೆಂಗಳೂರು: ಕನ್ನಡ ಚಿತ್ರರಂಗದ ಹಿರಿಯ ನಟಿ ದಿವಂಗತ ಲೀಲಾವತಿ ಪುತ್ರ, ನಟ ವಿನೋದ್ ರಾಜ್ ಕರುಳಿನ ಸಮಸ್ಯೆಯಿಂದ ನೆಲಮಂಗಲದ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಮೂಲಗಳ ಪ್ರಕಾರ 11 ವರ್ಷಗಳ ಹಿಂದೆ ಹಾರ್ಟ್ ಆಪರೇಷನ್‌ಗೆ ಒಳಗಾಗಿ ಸ್ಟಂಟ್ ಹಾಕಿಸಿಕೊಂಡಿದ್ದ ವಿನೋದ್ ರಾಜ್‌ಗೆ ಇದೀಗ ಅದೇ ಸ್ಟಂಟ್‌ನಿಂದ ಕರುಳಿನ ಸಮಸ್ಯೆ ಎದುರಾಗಿದೆ ಎನ್ನಲಾಗಿದೆ. ಸದ್ಯ ಆಪರೇಷನ್‌ಗೆ ಒಳಗಾಗಿದ್ದಾರೆ. ಇನ್ನು ಎರಡು ದಿನಗಳ ಕಾಲ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯಲಿದ್ದಾರೆ ಎಂದು ಮೂಲಗಳು ತಿಳಿಸಿದೆ. ಇತ್ತೀಚೆಗೆ ವಿನೋದ್ ರಾಜ್ ಸಮಾಜಮುಖಿ ಕೆಲಸಗಳನ್ನು ಮಾಡಿ ಸುದ್ದಿಯಾಗಿದ್ದರು. ಸ್ಯಾಂಡಲ್‌ವುಡ್ ನಟ ವಿನೋದ್ ರಾಜ್ ಅವರು ಬೆಂಗಳೂರು ನಗರದ ನೆಲಮಂಗಲದ ಕರೆಕಲ್ ಕ್ರಾಸ್‌ನಿಂದ ಸೋಲದೇವನಹಳ್ಳಿವರೆಗೂ ರಸ್ತೆ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಿದ್ದರು ಸರ್ಕಾರದ ಯಾವುದೇ ಅನುದಾನಕ್ಕೆ ಕಾಯದೇ ವಿನೋದ್ ರಾಜ್ ತಾವೇ ಸ್ವತಃ ನಿಂತು ತಮ್ಮ ಸ್ವಂತ ಖರ್ಚಿನಲ್ಲಿ ರಸ್ತೆ ರಿಪೇರಿ ಕೆಲಸ ಮಾಡಿಸಿದ್ದರು.

ಚಂದಗಾಲು ಆತ್ಮಹತ್ಯೆ ಪ್ರಕರಣ: ಹೈಕೋರ್ಟ್ ನ್ಯಾಯಾಧೀಶರ ಸಮಿತಿಯಿಂದ ತನಿಖೆಗೆ ರಾಜ್ಯ ನಾಯಕರ ಸೇನೆ ಆಗ್ರಹ

ಎರಡು ಜೀವ ಬಲಿಯಾದ ಕುಟುಂಬಕ್ಕೆ ೫೦ ಲಕ್ಷ ರೂ. ಪರಿಹಾರ ನೀಡುವಂತೆ ಒತ್ತಾಯ

ಮೈಸೂರು, ಜೂ.12 (ಜಿಎ)– ಕೆ.ಆರ್. ನಗರ ತಾಲೂಕಿನ ಚಂದಗಾಲು ಗ್ರಾಮದ ಕುಟುಂಬವೊಂದು ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ, ತಂದೆ–ಮಗಳು ಮೃತಪಟ್ಟ ಪ್ರಕರಣವನ್ನು ಉಚ್ಚನ್ಯಾಯಾಲಯದ ನ್ಯಾಯಾಧೀಶರನ್ನೊಳಗೊಂಡ ಸಮಿತಿಯಿಂದ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗುವಂತೆ ಕ್ರಮವಹಿಸಲು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸೇನೆಯ ರಾಜ್ಯಾಧ್ಯಕ್ಷ ದೇವರಾಜ್ ಟಿ.ಕಾಟೂರು ಮಾತನಾಡಿ, ಈ ಪ್ರಕರಣವನ್ನು ರಾಜಕೀಯ ಪಕ್ಷಗಳು ನೊಂದ ಕುಟುಂಬಕ್ಕೆ ನ್ಯಾಯ ಕೊಡಿಸುವ ಬದಲು ರಾಜಕೀಯ ಬೆರೆಸಿ, ನಾಯಕ ಸಮಾಜದ ಹೋರಾಟದ ದಿಕ್ಕನ್ನು ಬದಲಿಸಲೆ ತ್ನಿಸುತ್ತಿರುವುದು ಖಂಡನೀಯ ಎಂದರು.

ಕೆ.ಆರ್.ನಗರ ತಾಲೂಕು ಆಡಳಿತ ಇಂತಹ ಅಮಾನವೀಯ ಘಟನೆಯನ್ನು ತಡೆಯುವಲ್ಲಿ ವಿಫಲವಾಗಿದೆ. ಈ ಘಟನೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಈ ಬಗ್ಗೆ ಉಚ್ಚನ್ಯಾಯಾಲಯದ ನ್ಯಾಯಾಧೀಶರನ್ನೊಳಗೊಂಡ ಸಮಿತಿಯಿಂದ ಸಮಗ್ರ ತನಿಖೆ ನಡೆಸಿ, ತಪ್ಪಿತಸ್ಥರಿಗೆ ತಕ್ಕ ಶಿಕ್ಷೆಯಾಗುವಂತೆ ಕ್ರಮವಹಿಸಲು ಒತ್ತಾಯಿಸುತ್ತಿದ್ದು, ತಪ್ಪಿದಲ್ಲಿ ಎಲ್ಲಾ ಸಂಘ ಸಂಸ್ಥೆಗಳು, ಪ್ರಗತಿಪರರ ಸಹಕಾರ ಮತ್ತು ಸಹಯೋಗದೊಂದಿಗೆ ನಾಯಕ ಸಮಾಜದಿಂದ ಮುಂದಿನ ವಾರ ಪ್ರತಿಭಟನೆಯನ್ನು ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ತಮ್ಮ ಮನೆಯ ಹುಡುಗಿಯ ಖಾಸಗಿ ವಿಡಿಯೋ ಮತ್ತು ಭಾವಚಿತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಮಾಡಿ ಮಾನ ಕಳೆಯುತ್ತೇನೆಂದು ಬೆದರಿಸಿದ ವಿಚಾರವಾಗಿ ಕೆ.ಆರ್.ನಗರ ಪೊಲೀಸ್ ಠಾಣೆಗೆ ದೂರು ನೀಡಲು ಹೋದಾಗ, ಆರಕ್ಷಕ ಸಿಬ್ಬಂದಿಗಳು ದೂರು ಸ್ವೀಕರಿಸದೆ ಮೌಖಿಕವಾಗಿ ನಿಮ್ಮ ಹುಡುಗಿಯ ಭವಿಷ್ಯದ ದೃಷ್ಟಿಯಿಂದ ಗ್ರಾಮದಲ್ಲಿ ಕುಳಿತು ಬಗೆಹರಿಸಿಕೊಳ್ಳಿ ಎಂಬ ಬೇಜವಾಬ್ದಾರಿ ಹೇಳಿಕೆ ಪರಿಣಾಮ ಆರೋಪಿಯು ಪದೇ ಪದೇ ಬ್ಲಾಕ್ ಮೇಲ್ ಮಾಡಿ, ಮಾನಸಿಕವಾಗಿ ಕುಟುಂಬಸ್ಥರನ್ನು ಹಿಂಸಿಸಿದ ಪರಿಣಾಮ, ಆ ಕುಟುಂಬವು ಮಾನಕ್ಕೆ ಅಂಜಿ ಮಹದೇಶ್ವರ ಬೆಟ್ಟದ ಬಳಿ ಆತ್ಮಹತ್ಯೆ ಪ್ರಯತ್ನ ಮಾಡಿ ಎರಡು ಅಮೂಲ್ಯ ಜೀವಗಳನ್ನು ಕಳೆದುಕೊಂಡಿದೆ. ಇದಕ್ಕೆ ಸ್ಥಳೀಯ ಪೊಲೀಸ್ ಠಾಣೆಯ ಸಿಬ್ಬಂದಿ ನಿರ್ಲಕ್ಷ್ಯವೇ ನೇರ ಹೊಣೆಯಾಗಿರುವುದರಿಂದ ಅಮಾನತ್ತಾಗಿರುವ ಪೊಲೀಸ್ ಸಿಬ್ಬಂದಿ ವಿರುದ್ಧ ಎಸ್‌ಸಿ, ಎಸ್‌ಟಿ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿಯಲ್ಲಿ ಪ್ರಕರಣ ದಾಖಲಿಸಿ, ಸೇವೆಯಿಂದ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿದರು.

ಕಿಡಿಗೇಡಿಯ ಬೆದರಿಕೆ ಮತ್ತು ಪೊಲೀಸ್ ಸಿಬ್ಬಂದಿಗಳ ನಿರ್ಲಕ್ಷ್ಯದಿಂದ ಮಾನಕ್ಕೆ ಹೆದರಿ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿ, ತಂದೆ–ಮಗಳು ಮೃತಪಟ್ಟಿದ್ದು, ನಾಗರಿಕ ಸಮಾಜ ತಲೆತಗ್ಗಿಸುವಂತಾಗಿದೆ. ಇಂತಹ ಅಮಾನವೀಯ ಘಟನೆಯನ್ನು ಖಂಡಿಸುತ್ತಾ ಕುಟುಂಬಕ್ಕೆ ಸರ್ಕಾರ 50 ಲಕ್ಷ ರೂ. ಪರಿಹಾರವನ್ನು ತಕ್ಷಣವೇ ನೀಡಬೇಕೆಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಶಿವಕುಮಾರಸ್ವಾಮಿ, ಉದ್ಬೂರು ಸೋಮಣ್ಣ, ಕಣಿಯನಹುಂಡಿ ಸಿದ್ದು, ವಾಜಮಂಗಲ ಕುಮಾರ್, ನೃಪತುಂಗ ಉಪಸ್ಥಿತರಿದ್ದರು.

ಭಾರತೀಯ ನಾಗರಿಕ ಸುರಕ್ಷಾ, ನ್ಯಾಯ ಸಂಹಿತೆ, ಸಾಕ್ಷ್ಯ ಅಧಿನಿಯಮ ಕಾನೂನು ಪುಸ್ತಕಗಳ ಬಿಡುಗಡೆ

ಜುಲೈ 1ರಿಂದ ತಿದ್ದುಪಡಿ ಕಾನೂನುಗಳು ಜಾರಿ; ಈ ಕೃತಿಗಳಲ್ಲಿ ಸಮಗ್ರ ಮಾಹಿತಿ ಲಭ್ಯ



ಮೈಸೂರು ವಕೀಲರ ಸಂಘದ ಸಭಾಂಗಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಕೀಲ ಬಿ.ಎಸ್.ಪ್ರಶಾಂತ್ ಹಾಗೂ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಡಾ.ಡಿ.ವಿ.ಗುರುಪ್ರಸಾದ್ ಅವರು ಬರೆದಿರುವ 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ –2023' 'ಭಾರತೀಯ ನ್ಯಾಯ ಸಂಹಿತೆ–2023' ಹಾಗೂ 'ಭಾರತೀಯ ಸಾಕ್ಷ್ಯ ಅಧಿನಿಯಮ–2023' ಕೃತಿಗಳನ್ನು ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರವೀಂದ್ರ ಹೆಗ್ಡೆ ಲೋಕಾರ್ಪಣೆ ಮಾಡಿದರು.

ಮೈಸೂರು, ಜೂ 12 (ಆರ್‌ಕೆ)–ಮೈಸೂರು ವಕೀಲರ ಸಂಘದ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಕೀಲ ಬಿ.ಎಸ್.ಪ್ರಶಾಂತ್ ಹಾಗೂ ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಡಾ.ಡಿ.ವಿ.ಗುರುಪ್ರಸಾದ್ ಅವರು ಬರೆದಿರುವ 'ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ –2023' 'ಭಾರತೀಯ ನ್ಯಾಯ ಸಂಹಿತೆ–2023' ಹಾಗೂ 'ಭಾರತೀಯ ಸಾಕ್ಷ್ಯ ಅಧಿನಿಯಮ–2023' ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಮೈಸೂರು ವಕೀಲರ ಸಂಘ ಹಾಗೂ ಬೆಂಗಳೂರಿನ ಲಾಯರ್ಸ್ ಲಾಬುಕ್ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮೈಸೂರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ರವೀಂದ್ರ ಹೆಗ್ಡೆ ಅವರು ಮೂರು ಕಾನೂನು ಪುಸ್ತಕಗಳನ್ನು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ವಕೀಲರನ್ನುದ್ದೇಶಿಸಿ ಮಾತನಾಡಿದ ನ್ಯಾಯಾಧೀಶರು, ಡಾ.ಡಿ.ವಿ.ಗುರುಪ್ರಸಾದ್ ಅವರು ಬರೆದಿರುವ ಭಾರತೀಯ ನ್ಯಾಯ ಸಂಹಿತೆ ಮತ್ತು ಬಿ.ಎಸ್.ಪ್ರಶಾಂತ್ ಅವರ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮ ಪುಸ್ತಕಗಳಲ್ಲಿ ವಿನೂತನ ಶೈಲಿಯ ಕಾನೂನು ಸೆಕ್ಷನ್‌ಗಳನ್ನು ವಕೀಲರು, ಕಾನೂನು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅರ್ಥವಾಗುವಂತೆ ಸರಳವಾಗಿ ಹಾಗೂ ಅರ್ಥಪೂರ್ಣವಾಗಿ ವ್ಯಾಖ್ಯಾನಿಸಲಾಗಿದೆ ಎಂದರು.

ತಿದ್ದುಪಡಿಯಾಗಿರುವ ಕಾನೂನುಗಳು 2024ರ ಜುಲೈ 1ರಿಂದ ಜಾರಿಗೆ ಬರುತ್ತಿರುವುದರಿಂದ ಹಳೇ ಕಾನೂನುಗಳ ಮಾರ್ಪಾಡು, ಅವುಗಳ ಅರ್ಥ, ಅನುಸರಿಸುವ ಕ್ರಮದ ಬಗ್ಗೆ ಈ ಮೂರು ಪುಸ್ತಕಗಳಲ್ಲಿ ವಿವರಿಸಲಾಗಿದೆ. ಅವುಗಳನ್ನು ವಕೀಲರು, ನ್ಯಾಯಾಧೀಶರು, ಕಾನೂನು ವಿದ್ಯಾರ್ಥಿಗಳು, ಪೊಲೀಸ್ ಅಧಿಕಾರಿಗಳು ಹಾಗೂ ಸಾರ್ವಜನಿಕರು ಓದಿ ತಿಳಿದುಕೊಂಡು ಸದುಪಯೋಗಪಡಿಸಿಕೊಳ್ಳುವಂತೆಯೂ ರವೀಂದ್ರ ಹೆಗ್ಡೆ ಅವರು ಸಲಹೆ ನೀಡಿದರು.

ಕೃತಿ ಕರ್ತ ಡಾ.ಡಿ.ವಿ. ಗುರುಪ್ರಸಾದ್ ಅವರು ಮಾತನಾಡಿ, ತಾವು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದಾಗ ಪಡೆದ ಅನುಭವದ ಆಧಾರದ ಮೇಲೆ ಬರೆದಿರುವ 'ಭಾರತೀಯ ನ್ಯಾಯ ಸಂಹಿತೆ' ಪುಸ್ತಕದಲ್ಲಿ ಐಪಿಸಿ ಸೆಕ್ಷನ್‌ಗಳನ್ನು ರೀಪ್ಲೇಸ್ ಮತ್ತು ರೀ ಅರೇಂಜ್ ಮಾಡಿ, ಕೈಬಿಟ್ಟಿರುವ ಕೆಲವು ಅಂಶಗಳನ್ನು ಸೇರಿಸಿ ಉಪಯುಕ್ತ ಮಾಹಿತಿಗಳನ್ನು ನೀಡಿದ್ದೇನೆ, ಅದನ್ನು ಸದುಪಯೋಗಪಡಿಸಿಕೊಂಡು ಪ್ರಕರಣಗಳನ್ನು ಇತ್ಯರ್ಥಗೊಳಿಸಿದರೆ ತಮ್ಮ ಪ್ರಯತ್ನ ಸಾರ್ಥಕವಾಗಲಿದೆ ಎಂದರು.

ಕಾನೂನು ಪುಸ್ತಕಗಳ ಲೇಖಕರಾದ ವಕೀಲ (ನೋಟರಿ) ಬಿ.ಎಸ್.ಪ್ರಶಾಂತ್, 'ಲಾ ಗೈಡ್' ಕನ್ನಡ ಕಾನೂನು ಮಾಸ ಪತ್ರಿಕೆಯ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಮಾತನಾಡಿದರು.

ಮೈಸೂರು ವಕೀಲರ ಸಂಘದ ಕಾರ್ಯದರ್ಶಿ ಎ.ಜಿ.ಸುಧೀರ, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ, ಜಂಟಿ ಕಾರ್ಯದರ್ಶಿಗಳಾದ ಕೆ.ಆರ್.ಚರಣ್ ರಾಜ್, ಬಿ.ವಿ.ವಿನೋದ್, ಖಜಾಂಚಿ ಹೆಚ್.ಬಿ. ಭರತ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರರಿಗೆ ಅಭಿನಂದನೆ



ವಿಧಾನಪರಿಷತ್ತಿಗೆ ಅವಿರೋಧವಾಗಿ ಆಯ್ಕೆಯಾಗಿರುವ ಡಾ.ಯತೀಂದ್ರ ಅವರನ್ನು ಬೆಂಗಳೂರಿನ ಸರ್ಕಾರಿ ವಸತಿ ಗೃಹ ಕಾವೇರಿಯಲ್ಲಿ ಮಾಜಿ ಕಾರ್ಪೋರೇಟರ್‌ಗಳಾದ ಎಂ.ಶಿವಣ್ಣ, ಜಾಕೀರ್ ಪಾಷ, ನಾಗೇಂದ್ರ, ಇಂದಿರಾ ಗಾಂಧಿ ಬ್ಲಾಕ್‌ನ ಮಂಚೇಗೌಡನಕೊಪ್ಪಲು ರವಿ, ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಎಂ.ಮಹೇಶ ಚಿಕ್ಕಲ್ಲೂರು ಇತರರು ಅಭಿನಂದಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜನ್ಮದಿನ ಆಚರಣೆ



ಮೈಸೂರಿನ ಲಾಲ್ ಬಹದ್ದೂರ್ ಶಾಸ್ತ್ರಿನಗರ ಮತ್ತು ಶಾಂತವೇರಿ ಗೋಪಾಲಗೌಡನಗರದ ಡಾ.ಬಿ.ಆರ್. ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಂಬೇಡ್ಕರ್ ಅವರ 133ನೇ ಜನ್ಮದಿನವನ್ನು ಆಚರಿಸಲಾಯಿತು. ಸಂಘದ ಗೌರವಾಧ್ಯಕ್ಷ ಅಹಿಂದ ಜವರಪ್ಪ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಬಿ.ಸಿ. ಮಹದೇವಯ್ಯ, ಉಪಾಧ್ಯಕ್ಷ ಗಂಗಾಧರ್, ಕಾರ್ಯದರ್ಶಿ ಡಿ.ಎಂ.ಅಂಬರೀಶ್, ಖಜಾಂಚಿ ಎಂ.ಮಂಜುನಾಥ್, ಪ್ರಗತಿಪರ ಚಿಂತಕ ಡಾ.ರಾಜೇಂದ್ರಕುಮಾರ್, ಡಾ.ಜಗನ್ನಾಥ್, ಜಾಯಿಂಟ್ ಡೈರೆಕ್ಟರ್ ಗಿರೀಶ್, ಸಂಘದ ನಿರ್ದೇಶಕರಾದ ಎಚ್.ಕೆ. ಜಯರಾಮ್, ರೇವಣ್ಣ, ತಾಂಡವಮೂರ್ತಿ, ಜನಾರ್ಧನ್, ನಟರಾಜ್, ಅಭಿಷೇಕ್ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಸಹಕಾರ ಸಂಘಗಳ ಕಾಯ್ದೆ ತಿದ್ದುಪಡಿ ಸಂಬಂಧಿತ ಅಧ್ಯಯನ ಸಮಿತಿ ಸಭೆ



ಬೆಂಗಳೂರು, ಜೂ.12– ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಸಂಘಗಳ ಕಾಯ್ದೆ 1997, ನಿಯಮಗಳು 2004ಕ್ಕೆ ಸೂಕ್ತ ತಿದ್ದುಪಡಿ ತರುವ ಸಂಬಂಧ ರಚಿಸಿರುವ ಅಧ್ಯಯನ ಸಮಿತಿಯ ಸಭೆಯ ಸಮಿತಿ ಅಧ್ಯಕ್ಷರೂ ಆದ ಶಾಸಕ ಲಕ್ಷ್ಮಣ ಸಂಗಪ್ಪ ಸವದಿ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಕಚೇರಿಯಲ್ಲಿ ಬುಧವಾರ ನಡೆಯಿತು.

ಸಭೆಯಲ್ಲಿ ಸಹಕಾರ ಸಚಿವ ಕೆ.ಎನ್. ರಾಜಣ್ಣ, ಶಾಸಕರೂ ಆದ ಮಹಾಮಂಡಳದ ಅಧ್ಯಕ್ಷ ಜಿ.ಟಿ.ದೇವೇಗೌಡರು, ಮಾಜಿ ಸಚಿವ ಎಸ್.ಆರ್. ಪಾಟೀಲ್, ಶಾಸಕ ಅರಬೈಲ್ ಶಿವರಾಮ್ ಹೆಬ್ಬಾರ್, ಶಾಸಕರು ಹಾಗೂ ಎಸ್‌ಎಲ್‌ಡಿಬಿ ಬ್ಯಾಂಕ್ ಅಧ್ಯಕ್ಷ ಷಡಕ್ಷರಿ, ಮಾರಾಟ ಮಹಾಮಂಡಳದ ಅಧ್ಯಕ್ಷ ಎಂ.ಎನ್.ರಾಜೇಂದ್ರಕುಮಾರ್, ಸಹಕಾರ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್, ನಿಬಂಧಕರಾದ ಕ್ಯಾಪ್ಟನ್ ರಾಜೇಂದ್ರಕುಮಾರ್ ಹಾಗೂ ಇಲಾಖೆಯ ಅಧಿಕಾರಿಗಳು ಸೇರಿದಂತೆ ಇನ್ನಿತರರು ಹಾಜರಿದ್ದರು.

ಜು.29ರಿಂದ ಆ.3ರವರೆಗೆ ವಿಶೇಷ ಲೋಕ್ ಅದಾಲತ್

ಮೈಸೂರು, ಜೂ.12– ಸರ್ವೋಚ್ಚ ನ್ಯಾಯಾಲಯದಿಂದ ವಿಶೇಷ ಲೋಕ್ ಆದಾಲತ್ ಅನ್ನು ಜುಲೈ 29ರಿಂದ ಆಗಸ್ಟ್ 3ರವರೆಗೆ ನಡೆಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆ ಪಕ್ಷಕಾರರುಗಳಿಗೆ ಎದುರುದಾರರ ಜೊತೆ ಪೂರ್ವಭಾವಿ ಲೋಕ್ ಆದಾಲತ್ ಅನ್ನು ನಡೆಸಲು ವಿಡಿಯೋ ಕಾನ್ಸರೆನ್ಸ್ ವ್ಯವಸ್ಥೆ ಮಾಡಲಾಗಿದೆ.

ಎಲ್ಲಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಗಳಲ್ಲಿ ವಿಡಿಯೋ ಕಾನ್ಸರೆನ್ಸ್ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನಿಸಲಾಗಿದ್ದು, ಎಲ್ಲಾ ಪಕ್ಷಕಾರರು ವಿಡಿಯೋ ಕಾನ್ಸರೆನ್ಸ್ ಮೂಲಕ ಸರ್ವೋಚ್ಚ ನ್ಯಾಯಾಲಯವು ನಡೆಸುವ ಪೂರ್ವಭಾವಿ ಲೋಕ್ ಆದಾಲತ್‌ನಲ್ಲಿ ಭಾಗವಹಿಸಲು ಅನುಕೂಲ ಮಾಡಲಾಗಿರುತ್ತದೆ. ಈ ವಿಶೇಷ ಲೋಕ ಅದಾಲತ್‌ನಲ್ಲಿ ರಾಜೀ–ಸಂಧಾನಕ್ಕೆ ಗುರುತಿಸಲಾದ ಪ್ರಕರಣಗಳ ಪಟ್ಟಿಯನ್ನು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ವರದಿಯಾಗಿದ್ದು, ಇದರಿಂದ ಸದರಿ ಪ್ರಕರಣಗಳಲ್ಲಿನ ಎಲ್ಲಾ ಪಕ್ಷಕಾರರು ತಮ್ಮ ವಾಸಸ್ಥಳಗಳ ವ್ಯಾಪ್ತಿಯಲ್ಲಿ ಬರುವ ತಾಲೂಕು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರಗಳಲ್ಲಿ ತೆರೆಯಲಾಗಿರುವ ವಿಡಿಯೋ ಕಾನ್ಸರೆನ್ಸ್ ಕೇಂದ್ರಗಳಿಗೆ ಭೇಟಿ ಕೊಟ್ಟು ಜು.29ರಿಂದ ಆ.3ರವರೆಗೆ ನಡೆಯುವ ವಿಶೇಷ ಲೋಕ್ ಆದಾಲತ್‌ನಲ್ಲಿ ತಮ್ಮ ಪ್ರಕರಣಗಳನ್ನು ಇತ್ಯರ್ಥಪಡಿಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗಾಗಿ WWW.kslsa.kar.nic.in ವೆಬ್‌ಸೈಟ್, NALSA ಸಹಾಯವಾಣಿ ಸಂಖ್ಯೆ: 15100 ಅಥವಾ ಆಯಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಮತ್ತು ತಾಲೂಕು ಕಾನೂನು ಸೇವಾ ಸಮಿತಿಗಳ ಸದಸ್ಯ ಕಾರ್ಯದರ್ಶಿಯವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸದಸ್ಯ ಕಾರ್ಯದರ್ಶಿ ದಿನೇಶ್ ಬಿ.ಜಿ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕಾರ್ಮಿಕರ ಕುರಿತು ಜಾಗೃತಿ



ಅಂತಾರಾಷ್ಟ್ರೀಯ ಬಾಲ ಕಾರ್ಮಿಕ ದಿನಾಚರಣೆ ಅಂಗವಾಗಿ ನಂಜನಗೂಡಿನ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಬಾಲಕಾರ್ಮಿಕರ ಕುರಿತು ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಸಿ.ಆರ್.ದಿನೇಶ್, ಉಪನ್ಯಾಸಕರಾದ ಅಶ್ವತ್ಥ ನಾರಾಯಣ್‌ಗೌಡ, ಜುಡಿತ್ ಲಿಂಗಣ್ಣಸ್ವಾಮಿ, ರಂಗಸ್ವಾಮಿ, ಡಾ.ಟಿ.ಕೆ.ರವಿ, ಸ್ವಾಮಿಗೌಡ, ಪ್ರಕಾಶ್, ದಿನೇಶ್, ನಾಗರಾಜ್ ರೆಡ್ಡಿ, ನಾಗರಾಜ್, ರಾಮಾನುಜಂ, ಸುಮಾ, ಮಾಲತಿ, ರೂಪ, ವಸಂತಕುಮಾರಿ, ನಾಗವೇಣಿ, ಮೋಹನ್‌ಕುಮಾರ್ ಇತರರು ಭಾಗವಹಿಸಿದ್ದರು.


ಕಾವಾ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು: ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಸಂಸ್ಥೆಯ 2024–25 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ವಿ.ಎ. (ದೃಶ್ಯಕಲೆ) ಸ್ನಾತಕ ಪದವಿ ಕೋರ್ಸಿನ ಪ್ರವೇಶಾತಿಗಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್, ಅನ್ವಯಕಲೆ, ಛಾಯಾಚಿತ್ರ ಮತ್ತು ಛಾಯಾಚಿತ್ರ ಪತ್ರಿಕೋದ್ಯಮ, ಕಲಾ ಇತಿಹಾಸ ಕೋರ್ಸ್ಗಳಿಗೆ ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಕಚೇರಿಯಿಂದ ಜೂನ್ 14 ರೊಳಗೆ ಅರ್ಜಿ ಪಡೆದು, ಜೂನ್ 19ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ಪ್ರವೇಶಾತಿ ದಾಖಲಾತಿಗಳ ಪರಿಶೀಲನೆ, ಪ್ರವೇಶ ಪರೀಕ್ಷೆ, ಮೌಖಿಕ ಸಂದರ್ಶನ ಜೂನ್ 20ರಂದು ನಡೆಯಲಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821 2438931 ಅನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಜೂನಿಯರ್ ರೀಸರ್ಚ್ ಫೆಲೋಗಾಗಿ ಅರ್ಜಿ ಆಹ್ವಾನ

ಮೈಸೂರು, ಜೂ.12– ಮೈಸೂರು ವಿಶ್ವವಿದ್ಯಾನಿಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಎಸ್‌ಇಆರ್‌ಬಿ (ಡಿಎಸ್‌ಟಿ) ಯೋಜನೆ ಅಡಿಯಲ್ಲಿ ಮೂರು ವರ್ಷಗಳ ಜೂನಿಯರ್ ರಿಸರ್ಚ್ ಫೆಲೋಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿಗಳನ್ನು ಇಂದಿನಿಂದ 15 ದಿನಗಳೊಳಗೆ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ https://www.uni-mysore.ac.in ನ್ನು ಸಂಪರ್ಕಿಸಬಹುದು ಎಂದು ಮೈಸೂರು ವಿವಿ ಮಾನಸಗಂಗೋತ್ರಿಯ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತೋಟಗಾರಿಕೆ ಬೆಳೆಗಳ ಮಾರುಕಟ್ಟೆ ಲಾಭ ತಿಳಿಸುವಲ್ಲಿ ಯಶಸ್ವಿಯಾದ ಬಾನುಲಿ ಕಾರ್ಯಕ್ರಮ: ಪಿ.ಎಂ ಸೊಬರದ



ಮೈಸೂರು, ಜೂ.12– ತೋಟಗಾರಿಕೆ ಬೆಳೆಗಳನ್ನು ಬೆಳೆದು ರೈತರು ಯಾವ ರೀತಿ ಮಾರುಕಟ್ಟೆಯಲ್ಲಿ ಲಾಭವನ್ನು ಪಡೆಯಬಹುದು ಎಂಬುದರ ಬಗ್ಗೆ ರೈತರಿಗೆ ಮಾಹಿತಿ ತಲುಪಿಸುವಲ್ಲಿ ಹಣ್ಣು–ಹೊನ್ನು ಬಾನುಲಿ ಕಾರ್ಯಕ್ರಮ ಯಶಸ್ವಿಯಾಗಿದೆ ಎಂದು ತೋಟಗಾರಿಗೆ ಅಪರ ನಿರ್ದೇಶಕ (ತಾಳೆ ಬೆಲೆ) ಮತ್ತು (ಕ್ಷೇತ್ರ ಮತ್ತು ನರ್ಸರಿಂಗ್) ಡಾ.ಪಿ ಎಂ ಸೊಬರದ ಪ್ರಶಂಸೆ ವ್ಯಕ್ತಪಡಿಸಿದರು.

ತೋಟಗಾರಿಕೆ ಇಲಾಖೆ, ಮೈಸೂರಿನ ತೋಟಗಾರಿಕೆ ಮಹಾವಿದ್ಯಾಲಯ ಹಾಗೂ ಆಕಾಶವಾಣಿಯ ವತಿಯಿಂದ ಕರ್ಜನ್ ಪಾರ್ಕ್‌ನಲ್ಲಿರುವ ಎಂ.ಹೆಚ್. ಮರೀಗೌಡ ಸಭಾಂಗಣದಲ್ಲಿ ನಡೆದ 'ಹಣ್ಣು–ಹೊನ್ನು' ತೋಟಗಾರಿಕೆ ಬೆಳೆಗಳಲ್ಲಿ ಸಮಗ್ರ ಬೇಸಾಯ ಬಾನುಲಿ ಸರಣಿ ಕಾರ್ಯಕ್ರಮದ ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಆಕಾಶವಾಣಿ ಎಂದರೆ ಒಂದು ಕ್ರಿಯೇಟಿವಿಟಿ ಇರುತ್ತದೆ. ಅದರಲ್ಲಿ ಜನರಿಗೆ ಹಾಗೂ ರೈತರಿಗೆ ಉಪಯುಕ್ತವಾಗುವಂತಹ ಮಾಹಿತಿಯನ್ನು ವಿಭಿನ್ನ ರೀತಿಯ ಕಾರ್ಯಕ್ರಮಗಳ ಮೂಲಕ ತಿಳಿಸಲಾಗುತ್ತದೆ. ಈ ನಿಟ್ಟಿನಲ್ಲಿ ರೈತರಿಗೆ ಸಹಾಯವಾಗುವಂತೆ ಸತತ 46 ಬಾನೂಲಿ ಸರಣಿ ಕಾರ್ಯಕ್ರಮವನ್ನು ಮಾಡಿರುವುದರ ಪರಿಣಾಮವಾಗಿ ಇಂದು ಸಾಕಷ್ಟು ರೈತರು ಸಂತೋಷ ವ್ಯಕ್ತಪಡಿಸಿರುವುದನ್ನು ಕಾಣಬಹುದಾಗಿದೆ ಎಂದರು.

ಕರ್ನಾಟಕದಲ್ಲಿ ಅದರಲ್ಲೂ ವಿಭಿನ್ನ ತೋಟಗಾರಿಕೆ ಬೆಳೆಗಳನ್ನು ಹೊಂದಿರುವ ಮೈಸೂರಿನಲ್ಲಿ ತೋಟಗಾರಿಕೆ ಕೃಷಿ ಇನ್ನಷ್ಟು ಅಭಿವೃದ್ಧಿಯಾಗಲಿ. ಮುಂಬರುವ ದಿನಗಳಲ್ಲಿ ಈ ರೀತಿಯ ಇನ್ನಷ್ಟು ಹೆಚ್ಚಿನ ಕಾರ್ಯಕ್ರಮಗಳನ್ನು ಆಯೋಜಿಸಿ ಸದಾ ರೈತರಿಗೆ ಯಾವುದೇ ರೀತಿಯ ಮಾಹಿತಿಯನ್ನು ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮ ನಿರ್ವಾಹಕರಾದ ಆಕಾಶವಾಣಿಯ ಕೇಶವ ಮೂರ್ತಿ.ಎನ್ ಮಾತನಾಡಿ, ಆಕಾಶವಾಣಿಯಲ್ಲಿ ಪ್ರತಿ ಸೋಮವಾರದಂದು ಬೆಳಗ್ಗೆ 6.50 ರಿಂದ 7.30 ಗಂಟೆಯವರೆಗೆ ಹಣ್ಣು–ಹೊನ್ನು ಕಾರ್ಯಕ್ರಮವನ್ನು ತಾಂತ್ರಿಕ ಅಧಿಕಾರಿಗಳು, ತೋಟಗಾರಿಕಾ ಅಧಿಕಾರಿಗಳು ಹಾಗೂ ಅನುಭವಿ ರೈತರಿಂದ 46 ಸರಣಿಯಲ್ಲಿ ಯಶಸ್ವಿಯಾಗಿ ನಡೆಸಲಾಗಿದ್ದು, ಇದಕ್ಕೆ ಸಾವಿರಾರು ಜನರಿಂದ ಉತ್ತಮ ಪ್ರತಿಕ್ರಿಯೆ ಬರುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನು ಅನೇಕ ಉಪಯುಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಸವಿವರವಾಗಿ ಮಾಹಿತಿ ನೀಡಿದರು.

ತೋಟಗಾರಿಕೆ ಮಹಾವಿದ್ಯಾಲಯದ ಡೀನ್ ಡಾ. ಮಂಜುನಾಥ್ ಮಾತನಾಡಿ, ರೇಡಿಯೋ ಎನ್ನುವುದು ನಮ್ಮ ಸಂಸ್ಕೃತಿಯ ಭಾಗ. ಇತ್ತೀಚಿನ ದಿನಗಳಲ್ಲಿ ಮೊಬೈಲ್ ಮೇಲಿನ ವ್ಯಾಮೋಹದಿಂದ ಜನರು ರೇಡಿಯೋ ಆಲಿಸುವುದನ್ನು ಕಡಿಮೆ ಮಾಡಿದ್ದರು. ಆದರೆ, ಕೃಷಿಗೆ ಸಂಬಂಧಿಸಿದಂತೆ ಆಯೋಜಿಸುವ ಕಾರ್ಯಕ್ರಮಗಳಲ್ಲಿ ರೇಡಿಯೋ ಮೇಲುಗೈ ಸಾಧಿಸಿದೆ ಎಂಬುದಕ್ಕೆ ಈ ಕಾರ್ಯಕ್ರಮ ಉದಾಹರಣೆಯಾಗಿದೆ. ಈ ರೀತಿಯ ಕಾರ್ಯಕ್ರಮಗಳು ಶೇಕಡ 100 ರಷ್ಟು ಅಲ್ಲದಿದ್ದರೂ ಅರ್ಧದಷ್ಟಾದರೂ ರೈತರನ್ನು ತಲುಪುವಂತೆ ಮಾಡಬೇಕು. ಅದಕ್ಕೆ ರೈತರು ಕೈಜೋಡಿಸುವುದು ಬಹಳ ಮುಖ್ಯ ಎಂದು ಹೇಳಿದರು.

ಜಂಟಿ ನಿರ್ದೇಶಕರ ಕಚೇರಿಯ ಉಪ ನಿರ್ದೇಶಕ ರುದ್ರೇಶ್ ಮಾತನಾಡಿ, ತೋಟಗಾರಿಕೆ ಇಲಾಖೆಯಲ್ಲಿ ದೊರಕುವ ಯೋಜನೆಗಳ ಬಗ್ಗೆ ಕೇವಲ 30ರಷ್ಟು ರೈತರಿಗೆ ಮಾತ್ರ ಮಾಹಿತಿ ಇದೆ. ಇನ್ನುಳಿದ 70ರಷ್ಟು ರೈತರಿಗೆ ಯಾವುದೇ ಮಾಹಿತಿ ತಿಳಿದಿರುವುದಿಲ್ಲ ಹಾಗಾಗಿ ರೇಡಿಯೋ ಕಾರ್ಯಕ್ರಮಗಳ ಮೂಲಕ ಹಾಗೂ ತರಬೇತಿ ಕಾರ್ಯಾಗಾರಗಳ ಮೂಲಕ ರೈತರಿಗೆ ಹೆಚ್ಚಿನ ಮಾಹಿತಿಯನ್ನು ತಲುಪಿಸಲು ಪ್ರಯತ್ನಿಸಬೇಕು ಎಂದರು. ಕಾರ್ಯಕ್ರಮದಲ್ಲಿ ತೋಟಗಾರಿಕೆ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕ ಎಚ್.ಎಂ.ನಾಗರಾಜು, ತೋಟಗಾರಿಕೆ ಇಲಾಖೆ ಉಪನಿರ್ದೇಶಕ (ಜಿ.ಪಂ) ಮಂಜುನಾಥ ಅಂಗಡಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವ ರಕ್ತದಾನಿ ದಿನಾಚರಣೆ: ವಿವಿಧ ಸಂಘಟನೆಯಿಂದ ಸ್ವಯಂಪ್ರೇರಿತ ರಕ್ತದಾನ



ಮೈಸೂರು, ಜೂ. 12– ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ರಕ್ತದಾನ ಮಹಾದಾನ ಗೋ ಭಕ್ತ ಸಂಘಟನೆ ಟ್ರಸ್ಟ್, ಜೈನ್ ಇಂಟರ್ ನ್ಯಾಷನಲ್ ಟ್ರೇಡ್ ಆರ್ಗನೈಜೇಷನ್ ಮತ್ತು ಕರ್ನಾಟಕ ಕುಮಾವತ್ ಸಮಾಜದ ವತಿಯಿಂದ 50ಕ್ಕೂ ಹೆಚ್ಚು ಮಂದಿ ಸ್ವಯಂಪ್ರೇರಿತ ರಕ್ತದಾನ ಮಾಡುವ ಮೂಲಕ ವಿಶ್ವ ರಕ್ತದಾನಿಗಳ ದಿನಾಚರಣೆಯನ್ನು ವಿಶೇಷವಾಗಿ ಆಚರಿಸಿದರು.

ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ದಾನಗಳಲ್ಲಿ ರಕ್ತದಾನ ಶ್ರೇಷ್ಠ ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಯು ರಕ್ತದಾನ ಮಾಡುವ ಉತ್ಸುಕತೆ ತೋರಬೇಕು. ರಕ್ತದಾನ ಮಾಡುವುದರಿಂದ ಇನ್ನೊಬ್ಬರ ಜೀವ ಉಳಿಸುವ ಮಹಾವಕಾಶದ ಜತೆಗೆ ಆರೋಗ್ಯದಲ್ಲಿ ಹಲವು ಲಾಭಗಳಿವೆ. ರಕ್ತದಾನದಿಂದ ಮನುಷ್ಯ ದುರ್ಬಲನಾಗುತ್ತಾನೆ ಎನ್ನುವ ತಪ್ಪು ಕಲ್ಪನೆಯಿದೆ. ಆದರೆ, ಹೃದಯದ ಆರೋಗ್ಯ ಸುಧಾರಿಸುತ್ತದೆ. ತೂಕ ನಿಯಂತ್ರಿಸಬಹುದು, ಕ್ಯಾನ್ಸರ್‌ನಂತಹ ರೋಗಗಳು ಬರುವುದನ್ನು ತಪ್ಪಿಸಬಹುದು. ಅದು ಮನಸ್ಸಿನ ಮೇಲೆ ಧನಾತ್ಮಕ ಪರಿಣಾಮ ಬೀರಲಿದೆ ಎಂದರು.

ಪರಿಸರ ಜಾಗೃತಿ ವೇದಿಕೆ ಅಧ್ಯಕ್ಷ ಬನ್ನೂರು ಡಾ.ಮಹೇಂದ್ರ ಸಿಂಗ್ ಕಾಳಪ್ಪ ಮಾತನಾಡಿ, ಅನೇಕ ಸಂಘಟನೆ ಮತ್ತು ಸರಕಾರೇತರ ಸಂಘಟನೆಗಳ ಶ್ರಮದಿಂದ ಕಳೆದ ದಶಕಗಳಲ್ಲಿ ರಕ್ತದಾನದ ಮಹತ್ವದ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿದೆ. ಆದರೆ ಈ ಜಾಗೃತಿ ಇನ್ನೂ ಹೆಚ್ಚು ವ್ಯಾಪಕವಾಗುವ ಅವಶ್ಯಕತೆ ಇದೆ. ಈ ಹಿಂದಿನ ದಿನಮಾನಗಳಿಗೆ ಹೋಲಿಸಿದ್ದಲ್ಲಿ ಕಳೆದ ದಶಕದಲ್ಲಿ ರಕ್ತದಾನ ಮಹತ್ವದ ಬಗ್ಗೆ ಜಾಗೃತಿ ಮೂಡಿದೆ. ಕಾಲೇಜುಗಳ ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಕೆಡೆಟ್‌ಗಳಿಗೆ ಸೀಮಿತವಾಗಿದ್ದ ರಕ್ತದಾನ ಶಿಬಿರ ಇಂದು ಅನೇಕ ಸರಕಾರೇತರ ಸಂಘಟನೆಗಳು ಮತ್ತು ಯುವಕ ಮಂಡಳಗಳು ರಕ್ತದಾನ ಶಿಬಿರ ಆಯೋಜಿಸುತ್ತಿರುವುದು ಶ್ಲಾಘನೀಯ. ಸಂಗೀತ ಆಲಿಸುವುದು, ಪ್ರವಾಸ ಮತ್ತು ಇತರ ಹವ್ಯಾಸಗಳಂತೆ ಇತ್ತೀಚೆಗೆ ನಿಯಮಿತವಾಗಿ ರಕ್ತದಾನ ಮಾಡುವುದು ಸಹ ಕೆಲ ಯುವಕರ ಹವ್ಯಾಸವಾಗಿದೆ. ಈ ಬಗೆಯ ಸಕಾರಾತ್ಮಕ ಬೆಳವಣಿಗೆಗಳು ಆರೋಗ್ಯ ಕ್ಷೇತ್ರದ ಬಹು ದೊಡ್ಡ ಸವಾಲಾಗಿದ್ದ ರಕ್ತದ ಕೊರತೆ ನೀಗಿಸುತ್ತಿವೆ ಎಂದರು.

ಈ ಸಂದರ್ಭದಲ್ಲಿ ಜೀತೋ ಸಂಘಟನೆ ಮೈಸೂರು ಘಟಕದ ಅಧ್ಯಕ್ಷರಾದ ಕಾಂತಿಲಾಲ್ ಚೌಹಾನ್, ಕಾರ್ಯದರ್ಶಿ ಗೌತಮ್ ಸಾಲೇಚಾ ರಕ್ತದಾನ ಮಹಾದಾನ ಗೋ ಭಕ್ತ ಸಂಘಟನೆ ಸಂಸ್ಥಾಪಕ ಪಿ.ಕರ್ಮರಾಮ್ ಸಿರವಿ, ಟ್ರಸ್ಟ್ ಅಧ್ಯಕ್ಷರಾದ ಬಗ್ದರಾಮ್ ಕುಮಾವತ್, ಕಾರ್ಯದರ್ಶಿ ಚಿರಂಜೀಲಾಲ್ ಕುಮಾವತ್, ಪತ್ರಿಕೆ ವರದಿಗಾರ ಜನಕ್ ಸಿಂಗ್ ಹಾಗೂ ಇನ್ನಿತರರು ಭಾಗವಹಿಸಿದ್ದರು.

ವಿಪತ್ತು ನಿರ್ವಹಣಾ ಕೇಂದ್ರ ಆರಂಭ

ಮಡಿಕೇರಿ, ಜೂ.12– ಮುಂಗಾರು ಮಳೆಗಾಲ ಹಿನ್ನೆಲೆಯಲ್ಲಿ ಕೊಡಗು ಜಿಲ್ಲೆಯಲ್ಲಿ ಪ್ರಕೃತಿ ವಿಕೋಪ ಮಾಹಿತಿ ನೀಡಲು ಸಾರ್ವಜನಿಕರಿಗೆ ಅನುಕೂಲವಾಗುವಂತೆ ವಿಪತ್ತು ನಿರ್ವಹಣಾ ಕೇಂದ್ರ ತೆರೆಯಲಾಗಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ತಿಳಿಸಿದ್ದಾರೆ.

ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ: 08272–221077, 221099, ವಾಟ್ಸ್‌ಆ್ಯಪ್ ನಂ: 8550001077ಕ್ಕೆ ಪ್ರಕೃತಿ ವಿಕೋಪ ಮಾಹಿತಿ ನೀಡಬಹುದು.

ತಾಲೂಕು ಕೇಂದ್ರಗಳು: ಮಡಿಕೇರಿ ತಾಲೂಕು ವಿಪತ್ತು ನಿರ್ವಹಣಾ ಕೇಂದ್ರದ ದೂ.ಸಂ: 08272–228396, ವಿರಾಜಪೇಟೆ ದೂ.ಸಂ: 08274–257328, ಸೋಮವಾರಪೇಟೆ ದೂ.ಸಂ: 08276–282045, ಕುಶಾಲನಗರ ದೂ.ಸಂ: 08276–200198 ಹಾಗೂ ಪೊನ್ನಂಪೇಟೆ ತಾಲೂಕು ಕೇಂದ್ರದ ದೂ.ಸಂ: 08274–249700 ಅನ್ನು ಸಾರ್ವಜನಿಕರು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ವಾಹನ ಸವಾರರಿಗೆ ರಸ್ತೆ ಸುರಕ್ಷತೆ ಜಾಗೃತಿ



ನಾಪೋಕ್ಲುವಿನಲ್ಲಿ ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ವಾಹನ ಸವಾರರಿಗೆ ರಸ್ತೆ ಸುರಕ್ಷತೆ ಜಾಗೃತಿ ಮೂಡಿಸಲಾಯಿತು.

ಮಡಿಕೇರಿ, ಜೂ.12– ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಲಾಯಿಸಿ ಹಲವರು ಅಪಘಾತಕ್ಕೀಡಾಗಿ ಜೀವವನ್ನೇ ಕಳೆದುಕೊಳ್ಳುತ್ತಿದ್ದಾರೆ. ಇನ್ನು ಕೆಲವರು ಶಾಶ್ವತವಾದ ಅಂಗವಿಕಲತೆ ಅನುಭವಿಸುತ್ತಿದ್ದಾರೆ. ಇದನ್ನು ನಿಯಂತ್ರಿಸಲು ಜಿಲ್ಲಾ ಪೊಲೀಸ್ ಇಲಾಖೆ ಮುಂಜಾಗ್ರತಾ ಕ್ರಮವಾಗಿ ನಾಪೋಕ್ಲುವಿನಲ್ಲಿ ಹೆಲ್ಮೆಟ್ ಧರಿಸದೆ, ಸೀಟ್ ಬೆಲ್ಟ್ ಹಾಕದ ವಾಹನ ಸವಾರರಿಗೆ ನಾಪೋಕ್ಲು ಪೊಲೀಸ್ ಠಾಣಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ತಪಾಸಣೆ ನಡೆಸುವ ಮೂಲಕ ಜಾಗೃತಿ ಮೂಡಿಸಲಾಯಿತು.

ನಾಪೋಕ್ಲು ಸೇರಿದಂತೆ ಠಾಣೆ ವ್ಯಾಪ್ತಿಯ ವಿವಿಧೆಡೆ ರಸ್ತೆ ಸುರಕ್ಷತಾ ನಿಯಮ ಉಲ್ಲಂಘಿಸಿದ ಸವಾರರನ್ನು ತಪಾಸಣೆ ಮೂಲಕ ರಸ್ತೆ ಸುರಕ್ಷತೆ ಪಾಠ ಹೇಳಿದ ಠಾಣಾಧಿಕಾರಿ ಮಂಜುನಾಥ್, ಬಳಿಕ ದಂಡದ ಬಿಸಿ ಮುಟ್ಟಿಸಿ ಮುಂದೆ ಈ ರೀತಿ ರಸ್ತೆ ಸಂಚಾರ ನಿಯಮ ಉಲ್ಲಂಘಿಸದಂತೆ ಎಚ್ಚರಿಕೆ ನೀಡಿದರು. ನಾಪೋಕ್ಲು ವ್ಯಾಪ್ತಿಯಲ್ಲಿ 'ಡ್ರಿಂಕ್ ಅಂಡ್ ಡ್ರೈವ್' ಮತ್ತು ಅಪ್ರಾಪ್ತರ ವಾಹನ ಚಾಲನೆ ಅಧಿಕವಾಗಿದ್ದು, ಈ ಬಗ್ಗೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಹಿಂದೆ ಸಾರ್ವಜನಿಕರು ಒತ್ತಾಯಿಸಿದ್ದರು. ಇದಕ್ಕೆ ಕಡಿವಾಣ ಹಾಕಲು ಮುಂದಾದ ಪೊಲೀಸರು, ನಾಪೋಕ್ಲು ವ್ಯಾಪ್ತಿಯ ವಿವಿಧ ಶಾಲಾ–ಕಾಲೇಜುಗಳ ಆವರಣದಲ್ಲಿ ಪೊಲೀಸ್ ಸಿಬ್ಬಂದಿ ನೇಮಿಸಿ ಅಪ್ರಾಪ್ತ ವಾಹನ ಚಾಲನೆ, ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಾಲನೆ, ಅತಿ ವೇಗದ ಚಾಲನೆ, ಮೊಬೈಲ್ ಬಳಸಿ ಅಜಾಗರೂಕತೆಯ ಚಾಲನೆ ಮಾಡುವ ಸವಾರರನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದು ಕ್ರಮಕ್ಕೆ ಮುಂದಾಗಿದ್ದಾರೆ.

ಪೋಷಕರು ತಮ್ಮ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಾಹನಗಳನ್ನು ನೀಡಿದರೆ ಮುಂದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಠಾಣಾಧಿಕಾರಿ ಮಂಜುನಾಥ್ ಎಚ್ಚರಿಕೆ ನೀಡಿದರು.

ದೌರ್ಜನ್ಯ ಪ್ರಕರಣ: ನಾಲ್ವರ ಬಂಧನ

ಸುಂಟಿಕೊಪ್ಪ, ಜೂ.12– ಸಮೀಪದ ಕಂಬಿಬಾಣೆಯಲ್ಲಿ ವ್ಯಕ್ತಿಯ ಮೇಲೆ ಹಲ್ಲೆ, ಜಾತಿ ನಿಂದನೆ ಹಾಗೂ ದೌರ್ಜನ್ಯ ಎಸಗಿದ ಪ್ರಕರಣ ಸಂಬಂಧ ನಾಲ್ವರು ಆರೋಪಿಗಳನ್ನು ಸುಂಟಿಕೊಪ್ಪ ಪೊಲೀಸರು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಕಂಬಿಬಾಣೆ ಗ್ರಾಮದ ಪ್ರವೀಣ್, ಚಿರಾಗ್, ಶಶಾಂಕ್, ಹರೀಶ್ ಬಂಧಿತರು. ಈ ನಾಲ್ವರು ಭಾನುವಾರ ಕಂಬಿಬಾಣೆ ಸಮೀಪದ ಭೂದಾನ ಪೈಸಾರಿ ನಿವಾಸಿಯಾದ ಬಸವರಾಜ್ ಮೇಲೆ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿ ದೌರ್ಜನ್ಯ ಎಸಗಿದ್ದಾರೆ ಎಂದು ಸುಂಟಿಕೊಪ್ಪ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಮಕ್ಕಳು ಮನೆಯಲ್ಲಿ ಕೆಲಸ ಮಾಡುವುದು ತಪ್ಪಲ್ಲ, ಶಾಲೆಗೆ ಹೋಗುವುದು ತಪ್ಪಿಸಬಾರದು

ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ವಕೀಲ ಯಾಲದಾಳು ಮನೋಜ್ ಬೋಪಯ್ಯ ಸಲಹೆ



ಮಡಿಕೇರಿಯ ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಎಸ್.ಎಲ್.ಹರ್ಷವರ್ಧನ್ ಪ್ರತಿಜ್ಞಾವಿಧಿ ಬೋಧಿಸಿದರು.

ಮಡಿಕೇರಿ, ಜೂ.12–ಹದಿನಾಲ್ಕು ವರ್ಷದೊಳಗಿನ ಮಕ್ಕಳು ಶಿಕ್ಷಣದಿಂದ ವಂಚಿತರಾಗದೇ, ಶಾಲೆಯಲ್ಲಿ ಓದಿಕೊಂಡು ಕುಟುಂಬದವರೊಂದಿಗೆ ಕೃಷಿ ಹಾಗೂ ಮನೆ ಕೆಲಸಗಳನ್ನು ಮಾಡಿದರೆ ಬಾಲ ಕಾರ್ಮಿಕ ಪದ್ಧತಿ ಆಗುವುದಿಲ್ಲ ಎಂದು ವಕೀಲ ಯಾಲದಾಳು ಮನೋಜ್ ಬೋಪಯ್ಯ ಮಾಹಿತಿ ನೀಡಿದರು.

ನಗರದ ಗಾಂಧಿ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ, ಸಮಾಜ ಕಲ್ಯಾಣ, ಪೊಲೀಸ್ ಇಲಾಖೆ ಹಾಗೂ ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ಮಾತನಾಡಿದ ಅವರು, ನಾವು ಸಹ ಶಿಕ್ಷಣದ ಜೊತೆ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಮೇಲೆ ಬಂದವರು. ಅದ್ದರಿಂದ ಮನೆಯಲ್ಲಿ ಕೆಲಸ ಮಾಡುವುದು ತಪ್ಪಲ್ಲ. ಆದರೆ, ಶಾಲೆಗೆ ಹೋಗುವುದನ್ನು ತಪ್ಪಿಸಬಾರದು. ಮಕ್ಕಳ ಆರೋಗ್ಯ ಮತ್ತು ಶಿಕ್ಷಣಕ್ಕೆ ಪ್ರಥಮ ಆದ್ಯತೆ ನೀಡಬೇಕು ಎಂದರು.

ಮಕ್ಕಳನ್ನು ಅಪಾಯಕಾರಿ ಕೆಲಸಗಳಲ್ಲಿ ತೊಡಗಿಸಿಕೊಳ್ಳದಂತೆ ಗಮನಹರಿಸಬೇಕು. ಸ್ವಾತಂತ್ರ್ಯ ನಂತರ ರಾಜ್ಯ ನಿರ್ದೇಶಕ ತತ್ವಗಳಲ್ಲೂ ಬಾಲ ಕಾರ್ಮಿಕ ಪದ್ಧತಿ ವಿರುದ್ಧ ಹೇಳಲಾಗಿದೆ. 1986ರಲ್ಲೂ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಸಂಬಂಧಿಸಿದಂತೆ ವಿವರಿಸಲಾಗಿದೆ. ಹಾಗೆಯೇ 2016ರಲ್ಲೂ ಬಾಲಕಾರ್ಮಿಕ ಪದ್ಧತಿ ವಿರೋಧ ಕಾಯ್ದೆ ಜಾರಿಗೆ ಬಂದಿದೆ ಎಂದು ತಿಳಿಸಿದರು.

ಭಾರತ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಯತ್ತ ಹೆಜ್ಜೆ ಹಾಕುತ್ತಿದ್ದು, ಆ ದಿಸೆಯಲ್ಲಿ ಮತ್ತಷ್ಟು ಪರಿಣಾಮಕಾರಿ ಕಾರ್ಯಗಳು ಆಗಬೇಕಿದೆ. ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಪ್ರತಿಯೊಬ್ಬರೂ ಬದ್ಧರಾಗಿರಬೇಕು. ಸದೃಢ ಸಮಾಜ ನಿರ್ಮಾಣಕ್ಕೆ ಬಾಲಕಾರ್ಮಿಕ ಪದ್ಧತಿ ಒಂದು ಪಿಡುಗಾಗಿದ್ದು, ಇದನ್ನು ತೊಲಗಿಸಬೇಕು. ದೇಶ ಕಟ್ಟಲು ಎಲ್ಲರೂ ಪಣತೊಡಬೇಕು ಎಂದು ಹೇಳಿದರು.

ಜಿಪಂ ಸಿಇಒ ವರ್ಣಿತ್ ನೇಗಿ ಮಾತನಾಡಿ, ಬಾಲಕಾರ್ಮಿಕ ಪದ್ಧತಿ ಕೆಟ್ಟದಾಗಿದ್ದು, ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸರ್ಕಾರದ ಜೊತೆ ಸರ್ಕಾರೇತರ ಸಂಸ್ಥೆಗಳು ಕೈಜೋಡಿಸಬೇಕು. ಹಾಗಾದಾಗ ಮಾತ್ರ ಈ ಪದ್ಧತಿ ನಿರ್ಮೂಲನೆ ಮಾಡಲು ಸಾಧ್ಯ ಎಂದರು.

ಇದೇ ವೇಳೆ ಬಾಲಕಾರ್ಮಿಕ ಯೋಜನಾ ಸೊಸೈಟಿ ಸದಸ್ಯ ಕಾರ್ಯದರ್ಶಿ ಎಸ್.ಎಲ್.ಹರ್ಷವರ್ಧನ್, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು ಪ್ರತಿಜ್ಞಾವಿಧಿ ಬೋಧಿಸಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷ ಹೊಸಮನಿ ಪುಂಡಲಿಕ, ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಎಸ್.ಬಿ.ಜಯಲಕ್ಷ್ಮಿ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಂದರ್‌ರಾಜ್, ಉಪ ವಿಭಾಗಾಧಿಕಾರಿ ವಿನಾಯಕ್ ನರ್ವಾಡೆ, ಡಿಡಿಪಿಐ ಮಟ್ಟರಾಜು, ಸಮಗ್ರ ಗಿರಿಜನ ಯೋಜನಾಧಿಕಾರಿ ಎಸ್.ಹೊನ್ನೇಗೌಡ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ನಟರಾಜು, ತಾಲೂಕು ಕಾರ್ಮಿಕಾಧಿಕಾರಿ ಎಂ.ಎಂ.ಯತ್ನಟ್ಟಿ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ನಿರ್ದೇಶಕ ಆರ್.ಶೀರಾಝ್ ಅಹ್ಮದ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಬಿ.ಎಸ್.ಜಯಪ್ಪ ಇತರರಿದ್ದರು.

> 14 ವರ್ಷದೊಳಗಿನ ಮಕ್ಕಳನ್ನು ಕೆಲಸಕ್ಕೆ ದುಡಿಸುವುದರಿಂದ ಅವರ ಬೌದ್ಧಿಕ ಬೆಳವಣಿಗೆ ತೊಂದರೆಯಾಗಲಿದೆ. ಮಕ್ಕಳಲ್ಲಿ ಒಳ್ಳೆಯ ನಡವಳಿಕೆ ಮತ್ತು ಉತ್ತಮ ವ್ಯಕ್ತಿತ್ವ ರೂಪಿಸಲು ಕಡ್ಡಾಯವಾಗಿ ಶಿಕ್ಷಣ ಕೊಡಿಸುವುದು ಅತ್ಯಗತ್ಯ. ಬಡತನ, ಅಜ್ಞಾನದಿಂದ ಮಕ್ಕಳನ್ನು ಕೂಲಿಗೆ ದೂಡುವುದು, ಎಷ್ಟೇ ಬಡತನವಿದ್ದರೂ ಮಕ್ಕಳಿಗೆ ಶಿಕ್ಷಣ ನೀಡಬೇಕು.
> –ದೊಡ್ಡೇಗೌಡ, ಕ್ಷೇತ್ರ ಶಿಕ್ಷಣಾಧಿಕಾರಿ

ಹೆಲ್ಮೆಟ್ ಧರಿಸಿ, ಜೀವ ಉಳಿಸಿಕೊಳ್ಳಿ



ವಿರಾಜಪೇಟೆ ಸಂತ ಅನ್ನಮ್ಮ ಕಾಲೇಜಿನಲ್ಲಿ ಆಯೋಜಿಸಿದ್ದ ರಸ್ತೆ ಸುರಕ್ಷತಾ ಅರಿವು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.

ವಿರಾಜಪೇಟೆ, ಜೂ.12– ದ್ವಿಚಕ್ರ ವಾಹನ ಸವಾರರು ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ, ತಮ್ಮ ಅಮೂಲ್ಯ ಜೀವವನ್ನು ಉಳಿಸಿಕೊಳ್ಳಬೇಕು ಎಂದು ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್ ಸಲಹೆ ನೀಡಿದರು.

ನಗರದ ಸಂತ ಅನ್ನಮ್ಮ ಕಾಲೇಜಿನಲ್ಲಿ ಪಿಯುಸಿ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷಾ ಸಂಚಾರ ನಿಯಮ ಕುರಿತು ಆಯೋಜಿಸಿದ್ದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಾಹನ ಚಾಲನೆ ಮಾಡುವಾಗ ಚಾಲಕರು ಯಾವುದೇ ಕಾರಣಕ್ಕೂ ಮೊಬೈಲ್ ಬಳಸಬಾರದು. ಇದರಿಂದ ಎಷ್ಟೋ ಜನರು ತಮ್ಮ ಜೀವವನ್ನೇ ಕಳೆದುಕೊಂಡಿದ್ದಾರೆ. ಜೊತೆಗೆ ಹೆಚ್ಚು ಅಪಘಾತಗಳು ನಡೆಯುತ್ತಿವೆ. ಆದ್ದರಿಂದ ವಿದ್ಯಾರ್ಥಿಗಳು ರಸ್ತೆ ಸಂಚಾರ ನಿಯಮವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು.

ಪೊಲೀಸ್ ವೃತ್ತ ನಿರೀಕ್ಷಕ ಶಿವರುದ್ರ ಮಾತನಾಡಿ, ಚಾಲಕರು ವಾಹನಗಳ ದಾಖಲೆಗಳನ್ನು ಕಡ್ಡಾಯವಾಗಿ ಇಟ್ಟುಕೊಳ್ಳಬೇಕು. ಕಾರು ಚಾಲನೆ ವೇಳೆ ಸೀಟ್ ಬೆಲ್ಟ್ ಬಳಸುವುದು ಬಹಳ ಮುಖ್ಯ. ರಸ್ತೆಯಲ್ಲಿ ಗುಂಡಿಗಳು, ಎದುರಿಗೆ ಬರುವ ವಾಹನಗಳು, ಮಂಜುಕವಿದ ವಾತಾವರಣ ಇತ್ಯಾದಿ ಕಾರಣಗಳಿಂದ ಹೆಚ್ಚು ಅಪಘಾತಗಳು ಸಂಭವಿಸುತ್ತವೆ. ಆದ್ದರಿಂದ ವೇಗವಾಗಿ ಚಾಲನೆ ಮಾಡುವುದು ಅಪಾಯ ಎಂದರು.

ನಗರ ಪೊಲೀಸ್ ಠಾಣಾಧಿಕಾರಿ ರವಿಂದ್ರ, ವಾಹನ ಅಪಘಾತಗಳ ಸಾಕ್ಷ್ಯಚಿತ್ರ ಮೂಲಕ ರಸ್ತೆ ಸುರಕ್ಷತಾ ಸಂಚಾರ ನಿಯಮ ಕುರಿತು ಮಾಹಿತಿ ನೀಡಿದರು. ಸಂತ ಅನ್ನಮ್ಮ ಕಾಲೇಜಿನ ಪ್ರಾಂಶುಪಾಲ ಮದುಲೈ ಮುತ್ತು, ಉಪನ್ಯಾಸಕ ಕೃಷ್ಣರಾಜ್ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಪಾದಚಾರಿ ಸಾವಿಗೆ ಕಾರಣನಾದ ಅಪ್ರಾಪ್ತ

ಮೈಸೂರಿನ ವೀಕ್ಷಣಾಲಯಕ್ಕೆ ಕಳುಹಿಸುವಂತೆ ನ್ಯಾಯಾಲಯ ಆದೇಶ

ಮಡಿಕೇರಿ, ಜೂ.12– ದ್ವಿಚಕ್ರ ವಾಹನ ಚಲಾಯಿಸಿ ಪಾದಚಾರಿಯ ಸಾವಿಗೆ ಕಾರಣನಾದ ಅಪ್ರಾಪ್ತನನ್ನು 11 ದಿನಗಳವರೆಗೆ ಮೈಸೂರಿನ ವೀಕ್ಷಣಾಲಯಕ್ಕೆ ಕಳುಹಿಸಿಕೊಡುವಂತೆ ಸೋಮವಾರಪೇಟೆ ಜೆಎಂಎಫ್‌ಸಿ ನ್ಯಾಯಾಲಯ ಆದೇಶ ಹೊರಡಿಸಿದೆ.

ಸಕಲೇಶಪುರ ತಾಲೂಕಿನ ಚಂಗಡಹಳ್ಳಿ ಗ್ರಾಮದ ನಿವಾಸಿ ಯಶೋಧಾ ಅವರ ಪುತ್ರನನ್ನು ಸುಧಾರಣೆಗಾಗಿ ಮೈಸೂರಿನ ವೀಕ್ಷಣಾಲಯಕ್ಕೆ ಕಳುಹಿಸಲಾಗಿದೆ.

ಶನಿವಾರಸಂತೆ ಪೊಲೀಸ್ ಠಾಣೆ ವ್ಯಾಪ್ತಿಯ ದುಂಡಳ್ಳಿ ಗ್ರಾಮ ಪಂಚಾಯಿತಿ ಕಚೇರಿ ರಸ್ತೆಯಲ್ಲಿ ಜೂ.1ರ ರಾತ್ರಿ 7.15ರಲ್ಲಿ ಪಾದಚಾರಿ ಜಯಪ್ಪ ಅವರಿಗೆ ದ್ವಿಚಕ್ರ ವಾಹನ ಡಿಕ್ಕಿಯಾಗಿತ್ತು. ತೀವ್ರವಾಗಿ ಗಾಯಗೊಂಡಿದ್ದ ಜಯಪ್ಪನನ್ನು ಹಾಸನದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು, ಆದರೆ, ಜೂ.2ರಂದು ಮೃತಪಟ್ಟಿದ್ದರು. ಈ ಸಂಬಂಧ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು, ಚಂಗಡಹಳ್ಳಿ ಗ್ರಾಮದ ಯಶೋಧಾ ಅವರ ಅಪ್ರಾಪ್ತ ವಯಸ್ಸಿನ ಪುತ್ರ ಸ್ಕೂಟಿ ಚಲಾಯಿಸುತ್ತಿದ್ದಾಗ ಡಿಕ್ಕಿ ಹೊಡೆದಿದ್ದಾನೆ ಎಂದು ಪತ್ತೆ ಹಚ್ಚಿದ್ದಾರೆ.

ದ್ವಿಚಕ್ರ ವಾಹನ ಮಾಲೀಕರಾದ ತಾಯಿ ಯಶೋಧಾ ಹಾಗೂ ಈಕೆಯ ಮಗನ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಇಬ್ಬರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ವಿಚಾರಣೆ ನಡೆಸಿದ ಸೋಮವಾರಪೇಟೆ ಜೆಎಂಎಫ್‌ಸಿ ನ್ಯಾಯಾಲಯ, ಬಾಲಕನ ಸುಧಾರಣೆಗಾಗಿ 11 ದಿನಗಳವರೆಗೆ ಮೈಸೂರಿನ ವೀಕ್ಷಣಾಲಯಕ್ಕೆ ಕಳುಹಿಸಿಕೊಡುವಂತೆ ಆದೇಶ ಹೊರಡಿಸಿದೆ.

14 ವರ್ಷದೊಳಗಿನ ಮಕ್ಕಳ ದುಡಿಸಿಕೊಳ್ಳುವಂತಿಲ್ಲ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷೆ ಬಿ.ಎಸ್. ಭಾರತಿ ಎಚ್ಚರಿಕೆ

ಚಾಮರಾಜನಗರ, ಜೂ.12–ಹದಿನಾಲ್ಕು ವರ್ಷದ ಮಕ್ಕಳನ್ನು ಯಾವುದೇ ದುಡಿಮೆಗೆ ನೇಮಿಸಿಕೊಳ್ಳುವಂತಿಲ್ಲ. ಮಕ್ಕಳು ಶಾಲೆ ಬಿಟ್ಟು ದುಡಿಮೆಗೆ ಹೋಗುತ್ತಿದ್ದರೆ ಮಾಹಿತಿ ನೀಡಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿ.ಎಸ್.ಭಾರತಿ ತಿಳಿಸಿದರು.



ಚಾಮರಾಜನಗರದಲ್ಲಿ ನಡೆದ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯನ್ನು ನ್ಯಾ. ಬಿ.ಎಸ್.ಭಾರತಿ ಉದ್ಘಾಟಿಸಿದರು.

ನಗರದ ವರನಟ ಡಾ.ರಾಜಕುಮಾರ್ ರಂಗಮಂದಿರದಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕಾರ್ಮಿಕ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಒದಗಿಸಲಾಗಿದೆ. ಆದ್ದರಿಂದ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸರ್ವರು ಸಹಕರಿಸಬೇಕು ಎಂದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ್ ಮಾತನಾಡಿ, ಪ್ರತಿವರ್ಷ ಜೂ.12ರಂದು ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನವನ್ನಾಗಿ ಆಚರಿಸಲಾಗುತ್ತಿದೆ. ಇದರ ಉದ್ದೇಶ ಮಕ್ಕಳನ್ನು ದುಡಿಮೆಗೆ ತೊಡಗಿಸಿಕೊಳ್ಳುವುದರಿಂದ ಅವರ ಭವಿಷ್ಯ ಹಾಗೂ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ ಎಂಬುದನ್ನ ಮನವರಿಕೆ ಮಾಡುವುದಾಗಿದೆ ಎಂದು ಮಾಹಿತಿ ನೀಡಿದರು.

ಮಕ್ಕಳಿಗೆ ವಿದ್ಯೆ ತುಂಬಾ ಮುಖ್ಯವಾಗಿದ್ದು, ಸಾರ್ವಜನಿಕ ಸ್ಥಳಗಳಲ್ಲಿ ಯಾವುದೇ ಮಕ್ಕಳು ದುಡಿಯುತ್ತಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಅಥವಾ ಕಾರ್ಮಿಕ ಇಲಾಖೆಗೆ ಮಾಹಿತಿ ನೀಡಬೇಕು. ಶಿಕ್ಷಣಕ್ಕೆ ಮಹತ್ವ ನೀಡಿ ಬಾಲಕಾರ್ಮಿಕ ಪದ್ಧತಿ ತಡೆಯಬೇಕು. ಮಕ್ಕಳು ಶೈಕ್ಷಣಿಕ ಪ್ರಗತಿಯಾದರೆ, ಇತರೆ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಸದಸ್ಯ ಕಾರ್ಯದರ್ಶಿ ಎಂ.ಸವಿತಾ ಮಾತನಾಡಿ, ಬಾಲಕಾರ್ಮಿಕ ಪದ್ಧತಿಯಿಂದ ಉಂಟಾಗುವ ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಈ ಪದ್ಧತಿಯ ಸಂಪೂರ್ಣ ನಿರ್ಮೂಲನೆಗೆ ನಾವೆಲ್ಲ ಶ್ರಮಿಸಬೇಕು ಎಂದರು.

ಬಾಲ ನ್ಯಾಯ ಮಂಡಳಿ ಸದಸ್ಯ ಟಿ.ಜೆ.ಸುರೇಶ್, ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮಕ್ಕೂ ಮೊದಲು ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನ ಮುಂಭಾಗ ಜಾಥಾಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಚಾಲನೆ ನೀಡಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ್ ಪ್ರಸನ್ನ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕ ಪದ್ಮಜ, ಹಿರಿಯ ಭೂ ವಿಜ್ಞಾನಿ ಧನಲಕ್ಷ್ಮೀ, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕಿ ಮಂಜುಳಾ, ಬಾಲಕಾರ್ಮಿಕ ಯೋಜನಾ ಸೊಸೈಟಿ ನಿರ್ದೇಶಕ ಎಂ.ಮಹೇಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> ಶಾಲೆ ಬಿಟ್ಟ ಮಕ್ಕಳ ಬಗ್ಗೆ ಮಾಹಿತಿ ನೀಡಬೇಕು. ಮಕ್ಕಳ ಶೈಕ್ಷಣಿಕ ಅಭಿವೃದ್ಧಿ ಸೇರಿದಂತೆ ಅವರ ಭವಿಷ್ಯದ ದೃಷ್ಟಿಯಿಂದ ಉತ್ತಮ ಸೌಲಭ್ಯ ಕಲ್ಪಿಸಬೇಕು. ಮಕ್ಕಳನ್ನು ಚಿಕ್ಕ ವಯಸ್ಸಿನಲ್ಲಿ ದುಡಿಮೆಗೆ ದೂಡದಂತೆ ನೋಡಿಕೊಳ್ಳಬೇಕು.
> –ಗೀತಾ ಹುಡೇದ,
> ಅಪರ ಜಿಲ್ಲಾಧಿಕಾರಿ

ಚುಡಾ ಅಧ್ಯಕ್ಷರಾಗಿ ಮಹಮ್ಮದ್ ಅಸ್ಗರ್ ನೇಮಕ



ಮಹಮ್ಮದ್ ಅಸ್ಗರ್ ಮುನ್ನಾ

ಚಾಮರಾಜನಗರ, ಜೂ.12–ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ (ಚುಡಾ) ಅಧ್ಯಕ್ಷರನ್ನಾಗಿ ಮಹಮ್ಮದ್ ಅಸ್ಗರ್ (ಮುನ್ನಾ) ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮಹಮ್ಮದ್ ಅಸ್ಗರ್ ಪ್ರಸ್ತುತ ಚಾ.ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದು, 2001ರಿಂದ 2013ರವರೆಗೆ ಎರಡು ಬಾರಿ ನಗರ ಸಭೆ ಸದಸ್ಯರಾಗಿದ್ದರು. ಜೊತೆಗೆ ಜಿಲ್ಲಾ ಕೆಡಿಪಿ ಸದಸ್ಯರಾಗಿದ್ದರು.

ನಗರದ ಗಾಳಿಪುರ ಬಡಾವಣೆ 3ನೇ ವಾರ್ಡ್‌ನ ಸದಸ್ಯರಾಗಿದ್ದ ಸಂದರ್ಭದಲ್ಲಿ ಅವರು ಮಾಡಿದ್ದ ಅಭಿವೃದ್ಧಿ ಕೆಲಸಗಳಿಂದಾಗಿ ಉತ್ತಮ ನಗರಸಭಾ ಸದಸ್ಯ ಎಂಬ ಹೆಸರು ಪಡೆದಿದ್ದರು. ಪಕ್ಷಕ್ಕೆ ಅವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ಸರ್ಕಾರ ಚುಡಾ ಅಧ್ಯಕ್ಷ ಸ್ಥಾನ ನೀಡಿದೆ.

ಚುಡಾ ಅಧ್ಯಕ್ಷರಾಗಿ ನೇಮಕವಾದ ಬಳಿಕ ಮಾತನಾಡಿದ ಮಹಮ್ಮದ್ ಅಸ್ಗರ್, ಪಕ್ಷ ನನ್ನನ್ನು ಗುರುತಿಸಿ ದೊಡ್ಡ ಜವಾಬ್ದಾರಿಯ ಸ್ಥಾನ ನೀಡಿದೆ. ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಹಾಗೂ ಜಿಲ್ಲೆಯ ಪಕ್ಷದ ಎಲ್ಲಾ ಶಾಸಕರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಯಾವುದೇ ಲೋಪದೋಷಗಳಿಗೆ ಎಡೆ ಮಾಡಿಕೊಡದೆ ನಗರದ ಅಭಿವೃದ್ಧಿಗಾಗಿ ಕೆಲಸ ನಿರ್ವಹಿಸುತ್ತೇನೆ ಎಂದರು.

ಮಾಜಿ ಶಾಸಕ ಆರ್.ನರೇಂದ್ರಗೆ ಅಭಿನಂದನೆ....



ಕೊಳ್ಳೇಗಾಲ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಹೊಸಹಂಪಾಪುರ ಗ್ರಾಮದ ಎಚ್.ಎಂ.ಮಹದೇವಪ್ಪ, ಮಾಜಿ ಶಾಸಕ ಆರ್.ನರೇಂದ್ರ ಅವರನ್ನು ಅಭಿನಂದಿಸಿದರು. ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಾಗರಾಜು, ಚಿಕ್ಕಬಸವೇಗೌಡ ಇದ್ದರು.

ಜೂ.16, ಸಾಯಿಬಾಬಾ ಮಂದಿರ ಉದ್ಘಾಟನೆ

ಚಾಮರಾಜನಗರ: ಇಲ್ಲಿನ ವಿವೇಕನಗರದ ಫಾರೆಸ್ಟ್ ನರ್ಸರಿ ಬಳಿ ನಿರ್ಮಿಸಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರವನ್ನು ಜೂ.16ರಂದು ಉದ್ಘಾಟಿಸಲಾಗುವುದು ಎಂದು ಶ್ರೀ ಶಿರಡಿ ಸಾಯಿಬಾಬಾ ಧಾರ್ಮಿಕ ಮತ್ತು ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಆರ್.ರಾಜು ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂದಿರ ಉದ್ಘಾಟನೆ ಹಿನ್ನೆಲೆಯಲ್ಲಿ ಜೂ.14, 15 ಮತ್ತು 16ರಂದು ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯ ನಡೆಯಲಿದೆ. 14ರಂದು ಬೆಳಗ್ಗೆ ಹಾಗೂ ಮಧ್ಯಾಹ್ನ ವಿವಿಧ ಧಾರ್ಮಿಕ ಕಾರ್ಯ ಹಾಗೂ ಸಂಜೆ 6 ಗಂಟೆಗೆ ಸಾಯಿಬಾಬಾ ಹಾಗೂ ಧ್ಯಾನಾಂಜನೇಯಸ್ವಾಮಿ ಭಕ್ತಿಗೀತೆಗಳ ಗಾಯನ ಏರ್ಪಡಿಸಲಾಗಿದೆ ಎಂದರು.

15ರಂದು ಸಂಜೆ 4 ಗಂಟೆಗೆ ಪ್ರಧಾನ ಹೋಮ, ಶಾಂತಿ–ಪುಷ್ಟಿ ಹೋಮ, ಕುಠೀರ, ಪೂಜೆ, ಆರತಿ ನಡೆಯಲಿದೆ. 6 ಗಂಟೆಗೆ ಹರಿಕಥೆ ವಿದೂಷಿ ಡಾ.ಮಾಲಿನಿ ಅವರಿಂದ ಸಾಯಿಬಾಬಾರ ವೈಭವದ ಕಥಾವಲೋಕನ, 16ರಂದು ತ್ರಿವೇಣಿ ಸಂಗಮದಿಂದ ನೀರು ತಂದು ನಗರದ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಬಳಿಕ ಸಾಯಿಬಾಬಾ ಮಂದಿರಕ್ಕೆ ಕೊಂಡೊಯ್ಯಲಾಗುವುದು. ದೇವರ ಪ್ರತಿಷ್ಠಾಪನೆ, ಮಹಾಕುಂಭಾಭಿಷೇಕ, ಮಹಾಮಂಗಳಾರತಿ ನಡೆಸಲಾಗುವುದು. ಇದೇ ವೇಳೆ 15 ಸಾವಿರಕ್ಕೂ ಹೆಚ್ಚು ಭಕ್ತರಿಗೆ ಪ್ರಸಾದ ವಿನಿಯೋಗಿಸಲಾಗುವುದು ಎಂದರು.

ಟ್ರಸ್ಟ್ ಅಧ್ಯಕ್ಷ ಬಾಲಸುಬ್ರಹ್ಮಣ್ಯ ಮಾತನಾಡಿ, ರಾಜಸ್ಥಾನದ ಜೈಪುರದಿಂದ ಸಾಯಿಬಾಬಾ ಮೂಲ ವಿಗ್ರಹ ತಯಾರಿಸಲಾಗಿದೆ. ಅಯೋಧ್ಯೆಯ ಹನುಮಂತ ರೀತಿ ಧ್ಯಾನಾಂಜನೇಯಸ್ವಾಮಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಗೌರವಾಧ್ಯಕ್ಷ ಎಂ.ರಾಜು, ಕಾರ್ಯಾಧ್ಯಕ್ಷ ಉಮೇಶ್ ಎಸ್‌ಪಿಕೆ, ಕಾರ್ಯದರ್ಶಿ ಆರ್.ರಾಜು ಎಸ್‌ಪಿಕೆ, ಸಹ ಕಾರ್ಯದರ್ಶಿ ಆರ್.ಮುರುಗೇಶನ್, ಸದಸ್ಯರಾದ ವಿ.ಶಕ್ತಿ, ಉತ್ತರಸ್ವಾಮಿ, ಆರ್.ಲೋಕೇಶ್ ಇದ್ದರು.



ಚಾಮರಾಜನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಶಿರಡಿ ಸಾಯಿಬಾಬಾ ಧಾರ್ಮಿಕ ಟ್ರಸ್ಟ್ ಕಾರ್ಯದರ್ಶಿ ಆರ್.ರಾಜು ಮಾತನಾಡಿದರು.

ಅರಣ್ಯ ರಕ್ಷಣೆಗೆ ಸಾರ್ವಜನಿಕರ ಸಹಕಾರ ಅಗತ್ಯ



ಚಾಮರಾಜನಗರ ತಾಲೂಕಿನ ಲಿಂಗನಪುರದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕಿ ದೀಪಾ ಜೆ.ಕಂಟ್ರಾಕ್ಟರ್ ಅವರನ್ನು ಸನ್ಮಾನಿಸಲಾಯಿತು.

ಚಾಮರಾಜನಗರ: ಅರಣ್ಯ ಮತ್ತು ವನ್ಯಜೀವಿಗಳ ರಕ್ಷಣೆಗೆ ಸಾರ್ವಜನಿಕರ ಸಹಕಾರ ಅಗತ್ಯ ಎಂದು ಬಿಆರ್‌ಟಿ ಹುಲಿ ಯೋಜನೆ ನಿರ್ದೇಶಕಿ ದೀಪಾ ಜೆ.ಕಂಟ್ರಾಕ್ಟರ್ ಮನವಿ ಮಾಡಿದರು.

ತಾಲೂಕಿನ ಲಿಂಗನಪುರ ಗ್ರಾಮದಲ್ಲಿ ಬುಧವಾರ ಅರಕಲವಾಡಿ ಗ್ರಾಪಂ ವ್ಯಾಪ್ತಿ ಲಿಂಗನಪುರ, ಹೊಸಹಳ್ಳಿ, ವಡ್ಡರಹಳ್ಳಿ, ಯಾನಗಹಳ್ಳಿ, ಮುಂಚಗುಂಡಿಪುರ, ಅರಕಲವಾಡಿ ಗ್ರಾಮಸ್ಥರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಈ ಭಾಗದ ಗ್ರಾಮಗಳಲ್ಲಿ ಹಲವಾರು ವರ್ಷಗಳಿಂದ ಮಾನವ ಮತ್ತು ಕಾಡುಪ್ರಾಣಿಗಳ ಸಂಘರ್ಷ ಹೆಚ್ಚಾಗಿ ಗ್ರಾಮಸ್ಥರು ಸಂಕಷ್ಟಕ್ಕೆ ಸಿಲುಕಿದ್ದರು. ರೈತರು ಪ್ರತಿವರ್ಷ ತಮ್ಮ ಜಮೀನುಗಳಲ್ಲಿ ಬೆಳೆಗಳನ್ನು ಕಾಡುಪ್ರಾಣಿಗಳ ಹಾವಳಿಯಿಂದ ಕಳೆದುಕೊಳ್ಳುತ್ತಿದ್ದರು. ಇದನ್ನು ಮನಗಂಡ ಅರಣ್ಯ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಭಾಗದಲ್ಲಿ 1.10 ಕೋಟಿ ರೂ. ವೆಚ್ಚದಲ್ಲಿ ಸೋಲಾರ್ ಬೇಲಿ ಮತ್ತು ಆನೆ ಕಂದಕಗಳನ್ನು ನಿರ್ಮಿಸಿದೆ ಎಂದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುರೇಶ್ ಮಾತನಾಡಿ, ಈ ಭಾಗದ ರೈತರ ಸಮಸ್ಯೆಯನ್ನು ಅರಣ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿ ತಮಿಳುನಾಡು ಗಡಿ ಇದ್ದರೂ ಸೋಲಾರ್ ಬೇಲಿ ಮತ್ತು ಆನೆ ಕಂದಕವನ್ನು ನಿರ್ಮಿಸಿ ಕಾಡಾನೆಗಳ ಉಪಟಳ ಕಡಿಮೆ ಮಾಡಿದೆ ಎಂದು ತಿಳಿಸಿದರು.

ವಲಯ ಅರಣ್ಯಾಧಿಕಾರಿ ಉಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ, ಅರಕಲವಾಡಿ ಮಹೇಶ್ ಮಾತನಾಡಿದರು. ಗ್ರಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ಮುಖಂಡರಾದ ಮಹದೇವಸ್ವಾಮಿ, ಕೆಂಪಣ್ಣ, ಮಾಧು, ರಾಜಸ್ವ ನಿರೀಕ್ಷಕ ಗುರುಸಿದ್ದಪ್ಪ, ಗ್ರಾಮಲೆಕ್ಕಿಗ ವೆಂಕಟೇಶ್ ಗ್ರಾಮಸ್ಥರು ಹಾಜರಿದ್ದರು.

ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ...

ಚಾಮರಾಜನಗರ ಬಸವೇಶ್ವರ ಪತ್ತಿನ ಸಹಕಾರ ಸಂಘದ ಮೊದಲ ಅಂತಸ್ತಿನ ಕಟ್ಟಡ ನಿರ್ಮಾಣಕ್ಕೆ ಸಂಘದ ಅಧ್ಯಕ್ಷ ಗೌರಿಶಂಕರ್ ಭೂಮಿಪೂಜೆ ನೆರವೇರಿಸಿದರು. ಜಂಟಿ ಕ್ರಿಯಾ ಸಮಿತಿ ಅಧ್ಯಕ್ಷ ಬಸಪ್ಪ, ವೀರಶೈವ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ, ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಮುದ್ದು ಬಸವಣ್ಣ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ವಸಂತಮ್ಮ, ಸಹಕಾರ ಸಂಘದ ಉಪಾಧ್ಯಕ್ಷ ಕುಮಾರಸ್ವಾಮಿ, ಪದಾಧಿಕಾರಿಗಳು ಇದ್ದರು.



ನಾಳೆ ನಗರದಲ್ಲಿ ರಕ್ತದಾನ ಶಿಬಿರ

ಚಾಮರಾಜನಗರ: ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಜೂ.14ರಂದು ನಗರದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ರೋಟರಿ ಸಿಲ್ಕ್ ಸಿಟಿ ಮಾಜಿ ಅಧ್ಯಕ್ಷ ಡಿ.ಎಸ್.ಗಿರೀಶ್ ದೊಡ್ಡರಾಯಪೇಟೆ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆವರೆಗೆ ರಕ್ತದಾನ ಶಿಬಿರ ನಡೆಯಲಿದೆ. ಶಿಬಿರಕ್ಕೆ ಜಿಲ್ಲಾಧಿಕಾರಿ ಶಿಲ್ಪನಾಗ್ ಚಾಲನೆ ನೀಡಲಿದ್ದು, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ರೋಟರಿ ಸಿಲ್ಕ್ ಸಿಟಿ, ರಕ್ತನಿಧಿ ಕೇಂದ್ರ, ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಸಹಯೋಗದಲ್ಲಿ ಶಿಬಿರ ನಡೆಯಲಿದ್ದು, ಇದೇ ವೇಳೆ ಹೆಚ್ಚು ರಕ್ತದಾನ ಮಾಡಿದ ದಾನಿಗಳಿಗೆ ಜಿಲ್ಲಾಡಳಿತ ವತಿಯಿಂದ ಸನ್ಮಾನಿಸಲಾಗುವುದು. ಇದಕ್ಕೂ ಮುನ್ನ ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಿಂದ ರೋಟರಿ ಸಂಸ್ಥೆವರೆಗೆ ಜಾಥಾ ನಡೆಸಲಾಗುವುದು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ಸಿಲ್ಕ್ ಸಿಟಿ ಮಾಜಿ ಅಧ್ಯಕ್ಷರಾದ ವಿಶ್ವಾಸ್, ಪ್ರಶಾಂತ್, ಹೆಗ್ಗವಾಡಿಪುರ ಅಜಯ್, ಕಾರ್ಯದರ್ಶಿ ಮಾಣಿಕ್ ಚಂದ್, ಸದಸ್ಯ ಆರ್.ರಾಜು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಮೈಸೂರಿನ ರೆಸ್ಟೋರೆಂಟ್ ಒಂದಕ್ಕೆ ಕಾಫಿ ಟೀ ಮಾಸ್ಟರ್ ಬೇಕಾಗಿದ್ದಾರೆ. ಒಳ್ಳೆಯ ಸಂಬಳ ನೀಡಲಾಗುವುದು. ಸಂಪರ್ಕಿಸಿ:
9900661620

WANTED
Accountant with Tally Knowledge for Books Agency With Experience
srini.books1974@gmail.com
8050088819

ಸೈಟು ಮಾರಾಟಕ್ಕಿದೆ
30x50
Place: ನಿರ್ಮಾಣ ಕಲ್ಪವೃಕ್ಷ ಲೇಔಟ್ (ಮುರುಡಗಳ್ಳಿ) ಮೈಸೂರು ತಾಲ್ಲೂಕು
Amount: 15,00,000/-
8088604041
8217323951

WANTED TEACHER
Pavaman Innnovative School (Nursery to 8th Std)
Nursery: 2 , Primary-2 Posts
Qual: NST, D.Ed, B.Ed or Any Degree
Computer & English fluency is must.
105/3, Himalayan Education Trust ®
B M Shree Nagar, Metagalli, Mysore.
Call: 8197695840/8431891316

ಬೇಕಾಗಿದ್ದಾರೆ
ಕಾರ್ ವಾಶ್ ಮಾಡಲು ಹುಡುಗರು ಬೇಕಾಗಿದ್ದಾರೆ.
(ಅನುಭವವಿರುವ / ಇಲ್ಲದಿರುವ)
ಸ್ಥಳ: ಯಾದವಗಿರಿ, ಮೈಸೂರು
ಸಂಪರ್ಕಿಸಿ:
9880450493 / 9980359007
(ಸಂಬಳ+ಊಟ+ಬೋನಸ್)

HOME APPLIANCES SERVICE
ಫ್ರಿಡ್ಜ್, ವಾಶಿಂಗ್‌ಮೆಷೀನ್, ಮೈಕ್ರೋ ವೋವೆನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ಗೀಸರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas
9379699229

VILLA TO LET
A 3 BHK Villa is to let for immediate occupation in Srirampura 2nd Stage, has 3 bathrooms, a large car porch and a seperate wash room for servants. Vegetarians preferred. Contat:
9845365026

SITE FOR SALE
30x40 Site attached to service road (Mysore Hunsur Highway) Near Yelwala. contact
9845012201 | 8660599132

Nypunya School of Excellence
Dattagalli, Mysore
Requires immediately
1. Primary Teacher,
2. Kindergarten Teacher,
3. Librarian, 4. Art and craft

No constraints in salary for experienced candidates.Candidates with relevant experience and qualifications can send their CVs to the E-mail Id :
hrnypschool@gmail.com
9110851597

ADMISSION OPEN
Govt.of Karnataka Dept. of Tourism
FOOD CRAFT INSTITUTE-MYSURU
EXHIBITION GROUND. ITTEGEGUDU
HOTEL MANAGEMENT
100% Job Placements | Govt. College | 80% Practical Classes
www.fcimysuru.com
6362018821

WANTED
Accountant
Front office Supervisor
Production Manager
Contact
9448067939 | 9739569260

ಉಚಿತ ಕೋಚಿಂಗ್
I & II PUC – ಕಾಮರ್ಸ್
In Accounts, Statistics, Basic Maths, Spoken English etc., Also for B.Com & BBM, (LOW FEES)
Only 6 Students per Batch
100% Individual Attention
Professor M.S.S. Sharma
9901932751

Sales Executive Wanted For Healthcare
At Mysore / Mandya Need Business Development Executive / Delivery Boys / Fresh Or Having Sales & Supply Experience In Diagnostic / Healthcare / Pharma Or Medical Devices Is An Added Advantage Part Time Person Can Also Apply.
888-464-5218
Send CV To myfamilycustomercare@gmail.com

ಬೇಕಾಗಿದ್ದಾರೆ
ಶಾಲಾ ಬಸ್ ಚಾಲಕರು 2ವರ್ಷ ಅನುಭವದ ಜೊತೆಗೆ ಹೆವಿ.ಡಿ.ಎಲ್ ಹೊಂದಿರಬೇಕು
ಸಂಪರ್ಕಿಸಿ:
0821-2402929
9481123959

AVAILABLE FOR SALE
Brooder and layer poultry cages ½ ton Feeds Machine contact:
9448978383

EAST FACE MUDA APPROVED
40X60
SITE FOR SALE
NITYANANDASAGARA HUILALU MYSORE
8217851695

ಮಳಿಗೆ ಬಾಡಿಗೆಗೆ ಇದೆ SHOP FOR RENT
14x21 ft
Near Sangham bhandar bus stop, prashanth Nagar, Bogadi 2nd Stage, Mysore 570026
8762988145 | 9481057802

ಸೈಟ್ ಮಾರಾಟಕ್ಕಿದೆ ಮೂಡಾ ಅಪ್ರೂವ್ಡ್
40X60
ಪೂರ್ವ ದಿಕ್ಕು, ನಿತ್ಯಾನಂದಸಾಗರ ಹುಯಿಲಾಳು ಮೈಸೂರು
8217851695

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ನಗರದ ಕೂರ್ಗಳ್ಳಿ, ಮೇಟಗಳ್ಳಿ, ಹೆಬ್ಬಾಳ್, ದಟ್ಟಗಳ್ಳಿ ಹಾಗೂ ಕುವೆಂಪುನಗರ ಇಲ್ಲಿ ಉನ್ನತ ಕಂಪನಿಗಳು, ಕಾರ್ಖಾನೆಗಳು ಹೋಟೆಲ್‌ಗಳು ಹಾಗೂ ಹಾಸ್ಪಿಟಲ್‌ಗಳಲ್ಲಿ ಕೆಲಸ ಮಾಡಲು, ಸೆಕ್ಯೂರಿಟಿಗಳು, ಹೌಸ್ ಕೀಪಿಂಗ್, ಸೂಪರ್ ವೈಸರ್, ವಾರ್ಡ್ ಬಾಯ್, ಸೆಕ್ಯೂರಿಟಿ ಸೂಪರ್ ವೈಸರ್, ಲೇಬರ್ (Helper) ಗಳು ಬೇಕಾಗಿದ್ದಾರೆ.
9611208553, 9036461347

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC ಮೇಲ್ಪಟ್ಟು
ವಯೋಮಿತಿ: 50 ವರ್ಷದೊಳಗೆ
ಸಂಬಳ : 17000/– 8 Hours, 26 Days
ESI+PF ಊಟ ತಿಂಡಿ ಮತ್ತು ವಸತಿ ಸೌಲಭ್ಯವಿರುತ್ತದೆ.
9620777819
9620667819

REQUIRED
HOSTEL WARDENS
MALE — Graduate with relevant experience in a Residential PU college
Remuneration as per Industry norms
ACCOMMODATION with PF & ESI facilities
CONTACT
9742363138

ಸರಸ್ವತಿಪುರಂನಲ್ಲಿರುವ Sugarcane ಜ್ಯೂಸ್ ಶಾಪ್ ಮಾರಾಟಕ್ಕಿದೆ.
7760612838

WANTED
SECURITY TRAINING OFFICER
with good communication to train SECURITY GUARDS in fire fighting, first-aid, parade & grooming in Mysore
Contact: 99646 61119

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ.ವರೆಗೆ ಗಳಿಸಿ
ತರಬೇತಿಗಾಗಿ:
7406375196, 9880548596

Sudarshan Saur
SOLAR WATER HEATER



SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಸ್ಟಾರ್ ಬಜಾಜ್ Star Bajaj
(Authorised Main Dealer for Bajaj Two Wheeler-Mysore)
Vontikoppal, Mysore-570002
ಮಾರ್ಕೆಟಿಂಗ್ ಅಂಡ್ ಸೇಲ್ಸ್ ಎಕ್ಸಿಕ್ಯೂಟಿವ್
Qualication Any Degree-Fresher or Experienced
9743647484

ವಿವಾಹ ಭಾಗ್ಯ
ಎಲ್ಲಾ ಧರ್ಮದ ಭಾಷೆಯ ಹಾಗೂ ಜಾತಿಯ ವಧು ವರರಿಗಾಗಿ ಸಂಪರ್ಕಿಸಿ
1. ಮೊದಲನೇ ಮದುವೆ
2. ಎರಡನೇ ಮದುವೆ
3. ವಿಧವೆ/ವಿಧುರರು

MRJ Matrimony
8904890413
8904890419

Corner & Middle 30x40 / 30x50 Muda Approved sites 80% Loan
ತಕ್ಷಣ ಮನೆ ಕಟ್ಟಲು, ನಮ್ಮ ಬಡಾವಣೆಗಳಲ್ಲಿ
SBM / ರೂಪನಗರ ಪಕ್ಕ – 58ಲಕ್ಷ
ಶ್ರೀರಾಂಪುರ ರಿಂಗ್ ರಸ್ತೆ ಪಕ್ಕ – 58 ಲಕ್ಷ
Police / JSS ಲೇಔಟ್ ಪಕ್ಕ – 45.5ಲಕ್ಷ
ಬೋಗಾದಿ ರಸ್ತೆ, ಜಟ್ಟಿಹುಂಡಿ ಪಕ್ಕ – 27.6 ಲಕ್ಷ
7892445689
Broker Excuse

SITES for SALE
JP Nagar Ring Road
30 x 40 - 33 Lakhs, Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902

WANTED
Driver & Delivery Boys for E-Commerce Four & Two wheller
8310381391
9035757342
8867366268

WANTED
Telecallers
Marketing Manager
TV Anchors
Pigmy collection boy
Office Assistant
Mob: 9980959598

WANTED
ACCOUNTANT (Female)
for reputed Hardware shop in Dattagali, Mysuru
Qualification B.Com, BBM (Tally Must)
Work timing : 9.30 to 5.30 pm
Call: 94495 89666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

Beautiful & Professional Interior & Exteriar House Painting & Modular Kitchen
7204062225

LOST
It is to inform public that I, Shive Gowda K.L, residing at No.65, 8th Main, 8th Cross, Kamakshi Hospital Road, Saraswathipuram, Mysuru-570009, declare that the following original Gift Deed document No. BAS-1-09816/2005-06 have been lost in Saraswathipuram, Mysore. Regarding this police complaint (No.1082868/2024) dated: 03/06/2024 has been lodged through online, if anybody find this documents, please inform to nearby police station or Call to below mobile number: **9739056687**

ನಿರುದ್ಯೋಗಿಗಳಿಗೆ ಖಚಿತ ಉದ್ಯೋಗಾವಕಾಶ !!
BOSCH ಕಂಪನಿಯಿಂದ ಆಯೋಜಿಸಲಾದ "ಬ್ರಿಡ್ಜ್" ಕೋರ್ಸ್‌ಗೆ SSLC ಪಾಸ್ ಮಾಡಿರುವ, 25 ಅಭ್ಯರ್ಥಿಗಳು ತಕ್ಷಣ ಬೇಕಾಗಿದ್ದಾರೆ. ವಯಸ್ಸು 18 ರಿಂದ 25ವರ್ಷ.
ತಕ್ಷಣ ಸಂಪರ್ಕಿಸಿ :
AIMIT, Vidyaranyapuram
94480 11009

ನಮ್ಮಲ್ಲಿ ಎಲ್ಲ ತರಹದ ಕಾಂಚೀಪುರಂ ಮತ್ತಿತರ ಸೀರೆಗಳು ಲಭ್ಯ
ಮನೆ ಬಾಗಿಲಿಗೆ ತಲುಪಿಸಲಾಗುವುದು.
ಹೆಚ್ಚಿನ ಮಾಹಿತಿಗಾಗಿ
7975026220

ಕಳೆದಿದೆ
ಉದಯಕುಮಾರ್ ಎಸ್, ಸೈಟ್ ನಂ.94, ಹಾಲಿ ಮನೆ ನಂ. 1159/6, ನಿವೇಶನದ ಗುತ್ತಿಗೆ ಸಹಿತ ಕ್ರಯದ ಒಪ್ಪಂದ ಪತ್ರವು ಕಳೆದುಹೋಗಿರುತ್ತದೆ.
ಸಿಕ್ಕಿದವರು ಸಂಪರ್ಕಿಸಿ:
8073072320

ಸುವರ್ಣ ಯಾತ್ರ
1) ಗುಜರಾತ್ ಪ್ರವಾಸ 8 ದಿನಗಳು 18–7–2024.
2) ನೇಪಾಳ, ಪಶುಪತಿನಾಥ, ಮುಕ್ತಿನಾಥ, ಅಯೋಧ್ಯೆ ಪ್ರವಾಸ 9 ದಿನಗಳು 18–6–2024 ಹಾಗೂ 24–7–2024.
3) ಕಾಶಿ, ಗಯಾ, ಬಾಬಾ ಬೈದ್ಯನಾಥ್, ಅಯೋಧ್ಯೆ 7 ದಿನಗಳು 23–7–2024.

8660233673, 9480843945

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU: 9611028523 MANGALORE: 9343142258

ಕಾವೇರಿ ಎಜುಕೇಷನ್ ಟ್ರಸ್ಟ್ (ರಿ.)
ನರ್ಸರಿ, ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆ ನಗುವಿನಹಳ್ಳಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ. ಮೇಲ್ಕಂಡ ನಮ್ಮ ವಿದ್ಯಾಸಂಸ್ಥೆಗೆ ಪೂರ್ವ ಪ್ರಾಥಮಿಕ ಮತ್ತು ಪ್ರಾಥಮಿಕ ತರಗತಿಗಳಿಗೆ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಬೋಧಿಸಲು ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತರು ದಿನಾಂಕ: 18–06–2024ರ ಬೆಳಿಗ್ಗೆ 11 ಗಂಟೆಗೆ ತಮ್ಮ ಮೂಲದಾಖಲಾತಿಗಳೊಂದಿಗೆ ನೇರ ಸಂದರ್ಶನದಲ್ಲಿ ಪಾಲ್ಗೊಳ್ಳಲು ತಿಳಿಸಿದೆ. ಮೈಸೂರು ಸಿಟಿ ಬಸ್ ನಿಲ್ದಾಣದಿಂದ ಬಸ್ ಮಾರ್ಗಸಂಖ್ಯೆ 315B, 178A,
9980366956

ಮನೆ ಭೋಗ್ಯಕ್ಕಿದೆ
1st Floor, Double Bed Room, 1st Cross, K Block, Kuvempunagar, Mysuru
9845820794, 9880594976

neem BOND PLATINUM®
PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

Sites for Sale
'Balaji Siri'
30X40, 30X50 Premium plots at T. Narasipura Main Road, attached to National Highway
Ready for Registration
Call : 8123647464

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

IT Hardware Sales
A Bangalore based IT Hardware Sales and services Company having multiple branches looking for fresh Trainee/Experience technicians for there Mysore branch, Qualification no bar. Interested Candidates please walk in with resume to our Mysore office @ Absolute Technologies, Ch 50, 2nd floor, 7th main, 5th cross, Saraswathipuram, Mysore.
9845064384 | 9880302902

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸಂಪರ್ಕಿಸಿ
Mob: 7975101020

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

FOR SALE
20X40 corner Muda action property 4 floor building for sale in Vijay Nagar 4th stage 2nd phase rate 1.40 cr negotiable. Contact
9964474120 | 8722993477

ಕ್ಲೀನಿಂಗ್ ಕೆಲಸ ಮಾಡಿಕೊಡಲಾಗುತ್ತದೆ
ನಮ್ಮಲ್ಲಿ ಮನೆ ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಕ್ಲೀನಿಂಗ್ ಕೆಲಸ ಮಾಡಿಕೊಡಲಾಗುತ್ತದೆ.
7899752014 / 9741515772

ಹೋಂ ನರ್ಸಿಂಗ್‌ನಲ್ಲಿ ಉದ್ಯೋಗಾವಕಾಶ
ವಯೋವೃದ್ಧರನ್ನು ಆರೈಕೆ ಮಾಡಲು Full Time, Day/Night Shift ಕೆಲಸಕ್ಕೆ ಯುವತಿಯರು ಹಾಗೂ ಮಹಿಳೆಯರು ಬೇಕಾಗಿದ್ದಾರೆ.
ವೇತನ : 10,000 ರಿಂದ 18000
ಅನುಭವದ ಅಗತ್ಯವಿಲ್ಲ, ಉಚಿತ ತರಬೇತಿ ವಸತಿಯೊಂದಿಗೆ ಕೆಲಸ ನೀಡಲಾಗುವುದು
9606714441, 7349278501
0821-4242351

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡಿ ಪ್ರತಿ ತಿಂಗಳಿಗೆ ರೂ. 15,000 ಸಂಪಾದಿಸಿ.
Mob: 9731891409

ಆನಂದ ಮಾರ್ಗ ಶಾಲೆ
(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
ಗುರುಕುಲ ಶಿಕ್ಷಣ
#7, 2ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಮೈಸೂರು–09
ಡೇಕೇರ್, ನರ್ಸರಿ, ಎಲ್‌ಕೆಜಿ, ಯುಕೆಜಿ ತರಗತಿಗಳಿಗೆ ಪ್ರವೇಶಾತಿಗಳು ಪ್ರಾರಂಭವಾಗಿದೆ.
(ಸಮಂಜಸದವಾದ ಶಾಲೆ ಶುಲ್ಕ)
ಸಂಪರ್ಕಿಸಿ: ಬೆ.9.30 ರಿಂದ 3.00 ರವರೆಗೆ
9036955964, 9620648627

ಸೈಟ್ ಮಾರಾಟಕ್ಕಿದೆ
ಮುಡಾ ಅಪ್ರೂವ್ಡ್
30x40
ಪ್ರಕೃತಿ ಎನ್‌ಕ್ಲೇವ್ ಏರ್‌ಪೋರ್ಟ್ ಹಿಂಭಾಗ ಮೈಸೂರು
7676233992

FOR SALE
1. 20x30, 30x40, Sites @ Bogadi, Rainbow School
2. 18x40 Site in Kuvempu Ngr
3. 2&3 BHK Flats at RK Nagar
4. 70x140 Farm House Plots @ KRS Back Water Attach 20L
5. 50x30 Site@Saraswathi Puram Semi Commercial
6. 20x30, Sites For Sale At Yelwala 30x40 Sites attached to Brahmins Lyt

PRAKRUTHI PROPERTIES
95386 90359, 90359 90359

ವೃದ್ಧಾಶ್ರಮ
ವಯಸ್ಸಾದ ವೃದ್ಧರು ಮತ್ತು ಹಾಸಿಗೆ ಹಿಡಿದವರನ್ನು ಮತ್ತು ಯಾವುದೇ ಹಿರಿಯ ಜೀವಗಳನ್ನು ನಿಮ್ಮ ಮನೆಯಂತೆಯೇ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯದೊಂದಿಗೆ ನಮ್ಮಲ್ಲಿಯೇ ನೋಡಿಕೊಳ್ಳಲಾಗುವುದು. ಸಂಪರ್ಕಿಸಿ:
9916905188 / 8951190340

ಬೇಕಾಗಿದ್ದಾರೆ
Line Sales Tata Ace ಗಾಡಿಗೆ ಡ್ರೈವರ್ ಬೇಕಾಗಿದ್ದಾರೆ
ಸಂಪರ್ಕಿಸಿ:
9972258425

ಬಾಡಿಗೆಗೆ ಇದೆ
ಪೇಪರ ಪ್ಲೇಟ್ ಫ್ಯಾಕ್ಟರಿ Paper Plate Factory ಬಾಡಿಗೆಗೆ ಇದೆ.
ಉಚಿತ ವಸತಿ. ಸಂಪರ್ಕಿಸಿ:
96112 63045

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಪುರುಷರು/ಮಹಿಳೆಯರು ಬೇಕಾಗಿದ್ದಾರೆ.
ಸಂಬಳ: 12,000/–
8892258814

ಕಳೆದಿದೆ
ಮೊಹಮ್ಮದ್ ರಫೀ ಉಲ್ಲಾ ಖಾನ್, ಮನೆ ನಂ. 3/1, 5ನೇ ಮೇನ್, 1ನೇ ಬಿ ಕ್ರಾಸ್, ಬೆಂಗಳೂರು ಉತ್ತರ, ಬೆಂಗಳೂರು–560032 ಇವರಿಗೆ ಸೇರಿದ ದಾಖಲೆ ಸಂ. KIADB/856/2299, ಸ್ವಾಧೀನ ಪ್ರಮಾಣಪತ್ರ ಉದಯಗಿರಿ ಸರ್ಕಲ್ ಹತ್ತಿರ ಕಳೆದುಹೋಗಿದೆ. ಸಿಕ್ಕವರು ಸಂಪರ್ಕಿಸಿ:
ಮೊ: 9036512596

WANTED
ACCOUNTANT (Female)
SALES BOY+Incentive
Salary: 10K-20K
Address: Furniture Showroom Sharadadevinagar. Contact:
Mob: 80507 44784

WANTED URGENT
ಕಂಪನಿಯಲ್ಲಿ ಖಾಲಿ ಇರುವ ವಿವಿಧ ವಿಭಾಗಕ್ಕೆ Age (18-24) 10th, PUC Diploma, B.B.M, ಆದ
Earn Start (10500/- to 16500/-) p.m ನೇರ ಸಂಪರ್ಕಿಸಿ. No Fee. ಪರಸ್ಥಳದವರಿಗೆ ಮಾತ್ರ ವಸತಿಗಾಗಿ Call: ಕಾವ್ಯ
Mob: 9342827788
(Walk in time: 9am to 5pm), Mysore

CHANGE OF NAME
I, FASIYA BATHUL ALTHAF KHAN, residing at No 49 MIG-1, KHB Colony, 1st Stage, Kalyangiri, Mysore-570029, solemnly affirm on oath that I have changed my name from FAISYA BATHUL ALTHAF KHAN to FASIYA BATHUL ALTHAF KHAN on my own free will vide affidavit sworn in before Notary Asadulla Khan dated 11.06.2024.
Sd/- FASIYA BATHUL ALTHAF KHAN

ಫ್ಲ್ಯಾಟ್ ಭೋಗ್ಯಕ್ಕೆ ಇದೆ
ಆಲನಹಳ್ಳಿ ಲೇಔಟ್
FLAT FOR LEASE
Alanahalli Layout
9148448159
6366596616

ಮಹಿಳೆಯರಿಗೆ ಸುವರ್ಣಾವಕಾಶ
ನಿಮ್ಮ ಮನೆಯಿಂದಲೇ ಪ್ಲಾಸ್ಟಿಕ್ ಹಾರಗಳನ್ನು ತಯಾರಿಸಿ ನಮಗೆ ಕೊಡಿ.
ತರಬೇತಿ ನೀಡಲಾಗುವುದು.
ಸಾಮಗ್ರಿಗಳನ್ನು ನಾವೇ ಕೊಡುತ್ತೇವೆ.
ವಾರದ ಸಂಬಳ ಕೊಡುತ್ತೇವೆ.
ಆಸಕ್ತಿಯುಳ್ಳವರು ಸಂಪರ್ಕಿಸಿ
8867556624

MODULAR KITCHEN
@ ₹99,000/-*
Home Space Mart
*T&C Apply
✆91089 23123

SITE FOR SALE
20x30, S/F, Vijayanagar 4th Stage, 2nd Phase. Contact:
8050821108

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಹೆಬ್ಬಾಳ್ ಏರಿಯಾದಲ್ಲಿ ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ.
ಸಂಬಳ: 18500/- + W/O. (8Hrs)
ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು
ಊಟ ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9880727819 / 9620667819

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS
S.S. PROPERTY SERVICES
(Opp. Kuvempu School)
S.S. Puram, Mysore
Mob: 9342125252

WATER PROOFING
Specialist in Dr. Fixit Chemicals
Terrace, Slooped Roof, Chajja, Toilet & Bathroom, Sump & Overhead Tank, Joint Treatment, Cracks, any Leakage Controlling, Old Building Repair
5 years warranty
Mob: 95381 58129

FOR SALE
20x40 corner Muda Auction Property 4 floor building for sale in Vijay Nagar 4th stage 2nd phase rate 1.40 cr negotiable. Contact:
9964474120 / 8722993477

ಉದ್ಯೋಗ ಅವಕಾಶದ ಸೆಮಿನಾರ್
ಪ್ರಖ್ಯಾತ ಬ್ಯಾಂಕ್ ಸಮೂಹದಿಂದ ರಾಜ್ಯ/ಕೇಂದ್ರ ಸರ್ಕಾರಿ ನಿವೃತ್ತರಿಗೆ ಹಾಗೂ ಸ್ವಯಂ ನಿವೃತ್ತರು ಮತ್ತು ಬ್ಯಾಂಕ್ ನಿವೃತ್ತರಿಗೆ ಹಾಗೂ ಆಸಕ್ತ ಗೃಹಿಣಿಯರಿಗೆ ಉದ್ಯೋಗ ಅವಕಾಶ ಸೆಮಿನಾರ್ ಏರ್ಪಡಿಸಲಾಗಿದೆ benefits fixed Salary+PF+ESI+Variable Other Incentives
ಮುಖ್ಯವಾದ ದಾಖಲೆಗಳು: Pan card, Aadhar Card, SSLC And above, Bank Pass Book, Photo, ಈ ಪ್ರತಿಗಳನ್ನು ಸೆಮಿನಾರಿಗೆ ಬರುವಾಗ ತಪ್ಪದೇ ತರುವುದು. ಸೆಮಿನಾರ್ ನಡೆಯುವ ಸ್ಥಳ: ಮೌರ್ಯ ರೆಸಿಡೆನ್ಸಿ ಹೋಟೆಲ್, ಉಡ್‌ಲ್ಯಾಂಡ್ ಟಾಕೀಸ್ ಹತ್ತಿರ, ಮೈಸೂರು. ದಿನಾಂಕ: 15–06–2024, ಸಮಯ : 11 ಗಂಟೆಗೆ ಲಘು ಉಪಹಾರ ವ್ಯವಸ್ಥೆ ಇರುತ್ತದೆ.
9449068132, 7022034200

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮೈಸೂರು ಮಿತ್ರ

ಗುರುವಾರ 13 ಜೂನ್ 2024

ಮೈಸೂರಲ್ಲಿ ಬಸ್ ತಂಗುದಾಣಗಳು ಛಿದ್ರ–ವಿಛಿದ್ರ!

●ಕಬ್ಬಿಣದ ಶೀಟ್–ಸಲಾಕೆಗಳು ತುಕ್ಕು ಹಿಡಿದು ಅಸ್ಥಿಪಂಜರದಂತೆ ಗೋಚರಿಸುತ್ತಿರುವ ಶೆಲ್ಟರ್!!

●ಎಷ್ಟೋ ವರ್ಷಗಳಿಂದ ಸೂಕ್ತ ನಿರ್ವಹಣೆ ಇಲ್ಲದೇ ಸೋರುತ್ತಿದ್ದರೂ ಕಣ್ಮುಚ್ಚಿ ಕುಳಿತ ಪಾಲಿಕೆ





ಮೈಸೂರಿನ ಕೆಆರ್‌ಎಸ್ ರಸ್ತೆಯ ಹೆಚ್.ಸಿ.ದಾಸಪ್ಪ ವೃತ್ತದ ಸಮೀಪದ ಬಸ್ ನಿಲ್ದಾಣದ ಶೆಲ್ಟರ್ ದುಸ್ಥಿತಿಯಲ್ಲಿರುವುದು. ಇದರ ಪಕ್ಕದಲ್ಲೇ ಇರುವ ಮತ್ತೊಂದು ಶೆಲ್ಟರ್ ಸಹ ಅದರಂತೆಯೇ ಸೊರಗಿರುವುದು. ಜೊತೆಗೆ ಇಲ್ಲಿಗೆ ಪ್ರಯಾಣಿಕರೇ ಸುಳಿಯದೇ ಅನತಿ ದೂರದಲ್ಲಿ ಬಸ್‌ಗಳು ನಿಲ್ಲುತ್ತಿರುವ ಹಿನ್ನೆಲೆಯಲ್ಲಿ ಎರಡೂ ಶೆಲ್ಟರ್‌ಗಳು ಪ್ರಯಾಣಿಕರೇ ಇಲ್ಲದೆ ಬಿಕೋ ಎನ್ನುತ್ತಿರುವುದನ್ನು ಕಾಣಬಹುದು.

ಮೈಸೂರು,ಜೂ.12(ಪಿಎಂ)– ಕೂರಲು ಆಸನಗಳಿಲ್ಲ, ಬಗೆಬಗೆಯ ಭಿತ್ತಿಪತ್ರ–ಕರಪತ್ರಗಳ ಹಾವಳಿ ಯಿಂದ ಅಂದಗೆಟ್ಟಿರುವುದು, ಸ್ವಚ್ಛತೆ ಇಲ್ಲದಿರುವುದು, ಪ್ರಯಾಣಿಕರಿಗೆ ಯಾವುದೇ ಅಗತ್ಯ ಮಾಹಿತಿ ಇಲ್ಲದಿರುವುದು, ರಾತ್ರಿ ವೇಳೆ ಕತ್ತಲು ಆವರಿಸುವುದು ಮೈಸೂರು ನಗರದ ಭಾಗಶಃ ಪ್ರಯಾಣಿಕರ ತಂಗುದಾಣಗಳ ಅರ್ಥಾತ್ ಬಸ್ ನಿಲ್ದಾಣದ ಶೆಲ್ಟರ್‌ಗಳ ದುಸ್ಥಿತಿಯಾಗಿದೆ.

ಒಟ್ಟಾರೆ ಇವು ಇದ್ದೂ ಪ್ರಯಾಣಿಕರಿಗೆ ಪ್ರಯೋಜನಕ್ಕೆ ಬಾರದೇ ನಿರರ್ಥಕವಾಗಿವೆ. ನಗರದ ಹಲವೆಡೆ ಬಸ್ ನಿಲ್ದಾಣದ ಶೆಲ್ಟರ್‌ಗಳೇ ಇಲ್ಲವಾದರೆ, ಇರುವ ಶೆಲ್ಟರ್‌ಗಳು ಸೂಕ್ತ ನಿರ್ವಹಣೆ ಇಲ್ಲದೇ ಸೊರಗುತ್ತಿವೆ. ಆ ಮೂಲಕ ಮೂಲ ಉದ್ದೇಶ ಈಡೇರದೇ ಪ್ರಯಾಣಿಕರಿಗೆ ಪ್ರಯೋಜನಕ್ಕೆ ಬಾರದಾಗಿವೆ.

ಪ್ರಯಾಣಿಕರು ತೆರಳುವ ಮಾರ್ಗದೆಡೆಗೆ ಬಸ್ ಬರುವವರೆಗೆ ಆಶ್ರಯ ನೀಡಬೇಕಿರುವ ಶೆಲ್ಟರ್‌ಗಳನ್ನು ನೋಡಿದರೆ ಅವುಗಳೆಲ್ಲಿ ಕುಸಿದು ಬೀಳುತ್ತವೆಯೋ ಎಂಬ ಆತಂಕ ಮೂಡಿಸುತ್ತಿವೆ. ಬಹುತೇಕ ಬಸ್ ಶೆಲ್ಟರ್‌ಗಳ ಮೇಲ್ಛಾವಣಿಗಳು ಹಾನಿಗೊಳಗಾಗಿದ್ದು, ಮಳೆ ಬಂದರೆ ಸೋರುವಂತಹ ಸನ್ನಿವೇಶ ನಿರ್ಮಾಣವಾಗಿದೆ. ಕಬ್ಬಿಣದ ಶೀಟ್‌ಗಳಿಂದ ನಿರ್ಮಿಸಿರುವ ಶೆಲ್ಟರ್‌ಗಳೇ ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದು, ಅವುಗಳ ಸಮರ್ಪಕ ನಿರ್ವಹಣೆಯನ್ನು ಮೈಸೂರು ಮಹಾನಗರ ಪಾಲಿಕೆ ಮರೆತಿರುವ ಹಿನ್ನೆಲೆಯಲ್ಲಿ ಅವುಗಳು ತುಕ್ಕು ಹಿಡಿದು ಹಾನಿಗೊಳಗಾಗಿ ಅಪ್ರಯೋಜಕವಾಗಿವೆ.

ಎಷ್ಟೋ ವರ್ಷಗಳಿಂದ ಇದೇ ದುಸ್ಥಿತಿಯಲ್ಲಿ ಬಸ್ ನಿಲ್ದಾಣದ ಶೆಲ್ಟರ್‌ಗಳು ಇದ್ದರೂ ಅವುಗಳ ಸೂಕ್ತ ನಿರ್ವಹಣೆಗೆ ಮೈಸೂರು ಮಹಾನಗರ ಪಾಲಿಕೆ ಮುಂದಾಗುತ್ತಲೇ ಇಲ್ಲ. ಸಯ್ಯಾಜಿರಾವ್ ರಸ್ತೆಯ ಸುಭಾಷ್ ಚಂದ್ರ ಬೋಸ್ ವೃತ್ತದ ಬಳಿ ಇರುವ ಬಸ್ ನಿಲ್ದಾಣದ ಶೆಲ್ಟರ್ ಸಹ ಈಗಾಗಲೇ ಹೇಳಿದ ಎಲ್ಲಾ ಸಮಸ್ಯೆಗಳನ್ನು ಮೈಗೂಡಿಸಿಕೊಂಡಿದ್ದು, ಪ್ರಯಾಣಿಕರ ಬಳಕೆಗೆ ಯೋಗ್ಯವಾಗಿಲ್ಲ. ಈ ನಡುವೆ ಇದರ ಎದುರು ನಗರ ಸಾರಿಗೆ ಬಸ್‌ಗಳು ನಿಲುಗಡೆ ಮಾಡುತ್ತವೋ ಇಲ್ಲವೋ, ಆದರೆ ಹಲವು ಆಟೋ ರಿಕ್ಷಾಗಳು ನಿಲ್ಲುವ ಮೂಲಕ ಅವುಗಳದ್ದೇ ನಿಲ್ದಾಣ ಎನ್ನುವಂತೆ ಇಲ್ಲಿನ ಪರಿಸ್ಥಿತಿ ಆಗಿದೆ. ಕಬ್ಬಿಣದ ಶೀಟ್‌ಗಳ ಚೌಕಟ್ಟಿನ ವಿನ್ಯಾಸದಿಂದ ನಿರ್ಮಿಸಿರುವ ಭಾಗಶಃ ಬಸ್ ನಿಲ್ದಾಣದ ಶೆಲ್ಟರ್‌ಗಳಲ್ಲಿ ಟ್ಯೂಬ್‌ಲೈಟ್‌ಗಳ ಮೇಲಿನ ಹೊದಿಕೆ ಕಿತ್ತು ಬಂದಿದ್ದು, ನಿಲ್ದಾಣದ ಹೆಸರೇ ಕಾಣದಾಗಿವೆ ಹಾಗಾಗಿ ಪ್ರಯಾಣಿಕರು ಯಾವ ನಿಲ್ದಾಣದಲ್ಲಿದ್ದೇವೆ ಎಂದು ತಿಳಿದುಕೊಳ್ಳುವುದೂ ಕಷ್ಟವಾಗಿದೆ. ಪ್ರವಾಸಿಗರೋ ಇಲ್ಲ ಊರಿಗೆ ಹೊಸಬರೋ ಆದರಂತೂ ಎಲ್ಲಿದ್ದೇವೆ ಎಂದು ಗೊತ್ತಾಗದೇ ಪರದಾಡದೇ ವಿಧಿಯಿಲ್ಲ. ಈ ವಿಧದ ಶೆಲ್ಟರ್‌ಗಳಲ್ಲಿ ಯಾವುದಕ್ಕೂ ವಿದ್ಯುತ್ ಸಂಪರ್ಕ ಇಲ್ಲದ ಹಿನ್ನೆಲೆಯಲ್ಲಿ ರಾತ್ರಿ ಆಗುತ್ತಿದ್ದಂತೆ ಇಲ್ಲೆಲ್ಲಾ ಕತ್ತಲು ಆವರಿಸಲಿದೆ. ಬೀದಿದೀಪ ಇಲ್ಲವೇ ಸುತ್ತಮುತ್ತಲ ಅಂಗಡಿ ಮುಂಗಟ್ಟುಗಳ ದೀಪದ ಬೆಳಕು ಒಂದಿಷ್ಟು ಸೂಸಿದರಷ್ಟೇ ಇಲ್ಲಿ ರಾತ್ರಿ ವೇಳೆ ಪ್ರಯಾಣಿಕರು ನಿಲ್ಲಲು ಸಾಧ್ಯ. ಇಲ್ಲವಾದರೆ ಇತ್ತ ಸುಳಿಯಲೂ ಸಾಧ್ಯವಿಲ್ಲದಷ್ಟು ಕತ್ತಲು ಆವರಿಸಲಿದೆ.



ದುಸ್ಥಿತಿಯಲ್ಲಿರುವ ಶೆಲ್ಟರ್ ಎದುರು ಆಟೋಗಳ ನಿಲುಗಡೆ



ಕೆಆರ್ ಆಸ್ಪತ್ರೆ ಎದುರಿನ ಬಸ್ ನಿಲ್ದಾಣದ ಶೆಲ್ಟರ್.

ಕೆಆರ್ ಆಸ್ಪತ್ರೆಗೆ ಹೋಗಿಬರಲು ಇರ್ವಿನ್ ರಸ್ತೆಯಲ್ಲಿರುವ ಬಸ್ ನಿಲ್ದಾಣದ ಶೆಲ್ಟರ್‌ಗಳು ಇದೇ ರೀತಿಯಲ್ಲಿ ದುಸ್ಥಿತಿಯಲ್ಲಿರುವ ಕಾರಣ ಮೈಸೂರು ವೈದ್ಯಕೀಯ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಆರ್ ಆಸ್ಪತ್ರೆಗೆ ಭೇಟಿ ನೀಡುವ ರೋಗಿಗಳ ಸಂಬಂಧಿಕರಿಗೆ ಅನಾನುಕೂಲ ಉಂಟಾಗಿದೆ. ಮೈಸೂರಿನ ಕೆಆರ್‌ಎಸ್ ರಸ್ತೆಯ ವಾಣಿವಿಲಾಸ ಮೊಹಲ್ಲಾದ ಬಸ್ ನಿಲ್ದಾಣದ ಶೆಲ್ಟರ್, ಇದೇ ರಸ್ತೆಯ ಗೋಕುಲಂ ಆರ್ಚ್ ಬಳಿ ಇರುವ ಶೆಲ್ಟರ್ ಸಹ ಇಂತಹದ್ದೇ ಸಮಸ್ಯೆಗಳಿಂದ ಬಳಲುತ್ತಿವೆ. ಇನ್ನು ಈ ಶೆಲ್ಟರ್‌ಗಳಲ್ಲಿ ಅಳವಡಿಸಿದ್ದ ಮಾರ್ಗ, ಬಸ್ ಸಂಖ್ಯೆ ಮೊದಲಾದ ಮಾಹಿತಿ ಒದಗಿಸುವ ಡಿಜಿಟಲ್ ಬೋರ್ಡ್‌ಗಳು ಕೆಟ್ಟು ಪ್ರಯೋಜನಕ್ಕೆ ಬಾರದಾಗಿವೆ. ದುರಂತವೆಂದರೆ ಹಲವು ಶೆಲ್ಟರ್‌ಗಳಲ್ಲಿ ಈ ಬೋರ್ಡ್‌ಗಳೇ ನಾಪತ್ತೆಯಾಗಿವೆ.

ಕೆಆರ್‌ಎಸ್ ರಸ್ತೆಯ ಹೆಚ್.ಸಿ.ದಾಸಪ್ಪ ವೃತ್ತದ ಬಳಿಯ ಬಸ್ ನಿಲ್ದಾಣದ ಎರಡು ಶೆಲ್ಟರ್‌ಗಳಲ್ಲಿ ಒಂದೂ ಆಸನ ಕೂಡ ಇಲ್ಲ. ದುರಂತವೆಂದರೆ ಬಸ್‌ಗಳು ಇಲ್ಲಿಗೆ ಬರುವುದೂ ಇಲ್ಲ. ಬದಲಿಗೆ ಅವು ಇನ್ನೂ ದೂರದಲ್ಲೇ ನಿಲುಗಡೆ ಮಾಡಿ ಹೋಗುವ ಕಾರಣ ಪ್ರಯಾಣಿಕರು ಈ ಶೆಲ್ಟರ್‌ಗಳತ್ತ ಸುಳಿಯುತ್ತಲೇ ಇಲ್ಲ. ಇನ್ನು ಇದರ ಎದುರಿನ ಮತ್ತೊಂದು ಶೆಲ್ಟರ್‌ನಲ್ಲೂ ಆಸನಗಳು ಮಾಯವಾಗಿವೆ. ಶೆಲ್ಟರ್‌ಗಳು ಇದ್ದೂ ಅವುಗಳತ್ತ ಪ್ರಯಾಣಿಕರು ಸುಳಿಯದೇ ಅವುಗಳ ಮುಂಭಾಗವೋ ಇಲ್ಲ ಅನತಿ ದೂರದಲ್ಲೋ ನಿಂತು ಬಸ್‌ಗಾಗಿ ಕಾಯುವ ಪರಿಸ್ಥಿತಿ ಬಹುತೇಕ ನಗರದೆಲ್ಲೆಡೆ ಸಾಮಾನ್ಯವಾಗಿದೆ.



ಕೆಆರ್‌ಎಸ್ ರಸ್ತೆಯ ವಾಣಿ ವಿಲಾಸ ಮೊಹಲ್ಲಾದ ಶೆಲ್ಟರ್

ಇನ್ನು ವಿಶ್ವವಿಖ್ಯಾತ ಮೈಸೂರು ಅರಮನೆಯ ವರಹ ದ್ವಾರದ ಬಳಿಯ ಬಸ್ ನಿಲ್ದಾಣದ ಶೆಲ್ಟರ್‌ನ ಮೇಲ್ಛಾವಣಿ ದುರ್ಬಲಗೊಂಡಿದ್ದು, ಮಳೆ ಬಂದರೆ ಸೋರುವಂತಾಗಿದೆ. ಶುಚಿತ್ವವೂ ಇಲ್ಲದೇ ದುರ್ನಾತ ಸೂಸುವಂತಿದೆ. ಜೊತೆಗೆ ಇದರ ಆಸುಪಾಸಿನಲ್ಲಿ ತರಕಾರಿ ಸೇರಿದಂತೆ ಇನ್ನಿತರ ಹಸಿ ತ್ಯಾಜ್ಯದ ನಡುವೆ ಇಲಿ ಹೆಗ್ಗಣಗಳು ಓಡಾಡುವ ಸನ್ನಿವೇಶ ನಿರ್ಮಾಣವಾಗಿದೆ. ಇಲ್ಲಿನ ಕಸದ ಬುಟ್ಟಿಗಳು ಭರ್ತಿಯಾಗಿ ಎಷ್ಟೋ ದಿನಗಳಾಗಿರುವಂತಿದ್ದು, ಪಾಲಿಕೆ ಮಾತ್ರ ಅದರ ತೆರವಿಗೆ ಮುಂದಾಗಿಲ್ಲ.

ದೇಶ–ವಿದೇಶದ ಪ್ರವಾಸಿಗರು ಭೇಟಿ ನೀಡುವ ಐತಿಹಾಸಿಕ ಅರಮನೆ ಬಳಿಯ ಬಸ್ ನಿಲ್ದಾಣದ ಶೆಲ್ಟರ್ ಪರಿಸ್ಥಿತಿಯೇ ಹೀಗಾದರೆ ನಗರದ ವಿವಿಧ ಬಡಾವಣೆಗಳಲ್ಲಿನ ನಿಲ್ದಾಣದ ಶೆಲ್ಟರ್‌ಗಳ ನಿರ್ವಹಣೆ ಇನ್ನಾವ ರೀತಿ ಇರುತ್ತದೆ ಎಂದು ಊಹಿಸುವುದು ಕಷ್ಟವೇನಲ್ಲವೆಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಅಲ್ಲದೆ, ಹಲವೆಡೆ ಇರುವ ಕಾಂಕ್ರೀಟ್ ನಿರ್ಮಾಣದ ಶೆಲ್ಟರ್‌ಗಳ ಪರಿಸ್ಥಿತಿ ಸಹ ಇದಕ್ಕಿಂತೇನೂ ಭಿನ್ನವಿಲ್ಲ. ಅವುಗಳೂ ಸೂಕ್ತ ನಿರ್ವಹಣೆ ಇಲ್ಲದೇ ಸೊರಗುತ್ತಾ ಪ್ರಯಾಣಿಕರಿಗೆ ಪ್ರಯೋಜನಕ್ಕೆ ಬಾರದಾಗಿವೆ. ಇನ್ನಾದರೂ ಎಚ್ಚೆತ್ತು ಇವುಗಳ ಸೂಕ್ತ ನಿರ್ವಹಣೆಗೆ ಕ್ರಮ ವಹಿಸಿದರೆ ಅವುಗಳಿಗೆ ಉಂಟಾಗುವ ಇನ್ನಷ್ಟು ಹಾನಿ ತಡೆಗಟ್ಟುವ ಜೊತೆಗೆ ಪ್ರಯಾಣಿಕರಿಗೂ ಅನುಕೂಲ ಕಲ್ಪಿಸಿದಂತಾಗುತ್ತದೆ ಎನ್ನುತ್ತಾರೆ ಸಾರ್ವಜನಿಕರು.

ಶೆಲ್ಟರ್‌ಗಳೆಲ್ಲಾ ಜಾಹೀರಾತು ಪ್ರದರ್ಶಕ ವೇದಿಕೆಗಳು...

ಸಂಘ ಸಂಸ್ಥೆಗಳ ಜಾಹೀರಾತು ಪ್ರಕಟಣೆಗಳ ಪ್ರದರ್ಶನಕ್ಕೆ ಬಸ್ ನಿಲ್ದಾಣದ ಶೆಲ್ಟರ್‌ಗಳು ವೇದಿಕೆಗಳಾಗಿ ಬಳಕೆಯಾಗುತ್ತಿವೆ. ಈ ಪೈಕಿ ಇತ್ತೀಚೆಗೆ ವಿಶೇಷ ವಿನ್ಯಾಸದಲ್ಲಿ ನಿರ್ಮಿಸಿರುವ ಗೋಕುಲಂನ ಕೆಆರ್‌ಎಸ್ ರಸ್ತೆಯ ಬಸ್ ನಿಲ್ದಾಣದ ಶೆಲ್ಟರ್‌ಗೂ ಜಾಹೀರಾತು ಪ್ರಕಟಣೆಗಳ ಹಾವಳಿ ತಪ್ಪಿಲ್ಲ. 2021–22ನೇ ಸಾಲಿನ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯ ಅನುದಾನದಲ್ಲಿ ನಿರ್ಮಾಣಗೊಂಡ ಹಸು–ಕರು ಪಾರ್ಕ್ ಸಮೀಪದ ಬಸ್ ನಿಲ್ದಾಣದ ವ್ಯಥೆ ಇದು. ಇನ್ನು ಇದರ ಎದುರು ನಗರದಿಂದ ಹೊರವಲಯದ ಬಡಾವಣೆಯ ಮಾರ್ಗದೆಡೆಗೆ ಸಾಗಬೇಕಾದವರ ಅನುಕೂಲಕ್ಕೆ ಶೆಲ್ಟರ್ ಸೌಲಭ್ಯವೇ ಇಲ್ಲ. ಇಂತಹ ಪರಿಸ್ಥಿತಿ ನಗರದ ಹಲವೆಡೆ ಇದೆ.





ಇತ್ತೀಚೆಗೆ ನಿರ್ಮಾಣಗೊಂಡ ಮೈಸೂರಿನ ಕೆಆರ್‌ಎಸ್ ರಸ್ತೆಯ ಹಸು–ಕರು ಪಾರ್ಕ್ ಬಳಿಯ ಪ್ರಯಾಣಿಕರ ತಂಗುದಾಣವನ್ನು ಸುಂದರವಾಗಿ ನಿರ್ಮಿಸಿದ್ದರು; ಕೆಲ ವಿವೇಕ ರಹಿತ ಜನ ಜಾಹೀರಾತು ಪೋಸ್ಟರ್ ಅಂಟಿಸಿದ್ದು, ಅದು ಅಂದಗೆಟ್ಟಿರುವುದನ್ನು ಕಾಣಬಹುದು. ಮತ್ತೊಂದು ಚಿತ್ರದಲ್ಲಿ ಈ ತಂಗುದಾಣದ ಹಿಂಬದಿಯಲ್ಲಿ ಮೇಲ್ಛಾವಣಿಗೆ ಬಿದ್ದ ಮಳೆ ನೀರು ವ್ಯವಸ್ಥಿತವಾಗಿ ಹರಿದು ಹೋಗಲು ಮಾಡಿರುವ ನಿರ್ಮಾಣ ಕುಸಿದು ಬಿದ್ದಿರುವುದನ್ನು ಕಾಣಬಹುದು.

ಬೆಳೆಗಳಿಗೆ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ವಿಮೆ ಮಾಡಿಸಿಕೊಳ್ಳಿ

ರೈತರಿಗೆ ಸಹಾಯಕ ಕೃಷಿ ನಿರ್ದೇಶಕ ಬಿ.ಡಿ.ಜಯರಾಮ್ ಸಲಹೆ



ಮೈಸೂರು ತಾಲೂಕಿನ ಜಯಪುರದಲ್ಲಿ ಬೆಳೆ ವಿಮೆ ಕುರಿತಂತೆ ತಾಲೂಕು ಸಹಾಯಕ ಕೃಷಿ ನಿರ್ದೇಶಕ ಬಿ.ಡಿ.ಜಯರಾಮ್ ಜಾಗೃತಿ ಮೂಡಿಸಿದರು.

ಮೈಸೂರು, ಜೂ.12(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಆರಂಭವಾಗಿದ್ದು, ರೈತರು ತಾವು ಬಿತ್ತನೆ ಮಾಡಿದ ಬೆಳೆಗಳಿಗೆ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆಯಡಿ ವಿಮೆ ಮಾಡಿಸಿಕೊಳ್ಳುವಂತೆ ತಾಲೂಕು ಸಹಾಯಕ ಕೃಷಿ ನಿರ್ದೇಶಕ ಬಿ.ಡಿ.ಜಯರಾಮ್ ಸಲಹೆ ನೀಡಿದ್ದಾರೆ.

ಮೈಸೂರು ತಾಲೂಕಿನ ಜಯಪುರದಲ್ಲಿ ಬೆಳೆ ವಿಮೆ ಕುರಿತಂತೆ ಜಾಗೃತಿ ಅಭಿಯಾನದಲ್ಲಿ ಮಾತನಾಡಿದ ಅವರು, ಮೈಸೂರು ತಾಲೂಕಿನಲ್ಲಿ 2024–25ನೇ ಸಾಲಿನ ಮುಂಗಾರು ಹಂಗಾಮಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆ ಅನುಷ್ಠಾನಗೊಳಿಸಲಾಗಿದ್ದು, ರೈತರು ತಮ್ಮ ಬೆಳೆಗಳು ಅತಿವೃಷ್ಟಿ ಅಥವಾ ಅನಾವೃಷ್ಟಿಯಂತಹ ಪ್ರಕೃತಿ ವಿಕೋಪಗಳಿಂದ ನಷ್ಟವಾದರೆ ಈ ಯೋಜನೆಯಡಿ ವಿಮೆ ಪರಿಹಾರ ಪಡೆದುಕೊಳ್ಳಬಹುದಾಗಿದೆ. ಅದಕ್ಕಾಗಿ ಎಲ್ಲಾ ರೈತರು ಕಡ್ಡಾಯವಾಗಿ ವಿಮಾ ಸೌಲಭ್ಯಕ್ಕೆ ಹೆಸರು ನೋಂದಾಯಿಸಿಕೊಳ್ಳಬೇಕು. ಪ್ರಸಕ್ತ ಸಾಲಿನಲ್ಲಿ ತಾಲೂಕಿನಲ್ಲಿ 15 ಬೆಳೆಗಳಿಗೆ ವಿಮೆ ಮಾಡಿಸಲು ಅವಕಾಶವಿದ್ದು, ತಾಲೂಕು, ಹೋಬಳಿ ಮತ್ತು ಗ್ರಾಮ ಪಂಚಾಯತ್‌ವಾರು ಅಧಿಸೂಚಿಸಲಾಗಿರುವ ವಿವಿಧ ಬೆಳೆಗಳ ವಿಮಾ ಮೊತ್ತ ವಿಮಾ ಕಂತು ಮತ್ತು ನೋಂದಣಿಯ ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಳಿಗಾಗಿ ಹೋಬಳಿಯ ರೈತ ಸಂಪರ್ಕ ಕೇಂದ್ರ ಅಥವಾ ಗ್ರಾಮ ಒನ್ ಕೇಂದ್ರಗಳನ್ನು ಸಂಪರ್ಕಿಸುವಂತೆ ಕೋರಿದರು.

ಈ ಸಂದರ್ಭದಲ್ಲಿ ಕೃಷಿ ಅಧಿಕಾರಿ ಆನಂದಕುಮಾರ್, ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಎಸ್.ಜೆ.ಹೇಮಂತ್, ತಾಂತ್ರಿಕ ಸಹಾಯಕಿ ಅಮೃತವಾಣಿ ಹಾಗೂ ಗ್ರಾಮ ಆಡಳಿತ ಅಧಿಕಾರಿಗಳಾದ ಭಾಸ್ಕರ್, ಶಿವಕುಮಾರ್ ಮತ್ತು ರೈತರು ಉಪಸ್ಥಿತರಿದ್ದರು.

ಎನ್‌ಆರ್ ಕ್ಷೇತ್ರದಲ್ಲಿ ಇಂದು ಯದುವೀರ್ ಪ್ರವಾಸ



ಮೈಸೂರು,ಜೂ.12(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ನೂತನ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಜೂ.13ರಂದು ಮೈಸೂರಿನ ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ (ಎನ್‌ಆರ್ ಕ್ಷೇತ್ರ) ಪ್ರವಾಸ ಕೈಗೊಳ್ಳಲಿದ್ದಾರೆ. ಅಂದು ಮಧ್ಯಾಹ್ನ 3ಕ್ಕೆ ಕ್ಯಾತಮಾರನ ಹಳ್ಳಿ ಹುಲಿಯಮ್ಮನ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಅಂತೆಯೇ ಮಧ್ಯಾಹ್ನ 3.15ಕ್ಕೆ ಕೆಎನ್ ಪುರ ಮಾದೇಶ್ವರ ದೇವಸ್ಥಾನ, ಸಂಜೆ 4ಕ್ಕೆ ಭಾಗ್ಯಜ್ಯೋತಿ ಸ್ಕೂಲ್ ಚಾಮುಂಡೇಶ್ವರಿ ದೇವಸ್ಥಾನ, ಸಂಜೆ 4.15ಕ್ಕೆ ರಾಘವೇಂದ್ರನಗರದ ಮಾರಮ್ಮನ ದೇವಸ್ಥಾನ, ಸಂಜೆ 4.30ಕ್ಕೆ ಗಾಯಿತ್ರಿಪುರಂನ ಚಾಮುಂಡೇಶ್ವರಿ ದೇವಸ್ಥಾನ, ಸಂಜೆ 4.45ಕ್ಕೆ ಗಾಯಿತ್ರಿಪುರಂನ ಪೌರಕಾರ್ಮಿಕರ ಕಾಲೋನಿ, ಸಂಜೆ 5ಕ್ಕೆ ಯರಗನಹಳ್ಳಿ ಮಾರಮ್ಮನ ದೇವಸ್ಥಾನ, ಸಂಜೆ 5.15ಕ್ಕೆ ಮಾರುತಿ ಸರ್ಕಲ್, ಸಂಜೆ 5.30ಕ್ಕೆ ಗಣೇಶನಗರ ಚಾಮುಂಡೇಶವರಿ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ. ಅದೇ ರೀತಿ ಸಂಜೆ 5.45ಕ್ಕೆ ಕುರಿಮಂಡಿ ಕರಿಮಾರಮ್ಮನ ದೇವಸ್ಥಾನ, ಸಂಜೆ 6ಕ್ಕೆ 1008 ಗಣಪತಿ ದೇವಸ್ಥಾನ, ಸಂಜೆ 6.15ಕ್ಕೆ ಬನ್ನಿಮಂಟಪ ಸೋಮೇಶ್ವರ ದೇವಸ್ಥಾನ, ಸಂಜೆ 6.30ಕ್ಕೆ ಗಾಂಧಿನಗರ ದೇವಸ್ಥಾನ, ರಾತ್ರಿ 7.15ಕ್ಕೆ ವೀರನಗೆರೆ ಗಣಪತಿ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ ಎಂದು ಎನ್‌ಆರ್ ಕ್ಷೇತ್ರದ ಬಿಜೆಪಿ ಪ್ರಕಟಣೆ ತಿಳಿಸಿದೆ.

ಇಂದು ಹರಿವಿದ್ಯಾಲಯದಲ್ಲಿ ಕೃಪಾಕರ ಸೇನಾನಿ ಸಂವಾದ

ಮೈಸೂರು, ಜೂ.12– ಬೋಗಾದಿಯ ಹರಿವಿದ್ಯಾಲಯದಲ್ಲಿ ಜೂ. 13 ರಂದು ಪ್ರಸಿದ್ಧ ವನ್ಯಜೀವಿ ಛಾಯಾಗ್ರಾಹಕರು ಹಾಗೂ ಸಾಕ್ಷ್ಯಚಿತ್ರ ನಿರ್ದೇಶಕರಾಗಿರುವ ಕೃಪಾಕರ ಸೇನಾನಿ ಅವರು ಮಕ್ಕಳೊಡನೆ ಶಾಲೆಯ ಸಭಾಂಗಣದಲ್ಲಿ ಬೆಳಗ್ಗೆ 11.30ಕ್ಕೆ ಸಂವಾದ ನಡೆಸಲಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ದಾಸಪ್ಪ ವೃತ್ತದಲ್ಲಿದ್ದ ಜಲ್ಲಿಕಲ್ಲು ರಾಶಿ ತೆರವು; ಮಿತ್ರನ ಫಲಶ್ರುತಿ



ಮೈಸೂರು,ಜೂ.12(ಪಿಎಂ)– ಮೈಸೂರಿನ ಹೆಚ್.ಸಿ.ದಾಸಪ್ಪ ವೃತ್ತದಲ್ಲಿ ಹರಡಿದ್ದ ಜಲ್ಲಿಕಲ್ಲುಗಳ ರಾಶಿಯನ್ನು ತೆರವುಗೊಳಿಸಲಾಗಿದೆ. 'ಹೆಚ್.ಸಿ.ದಾಸಪ್ಪ ವೃತ್ತದಲ್ಲಿ ವಾಹನ ಚಾಲಕರಿಗೆ ಸಂಚಕಾರ ತಂದಿರುವ ಜಲ್ಲಿಕಲ್ಲು' ಶೀರ್ಷಿಕೆಯಡಿ 'ಮೈಸೂರು ಮಿತ್ರ'ನ ಜೂ.12ರ ಸಂಚಿಕೆಯಲ್ಲಿ ಸುದ್ದಿ ಪ್ರಕಟಿಸಿ, ಸಂಬಂಧಿಸಿದವರ ಗಮನ ಸೆಳೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ವೃತ್ತದಲ್ಲಿ ಹರಡಿದ್ದ ಜಲ್ಲಿಕಲ್ಲುಗಳನ್ನು ಸ್ಥಳೀಯ ಆಡಳಿತ ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದೆ.

ನಾಗರಹೊಳೆ ಅರಣ್ಯದಲ್ಲಿ ನಡೆದಿರುವ ಕಾದಾಟದಲ್ಲಿ ಗಂಡು ಹುಲಿ ಸಾವು



ಮೈಸೂರು,ಜೂ.12(ಎಂಟಿವೈ)– ನಾಗರಹೊಳೆ ಹುಲಿ ಸಂರಕ್ಷಿತ ಆನೆಚೌಕೂರು ಶಾಖೆಯ ಅರಣ್ಯ ಪ್ರದೇಶದಲ್ಲಿ ಹುಲಿ ಮೃತದೇಹವೊಂದು ಪತ್ತೆಯಾಗಿದ್ದು, ಮತ್ತೊಂದು ಹುಲಿಯೊಂದಿಗೆ ಸರಹದ್ದು ಕಾದಾಟದಿಂದ ಹುಲಿ ಸಾವನ್ನಪ್ಪಿದೆ ಎಂದು ಅರಣ್ಯಾಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹುಣಸೂರು ವನ್ಯಜೀವಿ ವಲಯದ ಆನೆಚೌಕೂರು ಭಾಗ–1ರ ಲಕ್ಷ್ಮೀಪುರ ಕಳ್ಳಬೇಟೆ ತಡೆ ಶಿಬಿರದ ಗೋವಿಂದೇಗೌಡ ಕಂಡಿ ಎಂಬಲ್ಲಿ ಗಸ್ತು ಸಿಬ್ಬಂದಿಗಳಿಗೆ ಕೆಟ್ಟ ವಾಸನೆ ಗ್ರಹಿಸಿದೆ. ಕೂಡಲೇ ವಾಸನೆ ಜಾಡು ಹಿಡಿದು ತೆರಳಿ ಪರಿಶೀಲಿಸಿದಾಗ ಹುಲಿ ಕಳೇಬರ ಪತ್ತೆಯಾಗಿದ್ದು, ಅದನ್ನು ಪರಿಶೀಲಿಸಿದ ಬಳಿಕ ಮತ್ತೊಂದು ಈ ಹುಲಿಯೊಂದಿಗೆ ನಡೆಸಿದ ಕಾದಾಟದಲ್ಲಿ ಗಾಯಗೊಂಡು ಸಾವನ್ನಪ್ಪಿರುವುದು ದೃಢಪಟ್ಟಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಎಸಿಎಫ್ ಡಿ.ಎಸ್.ದಯಾನಂದ, ಪಶುವೈದ್ಯರಾದ ಡಾ.ರಮೇಶ, ಹಿರಿಯ ವೈದ್ಯ ಡಾ.ಬಿ.ಸಿ.ಚಿಟ್ಟಿಯಪ್ಪ ಹಾಗೂ ಇನ್ನಿತರರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು. ಮೃತಪಟ್ಟಿರುವ ಹುಲಿ 5 ವರ್ಷದ್ದಾಗಿದ್ದು, ಮತ್ತೊಂದು ಹುಲಿಯೊಂದಿಗೆ ಕಾದಾಟ ನಡೆಸಿ, ಗಂಭೀರವಾಗಿ ಗಾಯಗೊಂಡು ಮೃತಪಟ್ಟಿರುವುದನ್ನು ಪಶುವೈದ್ಯರು ಖಚಿತಪಡಿಸಿದ್ದಾರೆ. ನಿಯಮಾನುಸಾರ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಬಳಿಕ ಹಿರಿಯ ಅಧಿಕಾರಿ ಗಳೊಂದಿಗೆ ವೈಲ್ಡ್‌ಲೈಫ್ ವಾರ್ಡನ್ ಕೃತಿಕಾ ಆಲನಹಳ್ಳಿ, ಎನ್‌ಟಿಸಿಎ ಪ್ರತಿನಿಧಿ ಕೆ.ವಿ.ಬೋಸ್ ಮಾದಪ್ಪ, ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿ ಸಿ.ಕೆ.ತಮ್ಮಯ್ಯ, ಚೌತಿ ಗ್ರಾ.ಪಂ ಅಧ್ಯಕ್ಷ ಸಿ.ಎನ್.ಸ್ವಾಮಿ, ಗ್ರಾ.ಪಂ ಸದಸ್ಯ ಸಿ.ಎಸ್.ಮುತ್ತುರಾಜ್, ಆರ್‌ಎಫ್‌ಓ ಕೆ.ಇ.ಸುಬ್ರಹ್ಮಣ್ಯ ಹಾಗೂ ಇನ್ನಿತರರ ಸಮ್ಮುಖದಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಆನೆಚೌಕೂರು ಶಾಖೆಯ ಅರಣ್ಯ ಪ್ರದೇಶದಲ್ಲಿ ಪತ್ತೆಯಾದ ಹುಲಿ ಮೃತದೇಹವನ್ನು ಅಂತ್ಯಕ್ರಿಯೆ ಮಾಡಲಾಯಿತು.

ಬಸವಣ್ಣ ಈ ಜಗತ್ತು ಕಂಡ ಶ್ರೇಷ್ಠ ಸಂತ

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಭಿಮತ



ನಂಜನಗೂಡಿನ ಮಂಗಳ ಮಂಟಪದಲ್ಲಿ ಅಖಿಲಭಾರತ ವೀರಶೈವ ತಾಲೂಕು ಘಟಕ ಏರ್ಪಡಿಸಿದ್ದ ವಿಶ್ವಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ನಂಜನಗೂಡು, ಜೂ.12– ಬಸವಣ್ಣನವರು ಈ ಜಗತ್ತು ಕಂಡ ಶ್ರೇಷ್ಠ ಸಂತ, ಅವರು 900 ವರ್ಷಗಳ ಹಿಂದೆ ಧರ್ಮ ಮತ್ತು ಆಧ್ಯಾತ್ಮದ ತಳಹದಿಯ ಮೇಲೆ ಕಟ್ಟಿದ ಶರಣ ಸಂಸ್ಕೃತಿ ಎಲ್ಲ ಕಾಲಕ್ಕೂ ಸಲ್ಲುತ್ತದೆ ಎಂದು ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನಗರದ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಬುಧವಾರ ಅಖಿಲ ಭಾರತ ವೀರ ಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಷ್ಯಾ ಕ್ರಾಂತಿ, ಕಾರ್ಲ್ ಮಾರ್ಕ್ಸ್ ತತ್ವಗಳು ಜಗತ್ತಿನಲ್ಲಿ ಶಾಶ್ವತ ಎಂದು ಭಾವಿಸಲಾಗಿತ್ತು, ಆದರೆ ಕಾಲಚಕ್ರ ಉರುಳಿದಂತೆ ಬಹಳ ಕಾಲ ಉಳಿಯಲಿಲ್ಲ, ಬಸವಣ್ಣ 12ನೇ ಶತಮಾನದಲ್ಲಿ ಕೈಗೊಂಡ ಸಾಮಾಜಿಕ ಕ್ರಾಂತಿ ಇಂದಿಗೂ ಫಲ ನೀಡುತ್ತಿವೆ. ಸಮಾನತೆ, ಮಹಿಳಾ ಸ್ವಾತಂತ್ರ್ಯ, ಶೋಷಿತರ ಧ್ವನಿಯಾದ ಬಸವಣ್ಣ, ಕಾಯಕಕ್ಕೆ ನೀಡಿದ ಮಹತ್ವ ಅಮೂಲ್ಯವಾದುದು, ಬಸವಣ್ಣ ವಾತ್ಸಲ್ಯದಿಂದ ಬದುಕುವ ರೀತಿ ನೀತಿಗಳನ್ನು ಬೋಧಿಸಿ ನಮ್ಮ ಬೌದ್ಧಿಕ, ಮಾನಸಿಕ ವಿಕಾಸಕ್ಕೆ ಆದ್ಯತೆ ಕೊಟ್ಟವರು, ಭಕ್ತ–ಭಗವಂತನ ನಡುವೆ ನೇರವಾದ ಸಂಬಂಧವಿದೆ ಎಂದು ಸರಳವಾದ ವಚನಗಳ ಮೂಲಕ ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಬೋಧಿಸಿದರು, ಅವರ ತತ್ವ ಆದರ್ಶಗಳನ್ನು ಯುವ ಸಮೂಹ ಪಾಲಿಸಬೇಕು ಎಂದು ಹೇಳಿದರು.

ಚುಂಚನಹಳ್ಳಿ ಶ್ರೀ ಪಟ್ಟದ ಮಠದ ಚೆನ್ನಬಸವ ಸ್ವಾಮೀಜಿ ಮಾತನಾಡಿ, ಬಸವಣ್ಣನವರು ಪ್ರತಿಪಾದಿಸಿದ ತತ್ವ ವಿಚಾರಗಳಂತೆ ನಡೆದರೆ ಸಮಾಜದಲ್ಲಿ ಉತ್ತಮ ಬದಲಾವಣೆ ಕಾಣಲು ಸಾಧ್ಯವಾಗುತ್ತದೆ, ಅವರ ಶರಣ ಸಿದ್ಧಾಂತಗಳು



ಕಾಲ, ದೇಶಗಳನ್ನು ಮೀರಿದ್ದು, ವಿಶ್ವದ ಎಲ್ಲ ದೇಶಗಳು ಅವರ ಸಮಾಜಮುಖಿ ಚಿಂತನೆಯನ್ನು ಮೆಚ್ಚಲೇಬೇಕು. ನಗರದಲ್ಲಿ ಬಸವಜಯಂತಿ ಕಾರ್ಯಕ್ರಮವನ್ನು ಆಯೋಜಕರು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಇಂತಹ ಆಚರಣೆಗಳು ಸಮಾಜ ಒಗ್ಗೂಡುವಿಕೆಯಿಂದ ಸಹಜೀವನ ನಡೆಸಲು ಪ್ರೇರಣದಾಯಿಯಾಗಿವೆ. ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಬಸವ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲಾಗುತ್ತಿದೆ. ಇದು ನಮ್ಮ ನಂಬಿಕೆ, ಆಚರಣೆಗಳಿಗೆ ಮಹತ್ವವನ್ನು ಕಲ್ಪಿಸುತ್ತವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಲಾಳನಹಳ್ಳಿಯ ಶರಣೆ ಜಯದೇವಿ ತಾಯಿ, ದೇವನೂರು ಮಹಾಂತ ಸ್ವಾಮೀಜಿ, ಮಲ್ಲನಮೂಲೆ ಮಠದ ಚೆನ್ನಬಸವ ಸ್ವಾಮೀಜಿ ಮಾತನಾಡಿದರು. ಬಸವ ಜಯಂತಿ ಪ್ರಯುಕ್ತ ಬುಧವಾರ ಬೆಳಗ್ಗೆ ನಗರದ ಗೌರಿ ಘಟ್ಟ ಬೀದಿಯ ಶಿವಪಾದ ಸ್ವಾಮಿ ಗದ್ದಿಗೆಯಿಂದ ಬಸವೇಶ್ವರರ ಪುತ್ಥಳಿಯ ಭವ್ಯ ಮೆರವಣಿಗೆಗೆ ತುಮಕೂರಿನ ಸಿದ್ದಗಂಗಾ ಮಠದ ಸಿದ್ದಲಿಂಗ ಮಹಾಸ್ವಾಮಿಜೀ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ನಂದಿಧ್ವಜ, ವೀರಗಾಸೆ, ಭಜನಾ ತಂಡ, ಜಾನಪದ ಕಲಾತಂಡ, ಅಲಂಕೃತ ಸ್ತಬ್ಧ ಚಿತ್ರಗಳು ರಾಷ್ಟ್ರಪತಿ ರಸ್ತೆ, ಮಹಾತ್ಮಗಾಂಧಿ ರಸ್ತೆಗಳ ಮೂಲಕ ಜೆಎಸ್‌ಎಸ್ ಮಂಗಳ ಮಂಟಪ ತಲುಪಿತು. ಅಕ್ಕನ ಬಳಗದವರು ಮೆರವಣಿಗೆಯನ್ನು ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಂಡರು. ಮಹಾಸಭಾದ ಅಧ್ಯಕ್ಷ ದೇವನೂರು ಮಹಾದೇವಪ್ಪ ಪ್ರಾಸ್ತಾವಿಕ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ಹೊನ್ನಲಗೆರೆ ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ನಾಗರಾಜೇಂದ್ರ ಸ್ವಾಮೀಜಿ, ಅಖಿಲಭಾರತ ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಬದನವಾಳು ಮಂಜುನಾಥ್, ಖಜಾಂಚಿ ಮಾಧು ಕೆಎನ್. ಚಿನ್ನಸ್ವಾಮಿ, ಹೆಚ್.ಎಂ.ಮಂಜುಳಾ ಮಧು, ಎಂ.ಕೆ.ಶಿವಬಸಪ್ಪ, ಡಿ.ಎಂ.ಶಿವಪ್ರಕಾಶ್, ಎಸ್.ಎನ್.ಮಲ್ಲೇಶ್, ಲೋಕೇಶ್, ಸುಬ್ಬಣ್ಣ, ಚಿಕ್ಕಮಾದಪ್ಪ, ಹೆಚ್.ಎಂ.ಮಹದೇವಮೂರ್ತಿ, ಬಿ.ಬಿ.ಶಿವನಾಗಪ್ಪ ಟಿ.ಎಸ್. ವೀರೇಶ್‌ಕುಮಾರ್, ಹೆಮ್ಮರಗಾಲ ಉಮೇಶ್, ಗುರುಮಲ್ಲಪ್ಪ ಬಿಜೆಪಿ ರಾಜ್ಯ ಮುಖಂಡ ಎಸ್. ಮಹದೇವಯ್ಯ, ಬಿ.ಎಸ್.ಮಹದೇವಪ್ಪ, ಕ್ರಾಂತಿಕಾರಿ ಬಸವಣ್ಣ ಸಂಘದ ಅಧ್ಯಕ್ಷ ಜಗದೀಶ್ ಸೇರಿ ಪ್ರಮುಖರು ಇದ್ದರು.

ಕಾಮಗಾರಿ ನಡೆಸದೆ ನರೇಗಾ ಯೋಜನೆ ಹಣ ಗುಳುಂ

ಸಿಇಓ, ಉಸ್ತುವಾರಿ ಸಚಿವರು, ಲೋಕಾಯುಕ್ತರಿಗೆ ದೂರು



ತಿ.ನರಸೀಪುರ, ಜೂ.12– ನರೇಗಾ ಯೋಜನೆ ಅಡಿ ಕೆಲಸ ಮಾಡದೆ ಅಕ್ರಮವಾಗಿ ಬಿಲ್ ಮಾಡಿ ಸರ್ಕಾರದ ಹಣ ದುರುಪಯೋಗ ಮಾಡಿರುವ ಬಗ್ಗೆ ಜಿಪಂ ಸಿಇಓ, ಉಸ್ತುವಾರಿ ಸಚಿವರು, ಲೋಕಾಯುಕ್ತರಿಗೆ ದೂರು ಸಲ್ಲಿಸಲಾಗಿದೆ ಎಂದು ಅಕ್ಕೂರು ರಾಜೇಶ್ ಹೇಳಿದರು.

ಪಟ್ಟಣದ ಕಬಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ತಿ. ನರಸೀಪುರ ತಾಲೂಕಿನ ಹೆಮ್ಮಿಗೆ ಗ್ರಾಪಂ ಹಾಗೂ ಮಾದಾಪುರ ಗ್ರಾಪಂಗಳಲ್ಲಿ ನರೇಗಾ ಯೋಜನೆ ಅಡಿ ಕಾಮಗಾರಿಗಳನ್ನು ನಡೆಸದೆ ಮಧ್ಯವರ್ತಿಗಳ ಮುಖಾಂತರ ಸರ್ಕಾರದ ಹಣವನ್ನು ಗುಳುಂ ಮಾಡಿದ್ದಾರೆ ಎಂದು ಮೈಸೂರಿನ ಸಿಇಓ ಕಚೇರಿಗೆ ದೂರು ಸಲ್ಲಿಸುವುದಾಗಿ ಹೇಳಿದರು.

2022–23 ಹಾಗೂ 2024–25ನೇ ಸಾಲಿನಲ್ಲಿ ನರೇಗಾ ಯೋಜನೆ ಅಡಿಯಲ್ಲಿ ಕೆರೆಗಳ ಅಭಿವೃದ್ಧಿ, ಸ್ಮಶಾನಾಭಿವೃದ್ಧಿ ಕಾಮಗಾರಿಗಳನ್ನು ನಡೆಸದೆ, ಮಧ್ಯವರ್ತಿಗಳ ಮುಖಾಂತರ ಬಿಲ್ ಪಾವತಿಸಿದ್ದಾರೆ, ಈ ಬಗ್ಗೆ ತನಿಖೆ ನಡೆಸಿ, ಅಕ್ರಮಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಅಮಾನತುಪಡಿಸಿ, ಸರ್ಕಾರಕ್ಕೆ ನಷ್ಟವಾಗಿರುವ ಹಣವನ್ನು ಅಧಿಕಾರಿಗಳಿಂದಲೇ ಭರಿಸಿ, ಭ್ರಷ್ಟ ಅಧಿಕಾರಿಗಳ ಮೇಲೆ ಕಾನೂನು ರೀತಿ ಕ್ರಮ ಜರುಗಿಸಬೇಕೆಂದು ಮನವಿ ಮಾಡಿ, ಈ ಸಂಬಂಧ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಸಚಿವರ ಕಾರ್ಯಾಲಯ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ ಮಹದೇವಪ್ಪ, ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು, ಲೋಕಾಯುಕ್ತ ಹಾಗೂ ತಾಲೂಕ್ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿರವರುಗಳಿಗೆ ದೂರು ಸಲ್ಲಿಸಲಾಗಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಅಕ್ಕೂರು ಕುಮಾರ್, ಮಂಜು, ರವಿ ಉಪಸ್ಥಿತರಿದ್ದರು.

ಹುಣಸೂರು ಆರ್‌ಟಿಓ ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಉದ್ದೇಶಪೂರ್ವಕವಾಗಿ ವಿಲೇವಾರಿಯಾಗದೆ ಉಳಿದಿದ್ದ ಕಡತಗಳು ವಶಕ್ಕೆ

ಹುಣಸೂರು, ಜೂ.12– ನಗರದ ಸಾರಿಗೆ ಇಲಾಖೆ (ಆರ್‌ಟಿಓ)ಯ ಕಚೇರಿಗೆ ಲೋಕಾಯುಕ್ತ ಅಧಿಕಾರಿಗಳು ದಿಢೀರ್ ದಾಳಿ ನಡೆಸಿ ಕಚೇರಿಯಲ್ಲಿ ಉದ್ದೇಶಪೂರಕವಾಗಿ ಉಳಿದಿರುವ ಕಡತವನ್ನು ಜಪ್ತಿಗೊಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಲೋಕಾಯುಕ್ತ ಎಸ್ಪಿ ಸಜಿತ್ ವಿ.ಜೆ., ಸಾರ್ವಜನಿಕರಿಂದ ಹಲವು ದೂರುಗಳು ಬಂದಿದ್ದು, ಕಚೇರಿಯಲ್ಲಿ ಉದ್ದೇಶಪೂರಕವಾಗಿ ಕಡತ ವಿಲೇವಾರಿ ಮಾಡದೆ ತೊಂದರೆ ನೀಡುತ್ತಿದ್ದಾರೆ ಎಂಬ ದೂರು ಬಂದಿತ್ತು. ಹೀಗಾಗಿ ಇಂದು ಹಠಾತನೆ ದಾಳಿ ನಡೆಸಿ ಇಲಾಖೆ ಅಧಿಕಾರಿಗಳ ಬಳಿ ಇರುವ ದಾಖಲೆ ಪರಿಶೀಲಿಸುತ್ತಿದ್ದೇವೆ ಎಂದರು.

ಹುಣಸೂರು ಸಾರಿಗೆ ಇಲಾಖೆಯಲ್ಲಿ ಸಾರ್ವಜನಿಕರಿಗೆ ಸೇವೆ ನೇರವಾಗಿ ಸಿಗದೆ ಮಧ್ಯವರ್ತಿಗಳ ಮೂಲಕವೇ ಬರಬೇಕಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದರೂ ಸಕಾಲ ನಿಯಮದಂತೆ ನಿಗದಿತ ಸಮಯಕ್ಕೆ ಅರ್ಜಿ ವಿಲೇವಾರಿ ಆಗುತ್ತಿಲ್ಲ. ಈ ಎಲ್ಲಾ ವಿಷಯ ಆಧರಿಸಿ ಸ್ಥಳಕ್ಕೆ ಭೇಟಿ ನೀಡಿ, ಸಾರ್ವಜನಿಕರ ಅಭಿಪ್ರಾಯ ಮತ್ತು ಮಾಹಿತಿ ಸಂಗ್ರಹಿಸಲಾಗಿದೆ ಎಂದರು.

ಕಳೆದ 3 ತಿಂಗಳಿಂದ ಆನ್‌ಲೈನ್‌ನಲ್ಲಿ ಸಾರ್ವಜನಿಕರು ಸಲ್ಲಿಸಿದ ಅರ್ಜಿ ಹಾಗೂ ವಿಲೇವಾರಿ ಮಾಡಿದ ಪಟ್ಟಿ ಎರಡನ್ನು ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಯಿಂದ ಹೇಳಿಕೆ ಪಡೆದ ಬಳಿಕ ವಿಚಾರಣೆ ನಡೆಸಲಿದ್ದೇವೆ ಎಂದರು.

ಹುಣಸೂರು ಸಾರಿಗೆ ಇಲಾಖೆಯಿಂದ ನೆರೆ ರಾಜ್ಯ ಕೇರಳ



ನಾಗರಿಕರಿಗೆ ಹೆಚ್ಚಿನ ಚಾಲನ ಪರವಾನಗಿ (ಡ್ರೈವಿಂಗ್ ಲೈಸೆನ್ಸ್) ನೀಡಿರುವ ಬಗ್ಗೆ ಇತ್ತೀಚಿಗೆ ಮಾಧ್ಯಮದಲ್ಲಿ ವರದಿಯಾಗಿತ್ತು. ಈ ಬಗ್ಗೆಯೂ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಲಾಗುವುದು ಎಂದು ಪ್ರಶ್ನೆಯೊಂದಕ್ಕೆ ತಿಳಿಸಿದರು.

ದಾಳಿ ಸಮಯದಲ್ಲಿ ಕಚೇರಿ ಆವರಣದಲ್ಲಿ ಮಧ್ಯವರ್ತಿಗಳಿಗೆ ಸೇರಿದ ಕಾರಿನಲ್ಲಿದ್ದ ದಾಖಲೆಗಳನ್ನು ಲೋಕಾಯುಕ್ತರು ವಶಪಡಿಸಿಕೊಂಡು ಪರಿಶೀಲಿಸಿದರು. ದಾಳಿಯಲ್ಲಿ ದಾಖಲೆ ಸಂಗ್ರಹಿಸಿದ್ದ ಮೂರು ಕಾರುಗಳನ್ನು ಜಪ್ತಿ ಮಾಡಲಾಗಿದೆ. ದಾಳಿ ಸಮಯದಲ್ಲಿ ಆರ್‌ಟಿಓ ಅಧಿಕಾರಿ ಭಗವಾನ್ ದಾಸ್ ಉಪಸ್ಥಿತರಿದ್ದರು.

ದಾಳಿಯಲ್ಲಿ ಲೋಕಾಯುಕ್ತ ಡಿವೈಎಸ್ಪಿ ಕೃಷ್ಣಯ್ಯ, ಪೊಲೀಸ್ ಇನ್‌ಸ್ಪೆಕ್ಟರ್ ಮಹೇಶ್, ರೂಪಶ್ರೀ ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

ಆದಿವಾಸಿಗಳಿಗೆ ಹೆಚ್ಚಿನ ಆರೋಗ್ಯ ಸೌಲಭ್ಯ ಒದಗಿಸಲು ಕ್ರಮ

ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಿಹೆಚ್‌ಓ ಪ್ರಕಟ



ಹೆಚ್.ಡಿ.ಕೋಟೆ ಆದಿವಾಸಿಗಳಿಗೆ ಹೆಚ್ಚಿನ ಆರೋಗ್ಯ ಸೌಲಭ್ಯ ಕಲ್ಪಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರ್ ಹಾಡಿಗಳಿಗೆ ಭೇಟಿ ನೀಡಿ ಪರಿಶೀಲನೆ ಮಾಡುತ್ತಿರುವುದು.

ಹೆಚ್.ಡಿ.ಕೋಟೆ, ಜೂ.12– ಆದಿವಾಸಿಗಳಿಗೆ ಹೆಚ್ಚಿನ ಆರೋಗ್ಯ ಸೌಲಭ್ಯ ಕಲ್ಪಿಸಲು ಆರೋಗ್ಯ ಇಲಾಖೆ ಮುಂದಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರ್ ಸ್ವಾಮಿ ತಿಳಿಸಿದರು.

ಹೆಚ್.ಡಿ.ಕೋಟೆ ಪಟ್ಟಣದಲ್ಲಿರುವ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಾಥಮಿಕ ಕೇಂದ್ರವಾರು ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲನೆ ನಡೆಸಿ, ಮಾತನಾಡಿದರು. ಹೆಚ್.ಡಿ.ಕೋಟೆ ತಾಲೂಕಿನಲ್ಲಿ 118 ಹಾಡಿಗಳಿದ್ದು, ಅವರಿಗೆ ಹೆಚ್ಚಿನ ಆರೋಗ್ಯ ಸೌಲಭ್ಯವನ್ನು ಒದಗಿಸುವ ನಿಟ್ಟಿನಲ್ಲಿ ಪ್ರತಿ ಹಾಡಿಗಳಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಬೇಕು. ಹಾಗೂ ಈ ಶಿಬಿರದಲ್ಲಿ ಜನರಿಗೆ ಹೆಚ್ಚು ಅನುಕೂಲ ರೀತಿಯಲ್ಲಿ ಅವರಿಗೆ ಚರ್ಮರೋಗ ತಪಾಸಣೆ, ಕಣ್ಣಿನ ತಪಾಸಣೆ, ದಂತ ತಪಾಸಣೆ, ಅನೀಮಿಯಾ ತಪಾಸಣೆ, ಬಿ.ಪಿ, ಸಕ್ಕರೆ ಕಾಯಿಲೆ ತಪಾಸಣೆ, ಗರ್ಭಿಣಿಯರ ತಪಾಸಣೆ ಮತ್ತು ಸಾಮಾನ್ಯ ಆರೋಗ್ಯ ಮಾಡಿ ವರದಿ ನೀಡಬೇಕು ಎಂದರು.

ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರವಾರು ಆರೋಗ್ಯ ತಪಾಸಣೆಯನ್ನು ಹಮ್ಮಿಕೊಳ್ಳುವ ಮೊದಲು ಕ್ರಿಯಾ ಯೋಜನೆಯನ್ನು ತಾಲೂಕು ಮಟ್ಟಕ್ಕೆ ಸಲ್ಲಿಸಬೇಕು ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ತಾಲೂಕು ನೋಡಲ್ ಅಧಿಕಾರಿಗಳಾದ ಹಾಗೂ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮಹದೇವ ಪ್ರಸಾದ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ. ಬೃಂದಾ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಸಿರಾಜ್ ಅಹಮದ್, ತಾಲೂಕು ಆರೋಗ್ಯಾಧಿಕಾರಿಗಳಾದ ಡಾ. ರವಿಕುಮಾರ್ ಟಿ. ಮತ್ತು ತಾಲೂಕಿನ ಎಲ್ಲಾ ಪ್ರಾಥಮಿಕ ಆರೋಗ್ಯ ವೈದ್ಯಾಧಿಕಾರಿಗಳು ಮತ್ತು ಮೇಲ್ವಿಚಾರಕರು ಹಾಗೂ ಸಿಬ್ಬಂದಿ ವರ್ಗದವರು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.

ಚಿದರಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಅಧ್ಯಕ್ಷರ ಆಯ್ಕೆ



ತಿ. ನರಸೀಪುರ, ತಾಲೂಕಿನ ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ರಾಮೇಗೌಡನಪುರದ ಆರ್. ಜಿ. ಶಿವಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಿ.ನರಸೀಪುರ, ಜೂ.12– ತಾಲೂಕಿನ ಚಿದರವಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ರಾಮೇಗೌಡನಪುರದ ಆರ್. ಜಿ. ಶಿವಮೂರ್ತಿ ಅವರು ಬುಧವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮದ ಸಹಕಾರ ಸಂಘದ ಕಚೇರಿಯಲ್ಲಿ ನಡೆದ ಚುನಾವಣಾ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆರ್.ಜಿ. ಶಿವಮೂರ್ತಿ ಮಾತ್ರ ನಾಮಪತ್ರ ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹಾಗೂ ಸಹಕಾರ ಅಭಿವೃದ್ಧಿ ಅಧಿಕಾರಿ ರಾಜಣ್ಣ ಇವರ ಆಯ್ಕೆಯನ್ನು ಪ್ರಕಟಿಸಿದರು.

ಅಧ್ಯಕ್ಷರಾಗಿದ್ದ ಚೌಡಯ್ಯನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಈ ಚುನಾವಣೆ ನಡೆಯಿತು. ಒಟ್ಟು 12 ಮಂದಿ ಸದಸ್ಯರಿದ್ದು, ಅಧ್ಯಕ್ಷ ಸ್ಥಾನಕ್ಕೆ ಮಾತ್ರ ಚುನಾವಣೆ ನಡೆಯಿತು.

ಸಂಘದ ಕಚೇರಿಯಲ್ಲಿ ನಡೆದ ಚುನಾವಣೆಯಲ್ಲಿ ಉಪಾಧ್ಯಕ್ಷ ಹೊಸಕೊಪ್ಪಲು ಎಚ್.ಟಿ.ಮಹದೇವ, ನಿರ್ದೇಶಕರಾದ ಚಂದ್ರು, ಜಿ.ವಿಜಯಕುಮಾರ್, ಮಹದೇವ ಸಿದ್ದು, ಇಂದ್ರೇಶ್, ಗೌರಮ್ಮ, ಪಾರ್ವತಮ್ಮ, ಬಿ.ಲಕ್ಷ್ಮಿ, ಸಾಲಗಾರರಲ್ಲದ ಕ್ಷೇತ್ರದಿಂದ ಆಯ್ಕೆಯಾಗಿದ್ದ ಸಿ.ಎಸ್.ನವೀನ್‌ಕುಮಾರ್ ಭಾಗವಹಿಸಿ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು. ಈ ವೇಳೆ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಆರ್.ಜಿ.ಶಿವಮೂರ್ತಿ ಮಾತನಾಡಿ, ತಮ್ಮ ಆಯ್ಕೆಗೆ ಸಹಕರಿಸಿದ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿ, ಸಹಕಾರ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಅಗತ್ಯತೆ ಇದ್ದು, ಅದನ್ನು ನನ್ನ ಅಧಿಕಾರ ಅವಧಿಯಲ್ಲಿ ನಿರ್ಮಾಣ ಮಾಡಬೇಕೆಂಬ ಅಭಿಲಾಷೆ ಹೊಂದಿದ್ದೇನೆ ಎಂದರು. ಹಾಗೂ ಸರ್ಕಾರದಿಂದ ಸಿಗಬಹುದಾದ ಅನುದಾನ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.

ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಾಜಪ್ಪ, ಎನ್.ಎಸ್. ಶೇಖರ್, ಸಿಇಓ ಸಿ.ಪಿ. ರಾಜೇಂದ್ರ ಪ್ರಸಾದ್, ಗುಮಾಸ್ತ ಮಲ್ಲೇಶ್‌ಕುಮಾರ್, ಸಹಕಾರ ಸಂಘದ ವ್ಯಾಪ್ತಿಯ ಗ್ರಾಮದ ಯಜಮಾನರು, ಮುಖಂಡರು ಹಾಜರಿದ್ದರು.

ಸರಗೂರು ಆಸ್ಪತ್ರೆಯಲ್ಲಿ ಡಯಾಲಿಸಿಸ್ ಘಟಕ ಉದ್ಘಾಟನೆ

ಗ್ರಾಮೀಣ ಪ್ರದೇಶದ ಜನರಿಗೆ ಅನುಕೂಲ



ಸರಗೂರು, ಜೂ.12– ಮೂತ್ರಪಿಂಡ ವೈಫಲ್ಯದಿಂದ ನರಳುತ್ತಿರುವ, ಗ್ರಾಮೀಣ ಭಾಗದ ರೋಗಿಗಳಿಗೆ ಡಯಾಲಿಸಿಸ್ ಘಟಕ ಸಹಕಾರಿಯಾಗಲಿದೆ ಎಂದು ಶಾಸಕರಾದ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಆರೋಗ್ಯ ಕೇಂದ್ರದಲ್ಲಿ ನೂತನವಾಗಿ ಪ್ರಾರಂಭಗೊಂಡ ಡಯಾಲಿಸಿಸ್ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರಗೂರು ತಾಲೂಕಿನಲ್ಲಿ ಡಯಾಲಿಸಿಸ್ ಕೇಂದ್ರವನ್ನು ಉದ್ಘಾಟನೆ ಮಾಡಿದ್ದೇನೆ. ತಾಲೂಕಿನ ಜನರಿಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚು ಒತ್ತುಕೊಟ್ಟು ಮುಂದಿನ ದಿನಗಳಲ್ಲಿ 100 ಹಾಸಿಗೆಯ ಸಾರ್ವಜನಿಕ ಆಸ್ಪತ್ರೆ ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಮಾಡಲು ಪ್ರಯತ್ನ ಪಡುತ್ತೇನೆ ಎಂದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ ಮಾತನಾಡಿ, ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಒಟ್ಟು 27 ಡಯಾಲಿಸಿಸ್ ರೋಗಿಗಳಿದ್ದು, ಸರಗೂರು ತಾಲೂಕಿನಲ್ಲಿ ಆರು ಡಯಾಲಿಸಿಸ್ ರೋಗಿಗಳಿದ್ದು, ಅವರ ಅನುಕೂಲಕ್ಕಾಗಿ ಮತ್ತು ಸುತ್ತಮುತ್ತ ಗ್ರಾಮಗಳ ಜನರು ಹೆಚ್.ಡಿ. ಕೋಟೆ ಮತ್ತು ಮೈಸೂರಿಗೆ ಹೋಗುವುದನ್ನ ತಪ್ಪಿಸುವ ಸಲುವಾಗಿ ಸರಗೂರಿನಲ್ಲಿ ಒಂದು ಡಯಾಲಿಸಿಸ್ ಕೇಂದ್ರವನ್ನು ಪ್ರಾರಂಭಿಸಿದ್ದೇವೆ. ಇಲ್ಲಿ ಇನ್ನು ಮುಂದೆ ನಿರಂತರವಾಗಿ ಡಯಾಲಿಸಿಸ್ ನಡೆಯುತ್ತದೆ, ಈಗ ಆರು ಜನರನ್ನು ಮ್ಯಾಪಿಂಗ್ ಮಾಡಿ ಅವರಿಗೆ ಡಯಾಲಿಸಿಸ್ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ನಂತರ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಡಯಾಲಿಸಿಸ್ ಸೇವೆಗೆ ತಗುಲುವ ವೆಚ್ಚವನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆಯಡಿ ಭರಿಸಲು ಇಲಾಖೆ ನಿರ್ಧರಿಸಿದೆ. ಮೂತ್ರಪಿಂಡ ವೈಫಲ್ಯದಿಂದ ನರಳುತ್ತಿರುವ ರೋಗಿಗಳಿಗೆ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತ ಡಯಾಲಿಸಿಸ್ ಸೇವೆ ಕಲ್ಪಿಸುವಂತೆ ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ ಎಂದರು.

ತಹಶೀಲ್ದಾರ್ ರುಕೀಯಾ ಬೇಗಂ, ಪಟ್ಟಣ ಪಂಚಾಯತಿ ಮುಖ್ಯ ಅಧಿಕಾರಿ ಮಂಜುನಾಥ್, ಪಟ್ಟಣ ಪಂಚಾಯತಿ ಅಧ್ಯಕ್ಷೆ ರಾಧಿಕಾ ಶ್ರೀನಾಥ್, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸ್ಥಾಯಿಸಮಿತಿ ಅಧ್ಯಕ್ಷೆ ಉಮಾ ರಾಮು, ಸದಸ್ಯರಾದ ಶ್ರೀನಿವಾಸ್, ನೂರಾಳಸ್ವಾಮಿ, ವೀರೇಶ್, ಚೆಲುವರಾಜು ಕೃಷ್ಣ, ನವೀನ್, ರಮೇಶ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಪಿ.ರವಿ, ಹೆಚ್.ಸಿ.ಮಂಜುನಾಥ್, ಕಸಾಪ ಅಧ್ಯಕ್ಷ ಎಂ. ಕೆಂಡಗಣ್ಣಸ್ವಾಮಿ, ಭಾಗ್ಯಲಕ್ಷ್ಮಿ, ಚಿಕ್ಕವೀರನಾಯಕ, ಎಪಿಎಂಸಿ ಮಾಜಿ ಅಧ್ಯಕ್ಷ ದೇವಲಾಪುರ ಸಿದ್ದರಾಜು, ಕಂದೇಗಾಲ ಶಿವರಾಜು, ಬೀರ್ವಾಳ್ ಚಿಕ್ಕಣ್ಣ, ಬಸವರಾಜು, ಶಿವಶಂಕರ್, ಗೋಪಾಲ್, ಸರಗೂರು ಕೃಷ್ಣ, ಹಮೀರ್ ಸುಹೇಲ್, ಸುಭಾನ್, ಜಾವೀದ್, ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ಪಾರ್ಥಸಾರಥಿ, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ. ಭಾಗ್ಯಲಕ್ಷ್ಮಿ, ಸಮುದಾಯ ಆರೋಗ್ಯ ಕೇಂದ್ರ ಸಿಬ್ಬಂದಿ ವರ್ಗದವರು ಸಾರ್ವಜನಿಕರು ಇನ್ನಿತರ ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭಜೆ ವಾಯುವೇಗಂ (ತೆ)	2 ಪ್ರದರ್ಶನಗಳು
ಘಾಜಿನಿ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಪನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕ್ರೂ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಡೆವಿಲ್ ಹಂಟರ್ (ತ)	4 ಪ್ರದರ್ಶನಗಳು
ಗಾಯಿತ್ರಿ	
ಜಡ್ಜ್‌ಮೆಂಟ್ (ಕ)	4 ಪ್ರದರ್ಶನಗಳು
ರಾಜಕಮಲ್	
ಇಂಡಿಯನ್ 1 (ತ)	4 ಪ್ರದರ್ಶನಗಳು
ಸಂಗಂ	
ಗರುಡನ್ (ತ)	4 ಪ್ರದರ್ಶನಗಳು
ಲಿಡೋ	
ರಾಬರ್ಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಘಾಜಿನಿ (ತ)	4 ಪ್ರದರ್ಶನಗಳು
ಪ್ರಭಾ	
ಎ (ಕ)	2 ಪ್ರದರ್ಶನಗಳು
ಡೆವಿಲ್ ಹಂಟರ್ (ತ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಬ್ಯಾಡ್ ಬಾಯ್ಸ್ ರೈಡ್ or ಡೈ (ಇ): ಬೆ.11.15ಕ್ಕೆ, ಮ.1.40ಕ್ಕೆ, ರಾ.7.25ಕ್ಕೆ, ರಾ.9.55ಕ್ಕೆ, ಘಾಜಿನಿ (ತ): ಸಂ.4ಕ್ಕೆ.
ಸ್ಕ್ರೀನ್ 2	ಯಂಗ್‌ಮ್ಯಾನ್ (ಕ): ಬೆ.10.40ಕ್ಕೆ, ವೆಪನ್ (ತ): ಮ.1.50ಕ್ಕೆ, ಗರುಡನ್ (ತ): ಸಂ.4.20ಕ್ಕೆ, ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ರಾ.7.05ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ದಿ ಜಡ್ಜ್‌ಮೆಂಟ್ (ಕ): ಬೆ.10.40ಕ್ಕೆ, ಕಂಡೋರ್ ಮನೆ ಕಥೆ (ಕ): ಮ.1.45ಕ್ಕೆ, ಸಹರ (ಕ): ಸಂ.4.10ಕ್ಕೆ, ಸತ್ಯಭಾಮ (ತೆ): ರಾ.7.10ಕ್ಕೆ, ಗೋಲಂ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಮುಂಜ್ಯಾ (ಹಿಂ): ಬೆ.10.30ಕ್ಕೆ, ರಾ.10.05ಕ್ಕೆ, ಇಂಡಿಯನ್ (ತ): ಸಂ.4.05ಕ್ಕೆ, ರಾ.7.05ಕ್ಕೆ, ಮನಮೆ (ತೆ): ಸಂ.4.05ಕ್ಕೆ, ರಾ.9.50ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಮುಂಜ್ಯಾ (ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಡ್ ಬಾಯ್ಸ್ ರೈಡ್ or ಡೈ (ಇ): ಬೆ.11.50ಕ್ಕೆ, ಮ.2.30ಕ್ಕೆ, ಸಂ.5.10ಕ್ಕೆ, ರಾ.7.50ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಮನಮೆ (ತೆ): ಮ.12.45ಕ್ಕೆ, ರಾ.7ಕ್ಕೆ, ಮಿಸ್ಟರ್ ಅಂಡ್ ಮಿಸಸ್ ಮಹಿ (ಹಿಂ): ಸಂ.4ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 4	ರಾಬರ್ಟ್ (ಕ): ಮ.3.10ಕ್ಕೆ, ಸಹರಾ (ಕ): ಸಂ.6.35ಕ್ಕೆ, ಗರುಡನ್ (ತ): ರಾ.9.30ಕ್ಕೆ

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಅರನ್‌ಮನೈ 4 (ತ): ಮ.1.30ಕ್ಕೆ, ರಾ.7.30ಕ್ಕೆ, ಸಹರ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಅನರ್ಥ (ಕ): ಸಂ.4.15ಕ್ಕೆ.
ಸ್ಕ್ರೀನ್ 3	ಕಂಡೋರ್ ಮನೆ ಕಥೆ (ಕ): ಮ.1.30ಕ್ಕೆ.
ಸ್ಕ್ರೀನ್ 4	

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಗರುಡ ಮಾಲ್,

1ನೇ ಮಹಡಿ, ಮೊ.ನಂ: 9901373210

ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1.15ಕ್ಕೆ, ಮ.3.40ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10.05ಕ್ಕೆ, ಮ.12ಕ್ಕೆ, ಮ.3.10ಕ್ಕೆ, ಸಂ.6.20ಕ್ಕೆ, ರಾ.9.30ಕ್ಕೆ, ಸ್ಟಾರ್ (ತ): ಮ.1ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, 4N6 (ಕ): ಮ.1.05ಕ್ಕೆ, ಅಂಜನೀಪುತ್ರ (ಕ): ಸಂ.4.15ಕ್ಕೆ, ಕೃಷ್ಣಮ್ಮ (ತೆ): ಸಂ.4.20ಕ್ಕೆ, ರಾ.10.15ಕ್ಕೆ, ಪವರ್ (ಕ): ಸಂ.6.40ಕ್ಕೆ.


ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಚನ್ನಪಟ್ಟಣ ಬಳಿ ರಸ್ತೆ ಅಪಘಾತದಲ್ಲಿ ಹುಣಸೂರು ಯುವಕ ಸಾವು



ಹುಣಸೂರು, ಜೂ.12– ನಗರದ ರಘು ಫೋಟೋ ವರ್ಲ್ಡ್ ಹಿಂಭಾಗದ ನಿವಾಸಿ ದಿವಂಗತ ಬಿ.ಆರ್. ಕೃಷ್ಣಮೂರ್ತಿ ಅವರ ಪುತ್ರ ಕೆ.ಶಶಿಧರನ್(32) ಮಂಗಳವಾರ ರಾತ್ರಿ ಮೈಸೂರು–ಬೆಂಗಳೂರು ಹೈವೇ ರಸ್ತೆಯ ಚನ್ನಪಟ್ಟಣ ಬಳಿ ಸ್ನೇಹಿತರೊಂದಿಗೆ ಕಾರಿನಿಂದ ಇಳಿಯುವಾಗ ಪಕ್ಕದಲ್ಲೇ ವೇಗವಾಗಿ ಬಂದ ಟಿಟಿ ವಾಹನವೊಂದು ಡಿಕ್ಕಿ ಹೊಡೆದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮೃತರು ಅವಿವಾಹಿತರಾಗಿದ್ದರು, ಓರ್ವ ಸಹೋದರ, ಓರ್ವ ಸಹೋದರಿ ಸೇರಿದಂತೆ ಅಪಾರ ಬಂಧು ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ ಹುಣಸೂರಿನ ತಾಲೂಕು ಕಚೇರಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ನಿವೃತ್ತ ಮುಖ್ಯ ಶಿಕ್ಷಕ ನಂಜಪ್ಪಶೆಟ್ಟಿ ನಿಧನ



ಮಲ್ಕುಂಡಿ, ಜೂ.12– ಗ್ರಾಮದ ನಿವಾಸಿ ನಿವೃತ್ತ ಮುಖ್ಯ ಶಿಕ್ಷಕ ನಂಜಪ್ಪಶೆಟ್ಟಿ (72) ಅನಾರೋಗ್ಯದಿಂದ ಮಂಗಳವಾರ ಬೆಳಗ್ಗೆ ನಿಧನರಾಗಿದ್ದಾರೆ. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಮಲ್ಕುಂಡಿ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಕೆ. ಶಶಿಕಲಾ



ನಂಜನಗೂಡು, ಜೂ.12– ನಗರದ ಶ್ರೀಕಂಠಪುರಿ ಬಡಾವಣೆ 8ನೇ ತಿರುವಿನ ನಿವಾಸಿ ಮದ್ಯ ವ್ಯಾಪಾರಿ ಉದ್ಯಮಿ ಎನ್.ವಿ. ಗೋಪಾಲ್ ಅವರ ಪತ್ನಿ ಕೆ.ಶಶಿಕಲಾ(59) ಬುಧವಾರ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರ ಅಂತ್ಯಕ್ರಿಯೆಯನ್ನು ಯಳಂದೂರು ತಾಲೂಕಿನ ಮಾಂಬಳ್ಳಿ ಗ್ರಾಮದ ತೋಟದಲ್ಲಿ ಗುರುವಾರ ಬೆಳಗ್ಗೆ 11 ಗಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರು ಪತಿ ಎನ್.ವಿ.ಗೋಪಾಲ್ ಹಾಗೂ ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

ಶಾಸ್ತ್ರೀಯ ಭಾಷೆಗಳ ಅಧ್ಯಯನಕ್ಕೆ ಭಾರತೀಯ ಭಾಷಾ ಸಂಸ್ಥಾನ ವಿಶೇಷ ಒತ್ತು

• ಒಡಿಯಾ ಯೋಜನಾ ನಿರ್ದೇಶಕ ಪ್ರೊ.ಬಸಂತ ಕುಮಾರ್ ಪಾಂಡಾ ಅಭಿಮತ • ಅತ್ಯುನ್ನತ ಶಾಸ್ತ್ರೀಯ ಸಮ್ಮೇಳನ ಸಮಾರೋಪ



ಮೈಸೂರು ಭಾರತೀಯ ಭಾಷಾ ಸಂಸ್ಥಾನದ ಅತ್ಯುನ್ನತ ಶಾಸ್ತ್ರೀಯ ಸಮ್ಮೇಳನದ ಸಮಾರೋಪದಲ್ಲಿ ಒಡಿಯಾ ಯೋಜನಾ ನಿರ್ದೇಶಕ ಪ್ರೊ.ಬಸಂತ ಕುಮಾರ್ ಪಾಂಡಾ ಸೇರಿದಂತೆ ಇತರೆ ಭಾಷಾ ವಿದ್ವಾಂಸರು ಭಾಗವಹಿಸಿದ್ದರು.

ಮೈಸೂರು, ಜೂ.12(ಎಸ್‌ಪಿಎನ್)– ಭಾರತೀಯ ಭಾಷಾ ಸಂಸ್ಥಾನ, ಶಾಸ್ತ್ರೀಯ ಭಾಷೆಗಳ ಉಳಿವು ಮತ್ತು ಅಧ್ಯಯನಕ್ಕೆ ವಿಶೇಷ ಒತ್ತು ನೀಡಿದೆ ಎಂದು ಒಡಿಯಾ ಯೋಜನಾ ನಿರ್ದೇಶಕ ಪ್ರೊ.ಬಸಂತ ಕುಮಾರ್ ಪಾಂಡಾ ಅಭಿಪ್ರಾಯಪಟ್ಟರು.

ಮೈಸೂರು ಭಾರತೀಯ ಭಾಷಾ ಸಂಸ್ಥಾನದ ಅತ್ಯುನ್ನತ ಶಾಸ್ತ್ರೀಯ ಸಮ್ಮೇಳನದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಂಸ್ಕೃತ, ಕನ್ನಡ, ತಮಿಳು, ತೆಲುಗು, ಮಲೆಯಾಳಂ, ಒಡಿಯಾ ಸೇರಿದಂತೆ ಇತರೆ ಶಾಸ್ತ್ರೀಯ ಭಾಷೆಗಳ ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ ನೀಡಿದೆ. ಇದು ದೇಶದ ಮೂಲೆಮೂಲೆಗಳಿಂದ ಬಂದಿರುವ ವಿದ್ವಾಂಸರು ತಮ್ಮಲ್ಲಿರುವ ವಿದ್ವತ್ ಅನ್ನು ಮೂರು ದಿನಗಳಿಂದ ಈ ಸಭೆಯಲ್ಲಿ ಮಂಡಿಸಿರುವುದೇ ಸಾಕ್ಷಿ ಎಂದರು.

ದಕ್ಷಿಣ ಭಾರತದ ರಾಜ್ಯಗಳಲ್ಲಿ ಶಾಸ್ತ್ರೀಯ ಕನ್ನಡ ಮತ್ತು ತಮಿಳು ಅತ್ಯುನ್ನತ ಅಧ್ಯಯನ ಕೇಂದ್ರ ಉತ್ತಮವಾಗಿ ಕೆಲಸ ಮಾಡುತ್ತಿವೆ. ಮೂರು ದಿನಗಳ ರಾಷ್ಟ್ರೀಯ ಸಮ್ಮೇಳನದಲ್ಲಿ ತೆಲುಗು, ತಮಿಳು, ಒಡಿಯಾ, ಪ್ರಾಕೃತ್, ಕನ್ನಡ, ಸಂಸ್ಕೃತ ಹಾಗೂ ಮಲೆಯಾಳಂ ಸೇರಿದಂತೆ ಇತರೆ ಭಾಷೆಗಳ ತಜ್ಞರು ಭಾಗವಹಿಸಿ, ಹಲವು ಆಯಾಮಗಳಲ್ಲಿ ಪ್ರಬಂಧ ಮಂಡಿಸಿ, ಚರ್ಚಿಸುತ್ತಿರುವುದು ಸ್ವಾಗತಾರ್ಹ ಎಂದರು.

ಅಂತೆಯೇ ಶಾಸ್ತ್ರೀಯ ಸ್ಥಾನಮಾನ ಪಡೆದ ಭಾಷೆಗಳ ಉಳಿವಿಗೆ ಕೇಂದ್ರ ಶಿಕ್ಷಣ ಸಚಿವಾಲಯ ವಿಶೇಷ ಆಸಕ್ತಿ ವಹಿಸಿದೆ. ಅಲ್ಲದೆ, ಸಂಸ್ಕೃತದಲ್ಲಿ ರಚನೆಯಾಗಿರುವ ರಾಮಾಯಣ, ಮಹಾಭಾರತ ಮಹಾಕಾವ್ಯಗಳು ಶಾಸ್ತ್ರೀಯ ಸ್ಥಾನಮಾನ ಪಡೆದಿರುವ ಎಲ್ಲಾ ಭಾಷೆಗಳಲ್ಲೂ ರಚನೆಯಾಗಿವೆ. ಇದನ್ನು ಜಗತ್ತಿನ ಬೇರೆ ಭಾಷೆಗಳಿಗೂ ಅನುವಾದಿಸಿದರೆ ಆ ಭಾಷೆಯ ಜನರು ಭಾರತೀಯ ಮಹಾಕಾವ್ಯಗಳ ಅಧ್ಯಯನಕ್ಕೆ ಸಹಕಾರಿಯಾಗುತ್ತದೆ ಎಂದರು.

ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಭಾರತದ ಕೃತಿಗಳು ಭಾಷಾಂತರವಾಗಬೇಕಾದರೆ, ಅನುವಾದ ಕ್ಷೇತ್ರ ಮತ್ತಷ್ಟು ಬಲಗೊಳ್ಳಬೇಕು ಎಂದು ಪ್ರತಿಪಾದಿಸಿದ ಅವರು, ಪ್ರಸ್ತುತ ಶಾಸ್ತ್ರೀಯ ಸ್ಥಾನಮಾನ ಪಡೆದಿರುವ ಎಲ್ಲಾ ಭಾಷೆಗಳನ್ನು ಕೇಂದ್ರ ಸಚಿವಾಲಯ ಸಮಾನವಾಗಿ ಅಭಿವೃದ್ಧಿಪಡಿಸಬೇಕು. ಇದಕ್ಕೆ ತೆಲುಗು, ತಮಿಳು, ಕನ್ನಡ, ಸಂಸ್ಕೃತ, ಪ್ರಾಕೃತ್, ಒಡಿಯಾ, ಮಲೆಯಾಳಂ ಕೇಂದ್ರದ ಮುಖ್ಯಸ್ಥರು ಸಹಕಾರ ನೀಡಬೇಕು ಎಂದರು.

ಈ ರಾಷ್ಟ್ರೀಯ ಸಮ್ಮೇಳನದಲ್ಲಿ ಉತ್ತಮ ಪ್ರಬಂಧಗಳು ಮಂಡನೆಯಾಗಿವೆ. ಈ ಪ್ರಯತ್ನವನ್ನು ಮತ್ತಷ್ಟು ಮುಂದುವರೆಸಬೇಕು. ಜ್ಞಾನ ಸಂಪಾದನೆಗೆ ಭಾರತೀಯ ಭಾಷಾ ಸಂಸ್ಥಾನ ಆಯೋಜಿಸಿರುವ ಮೂರು ದಿನದ ರಾಷ್ಟ್ರೀಯ ಸಮ್ಮೇಳನ ಉತ್ತಮವಾಗಿವೆ ಮೂಡಿಬಂದಿವೆ ಎಂದರು.

ಇದಕ್ಕೂ ಮುನ್ನ ಹಿರಿಯ ವಿದ್ವಾಂಸ ಡಾ.ಪ್ರಧಾನ ಗುರುದತ್ ಅವರು, 'ನಮ್ಮ ಶಾಸ್ತ್ರೀಯ ಭಾಷೆಗಳ ಶ್ರೇಷ್ಠತೆಯ ಅರಿವು ಮೂಡಿಸಲು ಮೂರು ಹಂತದ ವಿಧಾನಗಳು – ಯಂತ್ರೋಪಕರಣಗಳು' ವಿಷಯ ಕುರಿತು ಮಾತನಾಡಿದರು. ಚೆನ್ನೈ ಸಿಐಸಿಟಿ ನಿರ್ದೇಶಕ ಪ್ರೊ.ಚಂದ್ರಶೇಖರನ್ ಅವರು, 'ಶಾಸ್ತ್ರೀಯ ಭಾಷೆಗಳನ್ನು ಪುನರುಜ್ಜೀವನಗೊಳಿಸುವುದು; ಸಂರಕ್ಷಣೆ ಮತ್ತು ಶಿಕ್ಷಣ ವಿಧಾನಗಳ ತಂತ್ರಗಳು' ವಿಷಯ ಕುರಿತು ಮಾತನಾಡಿದರೆ, ಹಿರಿಯ ವಿದ್ವಾಂಸ ಪ್ರೊ. ಟಿ.ಎನ್.ಸತೀಶನ್ ಅವರು, 'ಶಾಸ್ತ್ರೀಯ ಮಲೆಯಾಳಂ–ಸಮಸ್ಯೆಗಳು ಮತ್ತು ನಾವೀನ್ಯತೆಗಳ ಅಭಿವೃದ್ಧಿ' ವಿಷಯ ಕುರಿತು ಮಾತನಾಡಿದರು.

ವೇದಿಕೆಯಲ್ಲಿ ಅತ್ಯುನ್ನತ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್, ಮಲೆಯಾಳಂ ಯೋಜನಾ ನಿರ್ದೇಶಕ ಪ್ರೊ.ರಾಧಾಕೃಷ್ಣನ್, ತೆಲುಗು ಯೋಜನಾ ನಿರ್ದೇಶಕ ಪ್ರೊ. ಸೋಮನಾಥ್ ಕುಮಾರ್ ಉಪಸ್ಥಿತರಿದ್ದರು. ಎನ್.ಎಸ್.ಅನ್ನಪೂರ್ಣ ನಿರೂಪಿಸಿದರು.

ಇಂದು ಸರ್ಕಾರಿ ನೌಕರರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಸಿಹಿ ಸುದ್ದಿ?



ಇಂದಿನ ಸಂಪುಟ ಸಭೆಯಲ್ಲಿ ಏಳನೇ ರಾಜ್ಯ ವೇತನ ಆಯೋಗದ ಶಿಫಾರಸು ಅನ್ವಯ ವೇತನ, ಸೌಲಭ್ಯ ಪರಿಷ್ಕರಣೆ ನಿರ್ಧಾರ ಸಾಧ್ಯತೆ

ಬೆಂಗಳೂರು, ಜೂ.12(ಕೆಎಂಶಿ)– ರಾಜ್ಯ ಸರ್ಕಾರಿ ನೌಕರರ ಸಮುದಾಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ ಸಹಿ ಸುದ್ದಿ ನೀಡುವ ನಿರೀಕ್ಷೆ ಇದೆ.

ಏಳನೇ ರಾಜ್ಯ ವೇತನ ಆಯೋಗದ ಶಿಫಾರಸಿನಂತೆ ವೇತನ ಭತ್ಯೆ ಹಾಗೂ ಸೌಲಭ್ಯಗಳ ಪರಿಷ್ಕರಣೆ ಮಾಡುವ ಸಂಬಂಧ ನಾಳೆ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಸಚಿವ ಸಂಪುಟದ ಕಾರ್ಯಸೂಚಿಯ ಮೊದಲ ಪಟ್ಟಿಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆದರೆ ಸಭೆ ಸೇರುವುದಕ್ಕೂ ಮುನ್ನ ಹೆಚ್ಚುವರಿಯಾಗಿ ಬರುವ ಕಾರ್ಯಸೂಚಿಯಲ್ಲಿ ಈ ವಿಷಯ ಸೇರ್ಪಡೆಯಾಗಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಶೇಕಡ 8ರಿಂದ 10.5ರಷ್ಟು ವೇತನ ಹೆಚ್ಚಳ ಮಾಡುವ ನಿರೀಕ್ಷೆಯನ್ನು ನೌಕರರ ವೃಂದ ಇಟ್ಟುಕೊಂಡಿದೆ.

ಲೋಕಸಭಾ ಚುನಾವಣಾ ನೀತಿ ಸಂಹಿತೆ ಘೋಷಣೆ ಆಗುವ ಮುನ್ನ ಸಲ್ಲಿಕೆಯಾಗಿದ್ದ 7ನೇ ವೇತನ ಆಯೋಗದ ಶಿಫಾರಸುಗಳನ್ನು ಸ್ವೀಕರಿಸಿದ್ದ ಮುಖ್ಯಮಂತ್ರಿ ಅವರು, ಕೂಲಂಕುಷವಾಗಿ ಅಧ್ಯಯನ ಮಾಡಿ ವರದಿ ನೀಡಲು ಹಣಕಾಸು ಇಲಾಖೆಗೆ ಸೂಚಿಸಿದ್ದರು. ತನ್ನ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗ ಶಿಫಾರಸು ಜಾರಿಗೊಳಿಸಲು ಮುಖ್ಯಮಂತ್ರಿ ಅವರು ಮುಂಗಡಪತ್ರದಲ್ಲಿ 15,431 ಕೋಟಿ ರೂ. ಮೀಸಲಿರಿಸಿದ್ದಾರೆ.

ಇದರ ಆಧಾರದ ಮೇಲೆ ಹಣಕಾಸು ಆಯೋಗ ಮಾಡಿರುವ ಶೇಕಡ 27.5ರ ಶಿಫಾರಸಿನ ಬದಲು ಶೇಕಡ 25ರಷ್ಟು ಏರಿಕೆಗೆ ಶಿಫಾರಸು ಮಾಡಿದೆ ಎಂದು ಹೇಳಲಾಗಿದೆ. ಬಸವರಾಜ ಬೊಮ್ಮಾಯಿ ಅಧಿಕಾರದಿಂದ ಕೆಳಗಿಳಿಯುವುದಕ್ಕೂ ಮುನ್ನ ಶೇಕಡ 17ರಷ್ಟು ಮಧ್ಯಂತರ ವೇತನ ಹೆಚ್ಚಳ ಮಾಡಿದ್ದರು. ಇನ್ನು ಹಾಲಿ ಸರ್ಕಾರ ಉಳಿದ ಶೇಕಡ 8.5ರಷ್ಟು ಹೆಚ್ಚಳ ಮಾಡಬೇಕಿದೆ.

ಕಳೆದ ಮಾರ್ಚ್ 16ರಂದು ಆಯೋಗ ನೀಡಿದ ಶಿಫಾರಸಿನಂತೆ ಸರ್ಕಾರಿ ನೌಕರರಿಗೆ ಶೇಕಡ 31ರಷ್ಟು ತುಟ್ಟಿಭತ್ಯೆ ವಿಲೀನಗೊಳಿಸಿ ಶೇಕಡ 27.50 ಫಿಟ್‌ಮೆಂಟ್ ನೀಡುವ ಮೂಲಕ ಕನಿಷ್ಠ ಮೂಲ ವೇತನವನ್ನು 10,000 ರೂ.ಗಳಷ್ಟು ಏರಿಕೆ ಮಾಡಲು ಸಲಹೆ ನೀಡಿತ್ತು. ಕನಿಷ್ಠ ಮೂಲವೇತನ 17 ಸಾವಿರ ರೂ.ಗಳಿಂದ 27 ಸಾವಿರ ರೂ.ಗೆ ಏರಿಕೆ ಮಾಡುವಂತೆಯೂ ಗರಿಷ್ಠ ವೇತನ 2,41,200 ರೂ.ಗೆ ನಿಗದಿಪಡಿಸಬೇಕೆಂದು ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ. ಮಾಜಿ ಮುಖ್ಯ ಕಾರ್ಯದರ್ಶಿ ಕೆ. ಸುಧಾಕರ್ ನೇತೃತ್ವದ ವೇತನ ಆಯೋಗವು ನೌಕರರ ಅನುಕೂಲಕ್ಕಾಗಿ 30 ಶಿಫಾರಸುಗಳಲ್ಲಿ ಹಲವು ಸೌಲಭ್ಯಗಳಿಗೆ ಶಿಫಾರಸು ಮಾಡಿದೆ.

ದೇವಾಲಯದ ಬೀಗ ಮುರಿದು ಹುಂಡಿ ಹಣ ಕಳವು

ಮೈಸೂರು, ಜೂ. 12(ಎಸ್‌ಪಿಎನ್)– ದೇವಾಲಯದ ಬಾಗಿಲು ಮುರಿದು ಹುಂಡಿ ಹಣ ದೋಚಿರುವ ಘಟನೆ ಹುಣಸೂರು ತಾಲೂಕಿನ ಸಿರೇನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಸಿರೇನಹಳ್ಳಿ ಭೈರವೇಶ್ವರ ದೇವಾಲಯದಲ್ಲಿ ಬೀಗ ಮುರಿದು ಒಳ ಪ್ರವೇಶಿಸಿರುವ ಕಳ್ಳರು ಹುಂಡಿಯನ್ನು ಒಡೆದು ಚಿಲ್ಲರೆ ಹಣ ಬಿಟ್ಟು, ಹುಂಡಿಯಲ್ಲಿದ್ದ ನೋಟುಗಳನ್ನು ದೋಚಿದ್ದಾರೆ.

ಹುಂಡಿಯಲ್ಲಿ ಸುಮಾರು ಒಂದು ಲಕ್ಷ ಸಂಗ್ರಹವಾಗಿತ್ತೆಂದು ದೇವಾಲಯದ ಮುಖ್ಯಸ್ಥರು ದೂರಿನಲ್ಲಿ ಉಲ್ಲೇಖಿಸಿದ್ದು, ಸ್ಥಳಕ್ಕೆ ಬೆರಳುಮುದ್ರೆ ತಜ್ಞರು ಹಾಗೂ ಶ್ವಾನದಳ ಭೇಟಿ ನೀಡಿ ಪರಿಶೀಲನೆ ನಡೆಸಿದೆ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಂಧ್ರದ ಮುಖ್ಯಮಂತ್ರಿಯಾಗಿ ಚಂದ್ರಬಾಬು ನಾಯ್ಡು, ಸಚಿವರಾಗಿ ಪವನ್ ಕಲ್ಯಾಣ್ ಪ್ರಮಾಣ ವಚನ ಸ್ವೀಕಾರ



ಚಂದ್ರಬಾಬು ನಾಯ್ಡು



ಪವನ್ ಕಲ್ಯಾಣ್

ಅಮರಾವತಿ: ಪ್ರಧಾನಿ ನರೇಂದ್ರ ಮೋದಿ, ಹಿರಿಯ ಬಿಜೆಪಿ ನಾಯಕರು ಮತ್ತು ಕೇಂದ್ರ ಸಚಿವರು ಭಾಗವಹಿಸಿದ್ದ ಸಮಾರಂಭದಲ್ಲಿ ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರು ನಾಲ್ಕನೇ ಅವಧಿಗೆ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದರು.

ಜನಸೇನಾ ಮುಖ್ಯಸ್ಥ ಮತ್ತು ನಟ ಪವನ್ ಕಲ್ಯಾಣ್, ನಾಯ್ಡು ಅವರ ಪುತ್ರ ನಾರಾ ಲೋಕೇಶ್ ಸೇರಿದಂತೆ ಇತರರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಆಂಧ್ರಪ್ರದೇಶದ ರಾಜ್ಯಪಾಲ ಎಸ್ ಅಬ್ದುಲ್ ನಜೀರ್ ಅವರು ಚಂದ್ರಬಾಬು ನಾಯ್ಡು ಮತ್ತಿತರರಿಗೆ ಪ್ರಮಾಣ ವಚನ ಬೋಧಿಸಿದರು. ನಾಯ್ಡು ಮತ್ತು ನಾರಾ ಲೋಕೇಶ್ ಅವರಲ್ಲದೆ ಟಿಡಿಪಿ ಶಾಸಕರಾದ ಕೆ ಅಚ್ಚಂನಾಯ್ಡು, ಪಿ ನಾರಾಯಣ, ಕೊಲ್ಲು ರವೀಂದ್ರ ನಿಮ್ಮಲ ರಾಮ ನಾಯ್ಡು, ಅನಿತಾ ವಂಗಲಪುಡಿ, ಆನಂ ರಾಮ ನಾರಾಯಣ ರೆಡ್ಡಿ, ಕೊಲುಸು ಪಾರ್ಥ ಸಾರಥಿ, ಎನ್‌ಎಂಡಿ ಫಾರೂಕ್, ಪಯ್ಯಾವುಳ ಕೇಶವ್, ಎ. ಸತ್ಯಪ್ರಸಾದ್, ಡೋಲಾ ಶ್ರೀ ಬಾಲ ವೀರಾಂಜನೇಯ ಸ್ವಾಮಿ, ಗೊಟ್ಟಿಪಾಟಿ ರವಿಕುಮಾರ್, ಗುಮ್ಮಿಡಿ ಸಂಧ್ಯಾರಾಣಿ, ಬಿಸಿ ಜನಾರ್ದನರೆಡ್ಡಿ, ಟಿಜಿ ಭರತ್, ಎಸ್ ಸವಿತಾ, ವಾಸಮ್ ಶೆಟ್ಟಿ ಸುಭಾಷ್, ಕೊಂಡಪಲ್ಲಿ ಶ್ರೀನಿವಾಸ್ ಮತ್ತು ಮಂಡಿಪಲ್ಲಿ ರಾಮ್‌ಪ್ರಸಾದ್ ರೆಡ್ಡಿ ಕೂಡ ಪ್ರಮಾಣ ವಚನ ಸ್ವೀಕರಿಸಿದರು.

ಜನಸೇನಾ ಪಕ್ಷದಿಂದ ನಾದೆಂಡ್ಲ ಮನೋಹರ್ ಮತ್ತು ಕಂದುಲ ದುರ್ಗೇಶ್, ಬಿಜೆಪಿ ಶಾಸಕ ಸತ್ಯಕುಮಾರ್ ಯಾದವ್ ಅವರು ಪವನ್ ಕಲ್ಯಾಣ್ ಅವರೊಂದಿಗೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಪ್ರಧಾನಿ ಮೋದಿ ಅಧಿಕಾರ ಸ್ವೀಕರಿಸಿದ ಚಂದ್ರಬಾಬು ನಾಯ್ಡು ಅವರನ್ನು ತಬ್ಬಿ ಶುಭ ಕೋರಿದರು. ನಂತರ, ಪ್ರಧಾನಿ ತೆಲುಗು ಮೆಗಾಸ್ಟಾರ್ ಚಿರಂಜೀವಿ ಮತ್ತು ಪವನ್ ಕಲ್ಯಾಣ್ ಅವರ ಕೈಕುಲುಕಿ ಮಾತನಾಡಿದರು. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಒ ಪನ್ನೀರಸೆಲ್ವಂ, ತಮಿಳು ಸೂಪರ್‌ಸ್ಟಾರ್ ರಜನಿಕಾಂತ್ ಮತ್ತು ಅವರ ಪತ್ನಿ ಲತಾ ಅವರೊಂದಿಗೆ ವೇದಿಕೆಯ ಮೇಲೆ ಸಂಕ್ಷಿಪ್ತ ಸಂಭಾಷಣೆ ನಡೆಸಿದರು.

ಕೇಂದ್ರ ಸಚಿವರಾದ ಅಮಿತ್ ಶಾ, ನಿತಿನ್ ಗಡ್ಕರಿ ಮತ್ತು ಜೆಪಿ ನಡ್ಡಾ, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಉಪಸ್ಥಿತರಿದ್ದರು. ಇದರೊಂದಿಗೆ ಮಾಜಿ ಉಪರಾಷ್ಟ್ರಪತಿ ಎಂ ವೆಂಕಯ್ಯ ನಾಯ್ಡು, ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿ ಎನ್‌ವಿ ರಮಣ ಮತ್ತು ಸೂಪರ್‌ಸ್ಟಾರ್ ರಜನಿಕಾಂತ್ ಹಾಗೂ ಚಿರಂಜೀವಿ ಇದ್ದರು.

ಟಿಡಿಪಿ, ಬಿಜೆಪಿ ಮತ್ತು ಜನಸೇನಾ ಒಳಗೊಂಡಿರುವ ಎನ್‌ಡಿಎ ಆಂಧ್ರ ಪ್ರದೇಶದಲ್ಲಿ ಇತ್ತೀಚೆಗೆ ಏಕಕಾಲದಲ್ಲಿ ನಡೆದ ಲೋಕಸಭೆ ಮತ್ತು ವಿಧಾನ ಸಭೆ ಚುನಾವಣೆಯಲ್ಲಿ ಒಟ್ಟು 164 ವಿಧಾನಸಭೆ ಮತ್ತು ಒಟ್ಟು 21 ಲೋಕಸಭೆಯಲ್ಲಿ ಜಯ ಸಾಧಿಸಿದೆ.

ನೂತನ ಸಂಸದ ಯದುವೀರ್‌ಗೆ ಸ್ವಾಗತ




ಸಂಸದರಾಗಿ ಆಯ್ಕೆಯಾದ ನಂತರ ಮೊದಲ ಬಾರಿಗೆ ಬಿಜೆಪಿ ಕಚೇರಿಗೆ ಭೇಟಿ ನೀಡಿದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಬಿಜೆಪಿ ಹಿರಿಯ ಮುಖಂಡ ಎಸ್.ಜಯಪ್ರಕಾಶ್ (ಜೆಪಿ) ನೇತೃತ್ವದಲ್ಲಿ ಹೂಗುಚ್ಛ ನೀಡಿ ಸ್ವಾಗತಿಸಲಾಯಿತು. ಓಬಿಸಿ ಮೋರ್ಚಾ ಅಧ್ಯಕ್ಷ ಜೋಗಿ ಮಂಜು, ದಿನೇಶ್, ರಾಮೇಗೌಡ, ರಘು, ಮಹೇಶ್‌ಗೌಡ, ಹನುಮಂತೇಗೌಡ, ಮಹೇಶ್ ತಲಕಾಡು, ಅಶೋಕ್ ಇನ್ನಿತರರಿದ್ದರು.

ಬೆಟ್ಟಿಂಗ್‌ನಲ್ಲಿ ಕೇರಂ ಆಡುತ್ತಿದ್ದ 49 ಮಂದಿ ಬಂಧನ

ಮೈಸೂರು, ಜೂ.12(ಎಸ್‌ಪಿಎನ್)– ಪ್ರತ್ಯೇಕ ಮೂರು ಪ್ರಕರಣಗಳಲ್ಲಿ ಅಕ್ರಮವಾಗಿ ಹಣವನ್ನು ಪಣವಾಗಿಟ್ಟು ಕೇರಂ ಆಟದಲ್ಲಿ ತೊಡಗಿದ್ದ 49 ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಬಂಧಿತರಿಂದ 64,007 ರೂ. ನಗದು, 15 ಕೇರಂ ಬೋರ್ಡ್ ಹಾಗೂ ಇತರೆ ಪರಿಕರ ವಶಪಡಿಸಿಕೊಳ್ಳಲಾಗಿದೆ. ಜೂ. 8 ರಂದು ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಮೂರು ಪ್ರತ್ಯೇಕ ಸ್ಥಳಗಳಲ್ಲಿ ಅಕ್ರಮವಾಗಿ ಹಣವನ್ನು ಪಣವಾಗಿಟ್ಟು ಕೇರಂ ಆಟವನ್ನು ಜೂಜಾಟದಂತೆ ಆಡುತ್ತಿದ್ದರು. ಖಚಿತ ಮಾಹಿತಿ ಮೇರೆಗೆ ಸಿಸಿಬಿ ಘಟಕದ ಪೊಲೀಸರು, ದಾಳಿ ನಡೆಸಿ, ನಂತರ ದೇವರಾಜ ಠಾಣೆಯಲ್ಲಿ ದೂರು ದಾಖಲಿಸಿದರು.

ಕುವೈತ್‌ನ ಕಟ್ಟಡದಲ್ಲಿ ಅಗ್ನಿ ಅವಘಡ; ನಾಲ್ವರು ಭಾರತೀಯರು ಸೇರಿ 41 ಮಂದಿ ಸಜೀವ ದಹನ



ಮಂಗಾಫ್(ಕುವೈತ್): ಕುವೈತ್‌ನ ದಕ್ಷಿಣ ನಗರವಾದ ಮಂಗಾಫ್‌ನ ಕಟ್ಟಡವೊಂದರಲ್ಲಿ ಸಂಭವಿಸಿದ ಅಗ್ನಿ ದುರಂತದಲ್ಲಿ ಕನಿಷ್ಠ 41 ಮಂದಿ ಸಜೀವ ದಹನವಾಗಿದ್ದಾರೆ ಎಂದು ದೇಶದ ಸರ್ಕಾರಿ ಮಾಧ್ಯಮ ತಿಳಿಸಿದೆ.

ವರದಿಗಳ ಪ್ರಕಾರ, ಈ ದುರಂತ ಘಟನೆಯಲ್ಲಿ ಕನಿಷ್ಠ ನಾಲ್ವರು ಭಾರತೀಯರು ಸಹ ಸಾವನ್ನಪ್ಪಿದ್ದಾರೆ. ಕಟ್ಟಡದಲ್ಲಿ ಕೇರಳ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದರು ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಮೃತರಲ್ಲಿ ಇಬ್ಬರು ತಮಿಳುನಾಡಿನವರು ಮತ್ತು ಇಬ್ಬರು ಉತ್ತರ ಭಾರತದವರು. ಆದಾಗ್ಯೂ, ಇನ್ನೂ ಅಧಿಕಾರಿಗಳಿಂದ ಅಧಿಕೃತ ಸ್ಪಷ್ಟನೆ ಸಿಕ್ಕಿಲ್ಲ. ಕುವೈತ್ ಆರೋಗ್ಯ ಸಚಿವಾಲಯ ಹೊರಡಿಸಿದ ಹೇಳಿಕೆಯ ಪ್ರಕಾರ, ಎಲ್ಲಾ ಗಾಯಾಳುಗಳನ್ನು ಚಿಕಿತ್ಸೆಗಾಗಿ ಹತ್ತಿರದ ಹಲವಾರು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಅವರಲ್ಲಿ ಕೆಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದುಬಂದಿದೆ. ಅಗ್ನಿ ದುರಂತದಲ್ಲಿ ಗಾಯಗೊಂಡವರಿಗೆ ಸರಿಯಾದ ವೈದ್ಯಕೀಯ ಸೇವೆಯನ್ನು ಒದಗಿಸಲು ವೈದ್ಯಕೀಯ ತಂಡಗಳು ಎಲ್ಲ ಪ್ರಯತ್ನಗಳನ್ನು ಮಾಡುತ್ತಿವೆ ಎಂದು ಸಚಿವಾಲಯ ಹೇಳಿದೆ.

ವರದಿಗಳ ಪ್ರಕಾರ, ಬುಧವಾರ ಮುಂಜಾನೆ 4:30ಕ್ಕೆ ಕಾರ್ಮಿಕ ಶಿಬಿರದ ಅಡುಗೆಮನೆಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕೆಲವರು ಬೆಂಕಿಯನ್ನು ನೋಡಿ ಅಪಾರ್ಟ್‌ಮೆಂಟ್‌ಗಳಿಂದ ಹಾರಿ ಸಾವನ್ನಪ್ಪಿದರೆ, ಇನ್ನು ಕೆಲವರು ಸುಟ್ಟಗಾಯ ಮತ್ತು ಹೊಗೆಯಿಂದ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ.

ಅಧಿಕಾರ ವಹಿಸಿಕೊಂಡ ನಂತರ ಕರ್ನಾಟಕಕ್ಕೆ ಸಂಬಂಧಿಸಿದ ಮೊದಲ ಕಡತಕ್ಕೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಸಹಿ



ಬೆಂಗಳೂರು, ಜೂ.12– ಕೇಂದ್ರ ಉಕ್ಕು ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಹೆಚ್.ಡಿ. ಕುಮಾರಸ್ವಾಮಿ ಅವರು ಕರ್ನಾಟಕಕ್ಕೆ ಸಂಬಂಧಿಸಿದ ಮೊದಲ ಕಡತಕ್ಕೆ ಸಹಿ ಹಾಕಿದ್ದಾರೆ. ಈ ಖುಷಿಯನ್ನು ತಮ್ಮ ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಅವರು ಕೇಂದ್ರದ ಸಚಿವರಾಗಿ ಅಧಿಕಾರ ವಹಿಸಿಕೊಂಡ ನಂತರ ಮೊದಲ ಕಡತಕ್ಕೆ ಸಹಿ ಹಾಕಿದೆ. ಅದು ಕರ್ನಾಟಕಕ್ಕೆ ಸಂಬಂಧಿಸಿದ ಕಡತ ಎನ್ನುವುದು ವಿಶೇಷ ಎಂದು ಬರೆದುಕೊಂಡಿದ್ದಾರೆ.

ದೇವದಾರಿ ಕಬ್ಬಿಣದ ಅದಿರು ಗಣಿ ಕಾರ್ಯಾಚರಣೆಗಾಗಿ ಕೆಐಓಸಿಎಲ್ ಲಿಮಿಟೆಡ್‌ನ ಮೊದಲ ಕಡತಕ್ಕೆ ಸಹಿ ಹಾಕಿದ್ದಾರೆ. ಈ ವೇಳೆ ಉಕ್ಕು ಸಚಿವಾಲಯದ ಕಾರ್ಯದರ್ಶಿ ನಾಗೇಂದ್ರನಾಥ್ ಸಿನ್ಹಾ ಉಪಸ್ಥಿತರಿದ್ದರು.

ಭವಾನಿ ಕಾರು ಚಾಲಕನ ಮನೆಯ ಮೇಲೆ ಕಲ್ಲು ತೂರಾಟ

ಹೊಳೆನರಸೀಪುರ,ಜೂ.12– ಮಹಿಳೆಯರ ಮೇಲಿನ ಲೈಂಗೀಕ ದೌರ್ಜನ್ಯ ಪ್ರಕರಣದಲ್ಲಿ ಮಹಿಳೆಯ ಅಪಹರಣ ಆರೋಪದಡಿ ತಲೆಮರೆಸಿಕೊಂಡಿರುವ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಹೆಚ್.ಡಿ.ರೇವಣ್ಣ ಅವರ ಪತ್ನಿ ಭವಾನಿ ಅವರ ಕಾರು ಚಾಲಕ ಅಜಿತ್ ಮನೆಯ ಮೇಲೆ ಇಂದು ರಾತ್ರಿ ಕಲ್ಲು ತೂರಾಟ ನಡೆಸಲಾಗಿದೆ.

ಇಂದು ರಾತ್ರಿ 8 ಗಂಟೆ ಸುಮಾರಿಗೆ ಹೊಳೆನರಸೀಪುರ ತಾಲೂಕು ಮೂಡಲಹಿಪ್ಪೆ ಗ್ರಾಮದಲ್ಲಿರುವ ಅಜಿತ್ ಮನೆಯ ಮೇಲೆ ಮೂವರು ಅಪರಿಚಿತರು ಕಲ್ಲು ತೂರಾಟ ನಡೆಸಿದ್ದಾರೆ. ಈ ವೇಳೆ ಮನೆಯಲ್ಲಿದ್ದ ಅಜಿತ್ ಕುಟುಂಬ ಸದಸ್ಯರು ಭಯಭೀತರಾಗಿ ಮನೆಯಿಂದ ಹೊರ ಓಡಿ ಬಂದಿದ್ದಾರೆ. ಯಾರಿಗೂ ಗಾಯಗಳಾಗಿಲ್ಲ. ಈ ಸಂಬಂಧ ಹೊಳೆನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೂತನ ಎಂಎಲ್‌ಸಿ ಡಾ. ಯತೀಂದ್ರಗೆ ಸ್ವಾಗತ...



ವಿಧಾನಪರಿಷತ್ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದ ನಂತರ ಮೊದಲ ಬಾರಿಗೆ ಮೈಸೂರಿಗೆ ಆಗಮಿಸಿದ ಡಾ. ಯತೀಂದ್ರ ಅವರನ್ನು ಕಾಂಗ್ರೆಸ್ ಮುಖಂಡರಾದ ಟಿ.ಶ್ರೀನಿವಾಸ್, ನಜರ್‌ಬಾದ್ ನಟರಾಜ್ ಹೂಗುಚ್ಛ ನೀಡಿ, ಸ್ವಾಗತಿಸಿದರು.

ಒಡಿಶಾ ಮುಖ್ಯಮಂತ್ರಿಯಾಗಿ ಮೋಹನ್ ಚರಣ್ ಮಾಝಿ ಪ್ರಮಾಣ



ಭುವನೇಶ್ವರ: ಬುಡಕಟ್ಟು ಜನಾಂಗದ ನಾಯಕ ಮೋಹನ್ ಚರಣ್ ಮಾಝಿ ಅವರು ಇಂದು (ಬುಧವಾರ) ಒಡಿಶಾದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ಭುವನೇಶ್ವರದ ಜನತಾ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಮೋಹನ್ ಚರಣ್ ಮಾಝಿ ಅವರಿಗೆ ರಾಜ್ಯಪಾಲರು ಪ್ರಮಾಣವಚನ ಬೋಧಿಸಿದ್ದಾರೆ. ಇದೇ ವೇಳೆ ಉಪ ಮುಖ್ಯಮಂತ್ರಿಗಳಾಗಿ ಕೆ.ವಿ.ಸಿಂಗ್ ದೇವ್ ಮತ್ತು ಪ್ರವತಿ ಪರಿದಾ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್‌ಸಿಂಗ್, ಒಡಿಶಾದ ಮಾಜಿ ಸಿಎಂ ನವೀನ್ ಪಟ್ನಾಯಕ್, ಅಸ್ಸಾಂ ಸಿಎಂ ಹಿಮಂತಬಿಸ್ವಾ ಶರ್ಮಾ ಸೇರಿದಂತೆ ಗಣ್ಯರು ಭಾಗವಹಿಸಿದ್ದರು. 147 ಸದಸ್ಯ ಬಲದ ವಿಧಾನಸಭೆಗೆ ಈಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 78 ಸ್ಥಾನಗಳನ್ನು ಗಳಿಸಿ ಸ್ಪಷ್ಟ ಬಹುಮತ ಪಡೆದರೆ, ಅಧಿಕಾರ ಕಳೆದುಕೊಂಡ ಬಿಜೆಡಿ 51 ಸ್ಥಾನಗಳಿಸಲಷ್ಟೇ ಶಕ್ತವಾಗಿತ್ತು. ಮೋಹನ್ ಚರಣ್ ಮಾಝಿ ಅವರು ಒಡಿಶಾದಲ್ಲಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿಯ ಪ್ರಥಮ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು